# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಸೋಮವಾರ, ಏಪ್ರಿಲ್ 03, 2023

ಸಂಪುಟ : 49 ಸಂಚಿಕೆ : 320 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


## ಇಂದು ರಾಹುಲ್ ಶಿಕ್ಷೆ ವಿರುದ್ಧ ಮೇಲ್ಮನವಿ

ಸೂರತ್, ಏ. 2 – ಮಾನಹಾನಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮೆಟ್ರೋಪಾಲಿಟನ್ ನ್ಯಾಯಾಲಯ ವಿಧಿಸಿರುವ ಎರಡು ವರ್ಷಗಳ ಜೈಲು ಶಿಕ್ಷೆಯನ್ನು ಪ್ರಶ್ನಿಸಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೋಮವಾರ ಮೇಲ್ಮನವಿ ಸಲ್ಲಿಸಲಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಮಧ್ಯಾಹ್ನ 3 ಗಂಟೆಗೆ ಸೂರತ್‌ನ ಸೆಷನ್ಸ್ ನ್ಯಾಯಾಲಯದಲ್ಲಿ ರಾಹುಲ್ ಗಾಂಧಿ ಮೇಲ್ಮನವಿ ಅರ್ಜಿ ದಾಖಲಿಸಲಿದ್ದಾರೆ ಎಂದು ಅವರ ಪರ ವಕೀಲ ಕಿರಿತ್ ಪಾನ್ವಾಲ ತಿಳಿಸಿದ್ದಾರೆ.

ರಾಹುಲ್ ಗಾಂಧಿ ಸೋಮವಾರ ಮಧ್ಯಾಹ್ನ ಆಗಮಿಸುವ ವೇಳೆ ಹಿರಿಯ ಕಾಂಗ್ರೆಸ್ ನಾಯಕರೂ ಸೂರತ್‌ನಲ್ಲಿ ಉಪಸ್ಥಿತರಿರಲಿದ್ದಾರೆ ಎಂದು ಮೂಲಗಳು ಹೇಳಿವೆ.

ಕಳೆದ ಮಾರ್ಚ್ 23ರಂದು ಸೂರತ್ ನ್ಯಾಯಾಲಯ ರಾಹುಲ್ ಗಾಂಧಿ ಅವರಿಗೆ ಮಾನಹಾನಿ ಪ್ರಕರಣದಲ್ಲಿ ಎರಡು ವರ್ಷಗಳ ಜೈಲು ಶಿಕ್ಷೆ ವಿಧಿಸಿತ್ತು. ಇದರ ವಿರುದ್ಧ ಮೇಲ್ಮನವಿ ಸಲ್ಲಿಸಲು ಅವರಿಗೆ 30 ದಿನಗಳ ಕಾಲಾವಕಾಶ ನೀಡಿ, ಶಿಕ್ಷೆಗೆ ತಡೆ ಹಾಕಲಾಗಿತ್ತು. ಈ ತೀರ್ಪಿನ ಕಾರಣದಿಂದಾಗಿ ರಾಹುಲ್ ಗಾಂಧಿ ಅವರು ಲೋಕಸಭಾ ಸದಸ್ಯತ್ವದಿಂದ ಅನರ್ಹರಾಗಿದ್ದರು.

## ಮರು ಬಳಕೆ ರಾಕೆಟ್ ಉಡಾವಣೆ ಯಶಸ್ವಿ

ಬೆಂಗಳೂರು, ಏ. 2 – ಮರು ಬಳಕೆ ರಾಕೆಟ್ ಉಡಾವಣೆಯಲ್ಲಿ ಭಾರತೀಯ ಬಾಹ್ಯಾಕಾಶ ಸಂಸ್ಥೆ ಇಸ್ರೋ ಯಶಸ್ಸು ಕಂಡಿದೆ.

ಚಿತ್ರದುರ್ಗದ ಏರೋನಾಟಿಕಲ್ ಟೆಸ್ಟ್ ರೇಂಜ್ (ಎ.ಟಿ.ಆರ್.)ನಲ್ಲಿ ಲಾಂಚ್ ವೆಹಿಕಲ್ ಆಟೋನಮಸ್ ಲ್ಯಾಂಡಿಂಗ್ ಮಿಷನ್ (ಆರ್.ಎಲ್.ವಿ. ಎಲ್.ಇ.ಎಕ್ಸ್.) ಪರೀಕ್ಷೆ ನಡೆಸಲಾಗಿತ್ತು.

ವಾಯುಪಡೆ ಹಾಗೂ ರಕ್ಷಣಾ ಬಾಹ್ಯಾಕಾಶ ಸಂಶೋಧನಾ ಸಂಘಟನೆ ಸಂಯುಕ್ತಾಶ್ರಯದಲ್ಲಿ ಈ ಪ್ರಯೋಗ ನಡೆಸಲಾಗಿತ್ತು.



ಚಿತ್ರ: ರಫೀಕ್, ಜನತಾವಾಣಿ

**ಬಿಸಿಲಿಗೆ ಅರಳಿದ ಕೊಡೆಗಳು** ಬೇಸಿಗೆ ಬಿಸಿಲು ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಇದೆ. ಬಿಸಿಲಿನ ತಾಪದಿಂದ ರಕ್ಷಿಸಿಕೊಳ್ಳಲು ಯುವ ಜನತೆ ಕೊಡೆಗಳ ಮೊರೆ ಹೋಗಿದೆ. ದಾವಣಗೆರೆಯ ಎವಿಕೆ ರಸ್ತೆಯಲ್ಲಿ ಕಂಡು ಬಂದ ಚಿತ್ರವಿದು.

## ನಿಷೇಧದ ನಡುವೆಯೂ ಇ-ಸಿಗರೇಟ್ ವ್ಯಾಪಕ

ನವದೆಹಲಿ, ಏ. 2 – ನಿಷೇಧದ ಹೊರತಾಗಿಯೂ ಇ-ಸಿಗರೇಟ್‌ಗಳ ಮಾರಾಟ ವ್ಯಾಪಕವಾಗಿದೆ. ವಯೋಮಿತಿಯನ್ನು ಲೆಕ್ಕಿಸದೇ ಇವುಗಳನ್ನು ಮಾರಲಾಗುತ್ತಿದೆ ಎಂದು ಸಮೀಕ್ಷೆಯೊಂದು ತಿಳಿಸಿದೆ.

ಇ-ಸಿಗರೇಟುಗಳು ಬ್ಯಾಟರಿ ಆಧರಿತ ಉಪಕರಣಗಳಾಗಿವೆ. ಇವುಗಳು ದ್ರವ ಇಲ್ಲವೇ ಘನ ರೂಪದಲ್ಲಿರುವ ನಿಕೋಟಿನ್ ಮಿಶ್ರಿತ ವಸ್ತುಗಳನ್ನು ಬಿಸಿ ಮಾಡುವ ಮೂಲಕ ಸಿಗರೇಟ್ ರೀತಿಯಲ್ಲಿ ಕೆಲಸ ಮಾಡುತ್ತವೆ. ನಿಕೋಟಿನ್ ಅತ್ಯಂತ ವ್ಯಸನಕಾರಿಯಾಗಿದೆ.

ಕರ್ನಾಟಕ, ಅಸ್ಸಾಂ, ಗೋವ, ಹರಿಯಾಣ, ಉತ್ತರ ಪ್ರದೇಶ, ತೆಲಂಗಾಣ ಹಾಗೂ ದೆಹಲಿಗಳಲ್ಲಿ ಸಮೀಕ್ಷೆ ನಡೆಸಲಾಗಿತ್ತು. ಈ ಕುರಿತ ಮಾಹಿತಿಯನ್ನು



ಕೇಂದ್ರ ಆರೋಗ್ಯ ಸಚಿವಾಲಯದ ಜೊತೆ ಹಂಚಿಕೊಳ್ಳಲಾಗಿದೆ.

ಸಾಮಾಜಿಕ ಜಾಲತಾಣಗಳು, ವೆಬ್ ತಾಣಗಳ ಮೂಲಕ ವಯೋಮಿತಿಯ ಪರಿಶೀಲನೆ ಇಲ್ಲದೇ ಇ-ಸಿಗರೇಟ್‌ಗಳ ಮಾರಾಟ ನಡೆಯುತ್ತಿದೆ. ತಂಬಾಕು ಅಂಗಡಿಗಳಲ್ಲೂ ಇವುಗಳನ್ನು ಮಾರಲಾಗುತ್ತಿದೆ ಎಂದು ಸಮೀಕ್ಷೆ ತಿಳಿಸಿದೆ.

ಇ-ಸಿಗರೇಟ್ ನಿಷೇಧವಾಗಿರುವ ಬಗ್ಗೆ ಬಹುತೇಕ ಮಾರಾಟಗಾರರಿಗೆ ತಿಳುವಳಿಕೆ ಇಲ್ಲ. ಅವರು ಇ-ಸಿಗರೇಟ್‌ಗಳನ್ನು ಬಹಿರಂಗವಾಗಿ ಮಾರುತ್ತಿದ್ದಾರೆ. ಇವುಗಳಲ್ಲಿ ಬಹುತೇಕವು ಚೀನಾದಲ್ಲಿ ಉತ್ಪಾದಿತವಾದವು.

ವಾಲಂಟರಿ ಹೆಲ್ತ್ ಅಸೋಸಿಯೇಷನ್ ಆಫ್ ಇಂಡಿಯಾ, ವಾಯ್ಸ್, ನಡ್ಜ ಇಂಡಿಯಾ, ನ್ಯಾಷನಲ್ ಲಾ ಸ್ಕೂಲ್ ಯೂನಿವರ್ಸಿಟಿ - ಬೆಂಗಳೂರು ಹಾಗೂ ಕರ್ನಾಟಕ ನೋ ಫಾರ್ ಟೊಬ್ಯಾಕೋ ಸಂಸ್ಥೆಗಳು ಜಂಟಿಯಾಗಿ ಈ ಸಮೀಕ್ಷೆ ನಡೆಸಿವೆ.

2019ರಲ್ಲಿ ಕೇಂದ್ರ ಸರ್ಕಾರ ಇ-ಸಿಗರೇಟ್‌ಗಳ ಮೇಲೆ ನಿಷೇಧ ಹೇರಿತ್ತು. ನಿಷೇಧಿಸಿ ನಾಲ್ಕು ವರ್ಷಗಳಾದರೂ ಮಾರಾಟ ನಿಂತಿಲ್ಲ ಎಂದು ತಿಳಿಸಲಾಗಿದೆ. ಆರು ರಾಜ್ಯಗಳು ಹಾಗೂ ದೆಹಲಿಯ ನೂರು ತಾಣಗಳಲ್ಲಿ ಇ-ಸಿಗರೇಟ್ (3ನೇ ಪುಟಕ್ಕೆ)

## ತೈಲ ಉತ್ಪಾದನೆ ಕಡಿತಕ್ಕೆ ಸೌದಿ ನಿರ್ಧಾರ

ದುಬೈ, ಏ. 2 – ಬರುವ ಮೇ ತಿಂಗಳಿನಿಂದ 2023ರ ಅಂತ್ಯದವರೆಗೆ ಪ್ರತಿದಿನ ತೈಲ ಉತ್ಪಾದನೆಯನ್ನು 5 ಲಕ್ಷ ಬ್ಯಾರಲ್ ಕಡಿತಗೊಳಿಸುವುದಾಗಿ ಸೌದಿ ಅರೇಬಿಯ ತಿಳಿಸಿದೆ.

ಇದರಿಂದಾಗಿ ತೈಲ ಬೆಲೆ ಏರಿಕೆಯಾಗುವ ಸಾಧ್ಯತೆ ಇದೆ. ಉಕ್ರೇನ್ ಸಮರದ ಕಾರಣದಿಂದಾಗಿ ಈಗಾಗಲೇ ಹಣದುಬ್ಬರ ಹೆಚ್ಚಾಗಿದೆ. ಸೌದಿ ನಿರ್ಧಾರದಿಂದ ಹಣದುಬ್ಬರ ಇನ್ನಷ್ಟು ತೀವ್ರವಾಗಲಿದೆ.

ಕೆಲ ತೈಲ ಉತ್ಪಾದನಾ ದೇಶಗಳ ಸಮನ್ವಯದೊಂದಿಗೆ ಈ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಸೌದಿ ಇಂಧನ ಸಚಿವರು ತಿಳಿಸಿದ್ದಾರೆ. ಆದರೆ, ಆ ದೇಶಗಳ ಹೆಸರುಗಳನ್ನು ಸಚಿವಾಲಯ ಬಹಿರಂಗ ಪಡಿಸಿಲ್ಲ.

ಕಳೆದ ವರ್ಷ ಅಕ್ಟೋಬರ್ ತಿಂಗಳಲ್ಲಿ ಸೌದಿ ಅರೇಬಿಯಾ ತೈಲ ಉತ್ಪಾದನೆಯನ್ನು



ಕಡಿತಗೊಳಿಸಿತ್ತು. ಈ ಕ್ರಮ ಅಮೆರಿಕದ ಜೋ ಬಿಡನ್ ಸರ್ಕಾರದ ಆಕ್ರೋಶಕ್ಕೂ ಕಾರಣವಾಗಿತ್ತು.

ತೈಲ ಮಾರುಕಟ್ಟೆಯಲ್ಲಿ ಸ್ಥಿರತೆ ತರುವ ಸಲುವಾಗಿ ಉತ್ಪಾದನಾ ಕಡಿತದ ಕ್ರಮ ತೆಗೆದುಕೊಳ್ಳುತ್ತಿರುವುದಾಗಿ ಸಚಿವಾಲಯ ಹೇಳಿದೆ. ಸೌದಿ ಅರೇಬಿಯ (2ನೇ ಪುಟಕ್ಕೆ)

## ಗುಜರಾತ್ ಹತ್ಯಾಕಾಂಡ ಎಲ್ಲ 26 ಆರೋಪಿಗಳು ದೋಷಮುಕ್ತ

ಗೋಧ್ರಾ, ಏ. 2 – ಗುಜರಾತ್ ಹತ್ಯಾಕಾಂಡದ ವೇಳೆ ಕಲೋಲ್ ಎಂಬಲ್ಲಿ ನಡೆಸಲಾದ ಸಾಮೂಹಿಕ ಅತ್ಯಾಚಾರ ಹಾಗೂ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಎಲ್ಲಾ 26 ಆರೋಪಿಗಳನ್ನು ನ್ಯಾಯಾಲಯ ಖುಲಾಸೆಗೊಳಿಸಿದೆ. ಸಾಕ್ಷ್ಯಗಳ ಕೊರತೆಯಿಂದಾಗಿ 20 ವರ್ಷಗಳ ಹಳೆಯ ಪ್ರಕರಣದಲ್ಲಿ ಎಲ್ಲರೂ ದೋಷಮುಕ್ತರಾಗಿದ್ದಾರೆ.

ಪ್ರಕರಣದಲ್ಲಿ 39 ಆರೋಪಿಗಳಿದ್ದರು. 13 ಜನರು ವಿಚಾರಣೆಯ ವೇಳೆ ಸಾವನ್ನಪ್ಪಿದ್ದಾರೆ. ಹಲೋಲ್‌ನ (2ನೇ ಪುಟಕ್ಕೆ)

## ಠಾಕ್ರೆ ವಿರುದ್ಧದ ರಾಣೆ ಹೇಳಿಕೆ ದ್ವೇಷವಲ್ಲ : ಕೋರ್ಟ್ ತೀರ್ಪು

ಮುಂಬೈ, ಏ. 2–ಮಹಾರಾಷ್ಟ್ರದ ಆಗಿನ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ವಿರುದ್ಧ ಕೇಂದ್ರ ಸಚಿವ ನಾರಾಯಣ ರಾಣೆ ನೀಡಿದ ಹೇಳಿಕೆ 'ಅಸಂಸದೀಯ'. ಆದರೆ, ಇದು ದ್ವೇಷಕ್ಕೆ ಉತ್ತೇಜನ ನೀಡಿದಂತಲ್ಲ, ಇದು ಯಾವುದೇ ಸಮುದಾಯವನ್ನು ಗುರಿಯಾಗಿಟ್ಟುಕೊಂಡದ್ದೂ ಅಲ್ಲ ಎಂದು ಮಹಾರಾಷ್ಟ್ರದ ರಾಯಗಢ ನ್ಯಾಯಾಲಯ ತೀರ್ಪು ನೀಡಿದೆ.

ಮುಖ್ಯಮಂತ್ರಿಯಾಗಿದ್ದ ಸಮಯದಲ್ಲಿ ಉದ್ಧವ್ ಠಾಕ್ರೆ (3ನೇ ಪುಟಕ್ಕೆ)

## ರೈತರ, ಮಹಿಳೆಯರ, ಯುವಕರ ಏಳಿಗೆಗೆ ದುಡಿಯುವೆ

ಮಾಯಕೊಂಡ, ಏ. 2 – ರೈತರ, ಮಹಿಳೆಯರ ಮತ್ತು ವಿದ್ಯಾರ್ಥಿಗಳ ಕಲ್ಯಾಣಕ್ಕೆ ಹಲವು ಯೋಜನೆ ಹಾಕಿಕೊಂಡು ಶ್ರಮಿಸುವುದಾಗಿ ಕಲ್ಯಾಣ ಕರ್ನಾಟಕ ರಾಜ್ಯ ಪ್ರಗತಿ ಪಕ್ಷದ ಸಂಸ್ಥಾಪಕ ಗಾಲಿ ಜನಾರ್ದನ ರೆಡ್ಡಿ ಭರವಸೆ ನೀಡಿದರು.

ಇಲ್ಲಿನ ಕೆಪಿಎಸ್ ಮೈದಾನದಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು.

ರೈತರಿಗೆ ಬಸವೇಶ್ವರ ರೈತ ಯೋಜನೆಯಡಿ, ಪ್ರತೀ ರೈತನ ಖಾತೆಗೆ 15 ಸಾವಿರ ಹಾಕುವೆ. ಜಮೀನಿಗೆ ಬೇಕಾದಷ್ಟು ಬಿತ್ತನೆ ಬೀಜ, ಗೊಬ್ಬರವನ್ನು ರೈತರ ಮನೆಗೆ ಸರ್ಕಾರಿ ವಾಹನದಲ್ಲಿ ಮನೆ ಬಾಗಿಲಿಗೆ ತಲುಪಿಸಲಾಗುತ್ತದೆ.

ಬಡತನ ರೇಖೆಗಿಂತ ಕೆಳಗಿರುವ ಮಕ್ಕಳಿಗೆ ಎಲ್‌ಕೆಜಿ ಯಿಂದ ಉನ್ನತ ಶಿಕ್ಷಣದ ಖರ್ಚನ್ನು ತಾಯಿಂದಿರ ಖಾತೆಗೆ ಜಮಾ ಮಾಡಲಾಗುತ್ತದೆ.

ಕಿತ್ತೂರು ಚನ್ನಮ್ಮ ಮತ್ತು ಒನಕೆ ಓಬವ್ವ ಯೋಜನೆಯಡಿ ದುಡಿಯುವ ಮಹಿಳೆಯರಿಗೆ ಮತ್ತು ವಿದ್ಯಾರ್ಥಿಗಳಿಗೆ ಉಚಿತ ಬಸ್ ಪ್ರಯಾಣ ಅವಕಾಶ. ನಿರುದ್ಯೋಗಿಗಳಿಗೆ 2500 ಮಾಸಿಕ ವೇತನ ನೀಡಲಾಗುತ್ತದೆ. ಗಂಭೀರ ಕಾಯಿಲೆಗಳಿಗೆ 20 ಲಕ್ಷ ರವರೆಗೆ ವೆಚ್ಚ ಭರಿಸಲಾಗುತ್ತದೆ. ಪ್ರತಿಷ್ಠಿತ ಆಸ್ಪತ್ರೆಯಲ್ಲಿ ಚಿಕಿತ್ಸೆ ಒದಗಿಸಲಾಗುತ್ತದೆ.

ಸ್ತ್ರೀ ಶಕ್ತಿ ಸಂಘಗಳಿಗೆ ಹೊಲಿಗೆ ಮತ್ತಿತರ ತಾಂತ್ರಿಕ ತರಬೇತಿ ನೀಡಲು ಯೋಜನೆ ರೂಪಿಸಲಾಗುತ್ತದೆ ಎಂದರು.

ಮುಂಬರುವ ದಿನಗಳಲ್ಲಿ ನನ್ನ ನೆರವಿಲ್ಲದೇ ಯಾವುದೇ ಸರ್ಕಾರ ಬರುವುದಿಲ್ಲ, ನಾನು ಯಾವ ಪಕ್ಷದಲ್ಲಿ ದುಡಿದಿದ್ದೆನೋ ಅವರು ಗೆದ್ದ ನಂತರ ನನಗೆ ಮಾಡಿದ ಅನ್ಯಾಯ ನೋಡಿದ್ದೀರಿ. ಬಳ್ಳಾರಿ ದಾವಣಗೆರೆಯಲ್ಲಿ ಪಕ್ಷ ಸಂಘಟನೆಯಾಗಿದೆ.

ಮಾಯಕೊಂಡದಲ್ಲಿ ರೂ. 5 ಕೋಟಿ ವೆಚ್ಚದ ತರಬೇತಿ ಕೇಂದ್ರವನ್ನು ಸ್ವಂತ ಹಣದಲ್ಲಿಯೇ ತೆರೆಯುವೆ ಎಂದು ಭರವಸೆ ನೀಡಿದರು.



**ಮಾಯಕೊಂಡದ ಕಾರ್ಯಕ್ರಮದಲ್ಲಿ ಕಲ್ಯಾಣ ಕರ್ನಾಟಕ ರಾಜ್ಯ ಪ್ರಗತಿ ಪಕ್ಷದ ಸಂಸ್ಥಾಪಕ ಗಾಲಿ ಜನಾರ್ದನ ರೆಡ್ಡಿ ಭರವಸೆ**

**ಅಧಿಕಾರಿಗಳ ವಿರುದ್ಧ ಚುನಾವಣಾ ಆಯೋಗಕ್ಕೆ ದೂರು: ರೆಡ್ಡಿ ಕಿಡಿ**

ಈ ಕಾರ್ಯಕ್ರಮಕ್ಕೆ ಚುನಾವಣಾಧಿಕಾರಿಗಳು ತೊಂದರೆ ಮಾಡಿದರು, ಇದು ತಪ್ಪು. ರಾತ್ರಿ ಹತ್ತರವರೆಗೆ ನೀತಿ ಸಂಹಿತೆಯಡಿ ಸಭೆ ಮಾಡಲು ಅವಕಾಶವಿದೆ. ತಪ್ಪೆಸಗಿದವರ ವಿರುದ್ಧ ಎಲೆಕ್ಷನ್ ಕಮೀಷನ್‌ಗೆ ದೂರು ನೀಡುವೆ. ನನಗೆ ಹಿಂದೆ ಹೀಗೆಯೇ ಮಾಡಿದ ಅಮೃತ್ ಪಾಲ್ ಬಳ್ಳಾರಿಯಲ್ಲಿ ಶಿಕ್ಷೆ ಕೊಡಿಸಿದೆ. ತಪ್ಪೆಸಗಿದವರನ್ನು ಬಿಡುವುದಿಲ್ಲ ಎಂದು ಕಿಡಿಕಾರಿದರು.

ಅಭ್ಯರ್ಥಿ ಶಾಂತಾಬಾಯಿ ಮಾತನಾಡಿ, ಜನರಿಗಾಗಿ ಜನಾರ್ದನ ರೆಡ್ಡಿ ಜನರಿಗಾಗಿಯೇ ಪಕ್ಷ ಕಟ್ಟಿದ್ದಾರೆ ಎಂದರು. ಜನಾರ್ದನ ರೆಡ್ಡಿ ಅವರನ್ನು ಅಭಿಮಾನಿಗಳು ಬೃಹತ್ ಸೇಬು, ಹೂವಿನಹಾರ ಹಾಕಿ ಸ್ವಾಗತಿಸಿದರು. ಕಲ್ಯಾಣ ಕರ್ನಾಟಕ ಪ್ರಗತಿ ಪಕ್ಷದ ಪದಾಧಿಕಾರಿಗಳು ವೇದಿಕೆಯಲ್ಲಿದ್ದರು.

## ಸೈಬರ್ ಅಪರಾಧ ತಡೆಗೆ ಜಾಗೃತಿ ಅಗತ್ಯ

### ಪೊಲೀಸ್ ಧ್ವಜ ದಿನಾಚರಣೆಯಲ್ಲಿ ಹೆಚ್. ಹಾರೂನ್ ರಶೀದ್ ಅಭಿಮತ



ದಾವಣಗೆರೆ, ಏ. 2- ಸೈಬರ್ ಅಪರಾಧಗಳ ಉಲ್ಲಂಘನೆ ಹೆಚ್ಚಾಗಿದ್ದು, ಪೊಲೀಸ್ ಅಧಿಕಾರಿಗಳು ಶಾಲಾ-ಕಾಲೇಜುಗಳಲ್ಲಿ ಸೈಬರ್ ಅಪರಾಧ ತಡೆಗಟ್ಟುವಿಕೆ ಮತ್ತು ಸಂಚಾರಿ ನಿಯಮಗಳ ಪಾಲನೆ ಬಗ್ಗೆ ಜಾಗೃತಿ ಮೂಡಿಸುವ ಅಗತ್ಯವಿದ್ದು, ಇದಕ್ಕೆ ಸಾರ್ವಜನಿಕರು ನಿವೃತ್ತ ಸಹಾಯಕ ಉಪ ನಿರೀಕ್ಷಕ ಹೆಚ್. ಹಾರೂನ್ ರಶೀದ್ ಮನವಿ ಮಾಡಿದರು.

ದಾವಣಗೆರೆ ಜಿಲ್ಲಾ ಪೊಲೀಸ್ ವತಿಯಿಂದ ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ಹಮ್ಮಿಕೊಂಡಿದ್ದ ಪೊಲೀಸ್ ಧ್ವಜ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಾಯಕವೇ ಕೈಲಾಸ ಎನ್ನುವಂತೆ ಹಗಲು-ರಾತ್ರಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಇನ್ನೂ ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡಲು ಸಾರ್ವಜನಿಕರ ಸಹಕಾರ ಅಗತ್ಯ ಎಂದು ಹೇಳಿದರು.

ನಾನು ಸೇವೆಯಲ್ಲಿದ್ದಾಗ ಹಿರಿಯ ಅಧಿಕಾರಿಗಳು, ಸಹೋದ್ಯೋಗಿಗಳು ಮತ್ತು ಸಾರ್ವಜನಿಕರು ಸಹಕಾರ ನೀಡಿದ್ದರಿಂದಲೇ ತೃಪ್ತಿಕರ ಸೇವೆ ಸಲ್ಲಿಸಲು ಸಾಧ್ಯವಾಯಿತು ಎಂದರು.

ನಿವೃತ್ತಿ ಹೊಂದಿದ ನಂತರ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ಸಮಾಜ ಸೇವಾ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು. ನಿತ್ಯ ವ್ಯಾಯಾಮ, ಯೋಗದ ಮೂಲಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಹಾಗೂ ಕುಟುಂಬದವರೊಂದಿಗೆ ನೆಮ್ಮದಿ ಜೀವನ ನಡೆಸುವಂತೆ ಸಲಹೆ ನೀಡಿದರು.

ಪೂರ್ವ ವಲಯ ಪೊಲೀಸ್ ಮಹಾನಿರೀಕ್ಷಕ ಡಾ. ಕೆ. ತ್ಯಾಗರಾಜನ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಸ್ವಾಗತಿಸಿ, ಪ್ರಾಸ್ತಾವಿಕವಾಗಿ (2ನೇ ಪುಟಕ್ಕೆ)


**ದಾವಣಗೆರೆ ದಕ್ಷಿಣ ಮತ್ತು ಉತ್ತರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳಾದ ಡಾ॥ ಶಾಮನೂರು ಶಿವಶಂಕರಪ್ಪನವರು ಮತ್ತು ಎಸ್.ಎಸ್.ಮಲ್ಲಿಕಾರ್ಜುನ್‌ರಿಂದ ಇಂದು ಪ್ರಚಾರಕ್ಕೆ ಚಾಲನೆ**



ಬರುವ ಮೇ.10ರಂದು ನಡೆಯಲಿರುವ ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಲಿರುವ ನಮ್ಮ-ನಿಮ್ಮೆಲ್ಲರ ಮೆಚ್ಚಿನ ನಾಯಕರು, ಮಾಜಿ ಸಚಿವರೂ, ಹಾಲಿ ಶಾಸಕರೂ ಆದ

**ಡಾ॥ ಶಾಮನೂರು ಶಿವಶಂಕರಪ್ಪ** ಅವರು

21ನೇ ವಾರ್ಡ್‌ನ ಆನೆಕೊಂಡದಿಂದ ಹಾಗೂ ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಲಿರುವ ಮಾಜಿ ಸಚಿವರು, ಜನಪ್ರಿಯ ನಾಯಕರಾದ

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್** ಅವರು

43ನೇ ವಾರ್ಡ್‌ನ ಶಾಮನೂರಿನಿಂದ ಇಂದು ಪ್ರಚಾರ ಆರಂಭಿಸುವರು.

ಈ ಕಾರ್ಯಕ್ರಮದಲ್ಲಿ ವಾರ್ಡ್ ಅಧ್ಯಕ್ಷರುಗಳು, ಮಹಾನಗರ ಪಾಲಿಕೆ ಮಹಾಪೌರರು, ಸದಸ್ಯರುಗಳು, ಮಾಜಿ ಸದಸ್ಯರುಗಳು, ಗ್ರಾಮ ಪಂಚಾಯತ್ ಹಾಲಿ ಮತ್ತು ಮಾಜಿ ಸದಸ್ಯರುಗಳು, ಜನಪ್ರತಿನಿಧಿಗಳು, ಪಕ್ಷದ ವಿವಿಧ ಘಟಕಗಳ ಅಧ್ಯಕ್ಷರುಗಳು ಮತ್ತು ಪದಾಧಿಕಾರಿಗಳು, ಪಕ್ಷದ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಕೋರಲಾಗಿದೆ.

ಸ್ಥಳ: ಆನೆಕೊಂಡ, ದಾವಣಗೆರೆ
ದಿನಾಂಕ 03-04-2023ರ ಸೋಮವಾರ, ಸಮಯ: ಬೆಳಗ್ಗೆ 9 ಗಂಟೆಗೆ

ಸ್ಥಳ: ಶಾಮನೂರು, ದಾವಣಗೆರೆ
ದಿನಾಂಕ 03-04-2023ರ ಸೋಮವಾರ, ಸಮಯ: ಬೆಳಗ್ಗೆ 11.30ಕ್ಕೆ



ಶ್ರೀ ವಿನಾಯಕ ಪೈಲ್ವಾನ್, ಮಾಜಿ ಮಹಾಪೌರರು ಹಾಗೂ ಮಹಾನಗರ ಪಾಲಿಕೆಯ ಕಾಂಗ್ರೆಸ್ ಸದಸ್ಯರು
ಶ್ರೀ ಅಯೂಬ್ ಪೈಲ್ವಾನ್, ಅಧ್ಯಕ್ಷರು, ದಾವಣಗೆರೆ ದಕ್ಷಿಣ ವಲಯ ಕಾಂಗ್ರೆಸ್ ಸಮಿತಿ
ಶ್ರೀ ಕೆ.ಜಿ.ಶಿವಕುಮಾರ್, ಅಧ್ಯಕ್ಷರು, ದಾವಣಗೆರೆ ಉತ್ತರ ವಲಯ ಕಾಂಗ್ರೆಸ್ ಸಮಿತಿ
ಶ್ರೀ ಜಿ.ಸಿ.ನಿಂಗಪ್ಪ, ಅಧ್ಯಕ್ಷರು, ದಾವಣಗೆರೆ ದಕ್ಷಿಣ ವಲಯ ಕಾಂಗ್ರೆಸ್ ಸಮಿತಿ (ಗ್ರಾಮಾಂತರ)
ಶ್ರೀ ಬಿ.ಕೆ.ಪರಶುರಾಮ್, ಅಧ್ಯಕ್ಷರು, ಉತ್ತರ ವಲಯ ಕಾಂಗ್ರೆಸ್ ಸಮಿತಿ (ಗ್ರಾಮಾಂತರ)

ಪ್ರಕಟಣೆ : ಮಲ್ಲಿಕಾರ್ಜುನ ಎಸ್., ಪ್ರಧಾನಕಾರ್ಯದರ್ಶಿ, ಜಿಲ್ಲಾ ಕಾಂಗ್ರೆಸ್ ಸಮಿತಿ, ದಾವಣಗೆರೆ.

# ರೈತರ ಮೇಲಿನ ದೌರ್ಜನ್ಯಕ್ಕೆ ಖಂಡನೆ



ದಾವಣಗೆರೆ, ಏ. 2 - ಬಗರ್ ಹುಕಿಂ ಸಾಗುವಳಿ ಮಾಡುತ್ತಿರುವ ರೈತರ ಮೇಲಿನ ದೌರ್ಜನ್ಯ ಮತ್ತು ಬೆಂಗಳೂರಿನ ಶಿವರಾಂ ಕಾರಂತ ಬಡಾವಣೆಯಲ್ಲಿರುವ ರೈತರ ಮೇಲೆ ಬಿಡಿಎ ಅಧಿಕಾರಿಗಳ ದೌರ್ಜನ್ಯ ಖಂಡಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾ ಸಮಿತಿ ಯಿಂದ ಪ್ರತಿಭಟನೆ ನಡೆಸಲಾಯಿತು.

ಜಿಲ್ಲಾಡಳಿತ ಮುಂಭಾಗ ಪ್ರತಿಭಟನೆ ನಡೆಸಿದ ಸಂಘಟನೆಯ ಸದಸ್ಯರುಗಳು ಜಿಲ್ಲಾಧಿಕಾರಿ ಮುಖಾಂತರ ರಾಜ್ಯ ಪಾಲರಿಗೆ ಮತ್ತು ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು, ಚೇಳೂರು ಹೋಬಳಿ ಗಂಗಯ್ಯನಪಾಳ್ಯ ಗ್ರಾಮದಲ್ಲಿ 30-40 ವರ್ಷಗಳಿಂದಲೂ ರೈತರು ಕಂದಾಯ ಭೂಮಿಯಲ್ಲಿ ಬಗರ್ ಹುಕ್ಕುಂ ಸಾಗುವಳಿ ಮಾಡುತ್ತಿದ್ದಾರೆ. ಈಗ ಅರಣ್ಯ ಇಲಾಖೆ ಯವರು ಆ ಭೂಮಿ ನಮಗೆ ಸೇರಿದ್ದೆಂದು ಗುಂಡಿ ತೆಗೆದು ಸ್ವಾಧೀನಪಡಿಸಿಕೊಳ್ಳಲು ಮುಂದಾಗಿದ್ದು, ಅಲ್ಲಿನ ರೈತರು ಎಷ್ಟೇ ಅಂಗಲಾಚಿದರೂ ಅರಣ್ಯ ಇಲಾಖೆ ಅಧಿಕಾರಿಗಳು ದರ್ಪ ತೋರಿಸಿ ರೈತರ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಹಲ್ಲೆ ನಡೆಸಿದ ಸಂದರ್ಭದಲ್ಲಿ ರೈತ ಮುಖಂಡ ದೊಡ್ಡ ನಂಜಯ್ಯ ಇತರರನ್ನು ಬಂಧಿಸಿ ಎಲ್ಲಿಗೆ ಕರೆದುಕೊಂಡು ಹೋಗಿದ್ದಾರೆ ಎಂಬುದರ ಬಗ್ಗೆ ಮಾಹಿತಿ ನೀಡುತ್ತಿಲ್ಲ. ಈ ರೀತಿ ರಾಜ್ಯದ ಯಾವುದೇ ಮೂಲೆಯಲ್ಲೂ ದೌರ್ಜನ್ಯ ನಡೆ ಯಬಾರದು. ಶಾಂತಿಯುತ ಪ್ರತಿಭಟನೆ ಮಾಡುತ್ತಿರುವ ರೈತರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಿರುವಂತೆ, ರೈತರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ಅರಣ್ಯ ಇಲಾಖೆ ಅಧಿಕಾರಿಗಳ ಮೇಲೂ ಸಹ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಂಘಟನೆಯ ರಾಜ್ಯಾಧ್ಯಕ್ಷ ಹೆಚ್.ಆರ್. ಬಸವರಾಜಪ್ಪ, ಹೊನ್ನೂರು ಮುನಿಯಪ್ಪ, ಕುರುವ ಗಣೇಶ್, ಪಿ.ಪಿ. ಮರುಳಸಿದ್ದಯ್ಯ, ಹೊನ್ನೂರು ರಾಜು, ಹನಗವಾಡಿ ರುದ್ರೇಶ್, ಮಾಯಕೊಂಡ ಬೀರಪ್ಪ,ಕಬ್ಬಳ ಸಂತೋಷ್, ಕೆಂಚನಹಳ್ಳಿ ಶೇಖರಪ್ಪ, ಬಟ್ಲಕಟ್ಟೆ ಪಾಲಾಕ್ಷಿ, ಮಲ್ಲಿಕಾರ್ಜುನಪ್ಪ, ಮಲ್ಲೇನಹಳ್ಳಿ ನಾಗರಾಜ್ ಇದ್ದರು.

# ಹರಿಹರ : ಸರ್ಕಾರಿ ಆಸ್ಪತ್ರೆ ರೋಗಿಗಳಿಗೆ ಹಣ್ಣು ವಿತರಣೆ



ಹರಿಹರ, ಏ. 2 - ಕದಸಂಸ ತಾಲ್ಲೂಕು ಸಂಚಾಲಕ ಪಿ.ಜೆ.ಮಹಾಂತೇಶ್ ಇವರ ಜನ್ಮ ದಿನದ ನಿಮಿತ್ತ ನಗರದ ಸರ್ಕಾರಿ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣು, ಹಂಪಲು ವಿತರಿಸಲಾಯಿತು.

ಈ ಸಂದರ್ಭದಲ್ಲಿ ಆರೋಗ್ಯ ಮಾತೆ ಚರ್ಚ್‌ನ ಪ್ರಧಾನ ಗುರುಗಳಾದ ಫಾ. ಡಾ.ಅಂತೋಣಿ ಪೀಟರ್, ಪಿ. ಜೆ.ಮಹಾಂತೇಶ್, ಆಸ್ಪತ್ರೆ ಮುಖ್ಯ ಆಡಳಿತ ವೈದ್ಯಾಧಿಕಾರಿ ಡಾ.ಎಲ್.ಹನುಮನಾಯ್ಕ್, ಕದಸಂಸ ಪದಾಧಿಕಾರಿಗಳಾದ ಭಾನುವಳ್ಳಿ ಚೌಡಪ್ಪ ಸಿ., ಗುಡದಪ್ಪ ಮಲ್ಲನಾಯ್ಕನಹಳ್ಳಿ, ಹೊಸಪಾಳ್ಯ ಗ್ರಾಪಂ ಸದಸ್ಯ ಪರಶುರಾಮ, ಕಡ್ಲೆಗೊಂದಿ ಗ್ರಾ.ಪಂ ಸದಸ್ಯ ತಿಮ್ಮಣ್ಣ, ರಾಜನ ಹಳ್ಳಿ ನವೀನ್, ಕಡ್ಲೆಗೊಂದಿ ಹನುಮಂತಪ್ಪ, ನಿಂಗಪ್ಪಜ್ಜ, ಸಂಜೀವ್, ಉಮೇಶ್, ನಾಗರಾಜ್ ಎನ್.ಕರೂರು, ಅಣ್ಣಪ್ಪ ಸಾರಥಿ, ಕೆ.ಆರ್. ಉಮೇಶ್ ಮತ್ತಿತರರು ಉಪಸ್ಥಿತರಿದ್ದರು.

# ಫೋನ್ ಹ್ಯಾಕ್ ಮಾಡಲು ಕೇಂದ್ರದ ಸಂಚು : ಆರೋಪ

ನವದೆಹಲಿ, ಏ. 2 – ಕೇಂದ್ರ ಸರ್ಕಾರ ಹೊಸ ಗೂಢಚಾರಿಕೆ ಉಪಕರಣಗಳ ಖರೀದಿಗೆ ಮುಂದಾಗಿದೆ. 2024ರ ಚುನಾವಣೆಗೆ ಮುಂಚೆ ಜನರ ಫೋನ್ ಹ್ಯಾಕ್ ಮಾಡಲು ಸರ್ಕಾರ ಸಂಚು ನಡೆಸಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಕೇಂದ್ರ ಸರ್ಕಾರ 120 ದಶಲಕ್ಷ ಡಾಲರ್ ವೆಚ್ಚದಲ್ಲಿ ಹೊಸ ಗೂಢಚಾರಿಕೆ ವ್ಯವಸ್ಥೆ ಖರೀದಿಗೆ ಮುಂದಾಗಿದೆ ಎಂದು ಫೈನಾನ್ಷಿಯಲ್ ಟೈಮ್ಸ್ ಪತ್ರಿಕೆಯಲ್ಲಿ ವರದಿ ಮಾಡಲಾಗಿತ್ತು.

ಈ ಬಗ್ಗೆ ಹೇಳಿಕೆ ನೀಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ನಾಗರಿಕರು, ಪ್ರತಿಪಕ್ಷಗಳು, ನ್ಯಾಯಾಂಗ , ಚುನಾವಣಾ ಆಯೋಗ, ಪತ್ರಕರ್ತರ ಮೇಲೆ ಪೆಗಾಸಸ್ ತಂತ್ರಾಂಶದ ಮೂಲಕ ಕಣ್ಗಾವಲು ಹಾಕಲಾಗಿತ್ತು. ಈಗ ಚುನಾವಣೆ ಬರುತ್ತಿರುವ ಸಮಯದಲ್ಲಿ ಮತ್ತೆ ಅದೇ ಸಂಚು ನಡೆಸಲಾಗುತ್ತಿದೆ ಎಂದು ಆರೋಪಿಸಿದ್ದಾರೆ.

# ಗುಜರಾತ್ ಹತ್ಯಾಕಾಂಡ ಎಲ್ಲ 26 ಆರೋಪಿಗಳು ದೋಷಮುಕ್ತ

**(1ನೇ ಪುಟದಿಂದ)** ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದ ನ್ಯಾಯಮೂರ್ತಿ ಲೀಲಾಭಾಯಿ ಚುಡಸಮ ಅವರು ತೀರ್ಪು ಪ್ರಕಟಿಸಿದ್ದು, ಎಲ್ಲಾ 26 ಆರೋಪಿಗಳನ್ನು ದೋಷಮುಕ್ತಗೊಳಿಸಿದ್ದಾರೆ. ಮಾರ್ಚ್ 1, 2022ರಂದು ನಡೆದ ಕೋಮುಗಲಭೆಯ ವೇಳೆ ಹತ್ಯೆ ಹಾಗೂ ಅತ್ಯಾಚಾರಗಳು ನಡೆದಿದ್ದವು. ಈ ಬಗ್ಗೆ ಪ್ರಾಸಿಕ್ಯೂಷನ್ 190 ಸಾಕ್ಷಿಗಳು ಹಾಗೂ 334 ದಾಖಲೆಗಳನ್ನು ಸಾಕ್ಷಿಯಾಗಿ ಸಲ್ಲಿಸಿತ್ತು. ಆದರೆ, ಸಾಕ್ಷಿಗಳ ಹೇಳಿಕೆಗಳು ತದ್ವಿರುದ್ಧವಾಗಿವೆ. ಪ್ರಾಸಿಕ್ಯೂಷನ್ ವಾದಕ್ಕೆ ಪೂರಕವಾಗಿಲ್ಲ ಎಂದು ನ್ಯಾಯಾಲಯ ಹೇಳಿದೆ.

# ಗೋಣಿವಾಡದಲ್ಲಿ ಇಂದಿನಿಂದ ಮಕ್ಕಳ ಬೇಸಿಗೆ ಶಿಬಿರ ಆರಂಭ

ಅನ್ವೇಷಕರು ಆರ್ಟ್ ಫೌಂಡೇಷನ್ ವತಿಯಿಂದ 7 ನೇ ವರ್ಷದ ಮಕ್ಕಳ ಬೇಸಿಗೆ ಶಿಬಿರವನ್ನು ತಾಲ್ಲೂಕಿನ ಗೋಣಿವಾಡದ ಶ್ರೀ ಸೋಮೇಶ್ವರ ವಸತಿಯುತ ವಿದ್ಯಾಲಯದಲ್ಲಿ ಇಂದಿನಿಂದ ಇದೇ ದಿನಾಂಕ 23 ರವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ಶಿಬಿರದ ಸಂಚಾಲಕ ಎಸ್. ಎಸ್. ಸಿದ್ಧರಾಜು (9844268176) ತಿಳಿಸಿದ್ದಾರೆ.

ಶಿಬಿರದಲ್ಲಿ ನೀನಾಸಂ ಪದವೀಧರರ ಮಾರ್ಗದರ್ಶನದಲ್ಲಿ ನಟನಾ ಕೌಶಲ್ಯ, ಸಾಮರ್ಥ್ಯ, ತಲ್ಲೀನತೆ, ಆತ್ಮವಿಶ್ವಾಸ ಕಲಿಸುವ ಜೊತೆಗೆ ನಟನೆ, ಮಣ್ಣಿನಲ್ಲಿ ಮಡಕೆ ಮಾಡುವುದು, ಬಿದರಿನಲ್ಲಿ ಬುಟ್ಟಿ ಹೆಣೆಯುವುದನ್ನು ಕಲಿಸಿಕೊಡಲಾಗುವುದು. ಕೊಂಡಜ್ಜಿಗೆ ಹೊರಸಂಚಾರ ಏರ್ಪಡಿಸಿದ್ದು , ವಿಶೇಷ ಆಕರ್ಷಣೆಯಾಗಿ ಮಕ್ಕಳ ಸಂತೆಯನ್ನೂ ಸಹ ಆಯೋಜಿಸಲಾಗುವುದು. ಜೊತೆಗೆ ಕಲೆಯ ವಿವಿಧ ಮಜಲುಗಳನ್ನು ಹೇಳಿಕೊಡಲಾಗುವುದು.

# ಮಕ್ಕಳಲ್ಲಿ ವೈಚಾರಿಕ ಪ್ರಜ್ಞೆ ಬೆಳೆಸುವ 'ತರಳಬಾಳು ಚಿತ್ರಕಥಾ ಮಾಲಿಕೆ'

ಮಕ್ಕಳಿಗೆ ಕಥೆಗಳು ಬೇಕು. ಆ ಕಥೆಗಳು ಅವರ ಮನಸ್ಸನ್ನು ಅರಳಿಸಿ, ಮುದಗೊಳಿಸುವುದರೊಂದಿಗೆ ಮನರಂಜಿಸುವಂತಿರಬೇಕು. ಜೊತೆಗೆ ತನ್ನ ಸುತ್ತಣ ವಸ್ತು ಪ್ರಪಂಚದಲ್ಲಿನ ಸಂಗತಿಗಳನ್ನು ವೈಜ್ಞಾನಿಕವಾಗಿ ಅವಲೋಕಿಸುವಂಥ ಹರಿತವಾದ ಆಲೋಚನಾ ಕ್ರಮವನ್ನು ಸ್ವಯಂ ತಾವೇ ರೂಢಿಸಿಕೊಳ್ಳುವುದಕ್ಕೆ ಪೂರಕವಾಗಿರುವಂತಿರಬೇಕು.

'ಬೆಳೆಯುವ ಸಿರಿ ಮೊಳಕೆಯಲ್ಲಿ' ಎಂಬ ನಾಣ್ಣುಡಿಯಂತೆ ಮಕ್ಕಳಿದ್ದಾಗಲೇ ಶಿವ ಶರಣರ ಕಥೆಗಳನ್ನು ತಿಳಿಸಿ ವೈಚಾರಿಕ ಪ್ರಜ್ಞೆ ಹಾಗೂ ವೈಜ್ಞಾನಿಕ ಚಿಂತನೆಗಳನ್ನು ಬಿತ್ತುವ ಕಥೆಗಳಿದ್ದರಂತೂ ಮಕ್ಕಳ ಬಾಳು ಹಸನಾಗುವುದು ಖಂಡಿತಾ.


ಹಿಂದೆ ಅಜ್ಜ-ಅಜ್ಜಿ ತನ್ನ ಮೊಮ್ಮಕ್ಕಳಿಗೆ ನೀತಿ ಕಥೆಗಳನ್ನು ಹೇಳುತ್ತಿದ್ದರು. ಈಗ ಕಾಲ ಬದಲಾಗಿದೆ. ಕೂಡು ಕುಟುಂಬಗಳು ಒಡೆದು, ಒಂಟಿ ಕುಟುಂಬಗಳಾಗಿವೆ. ಹೆತ್ತವರಿಗೆ ಕಥೆ ಹೇಳುವ ಪುರುಸೊತ್ತಿಲ್ಲ. ಮಕ್ಕಳ ಜೀವನ ಅಂಕ ಗಳಿಕೆಗೆ ಮೀಸಲಾಗಿದೆ. ಸಂಸ್ಕೃತಿ, ಸಂಸ್ಕಾರ, ನೀತಿ ಪಾಠಗಳು ಮರೆಯಾಗಿವೆ.

ಇಂತಹ ಕಾಲಘಟ್ಟದಲ್ಲಿ ಮಕ್ಕಳು ತಾವಾಗಿಯೇ ಕುತೂಹಲದಿಂದ ಕಥೆಗಳನ್ನು ಓದಲು ಚಿತ್ರಕಥೆಗಳು ಸಹಕಾರಿಯಾಗಿವೆ. ಇದರ ಜೊತೆಗೆ ಓದಿನ ಆಸಕ್ತಿ ಹೆಚ್ಚಿಸಲೂ ಬಲ್ಲವು.

ಅಂತರ್ಜಾಲದ ಮೂಲಕ ಶರಣರ ವಚನಗಳನ್ನು ವಿಶ್ವಕ್ಕೇ ಪರಿಚಯಿಸಿದ ಸಿರಿಗೆರೆಯ ಶ್ರೀ ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಅವರು, ಇದೀಗ ಮಕ್ಕಳಿಗೆ ಅರ್ಥವಾಗುವ ರೀತಿಯಲ್ಲಿ ಶರಣರ ಚಿತ್ರಕಥಾ ಮಾಲಿಕೆ ಹೊರ ತಂದಿದ್ದಾರೆ. ಶ್ರೀಮಠದ ಮೂಲ ಪುರುಷ 'ವಿಶ್ವಬಂಧು ಮರುಳಸಿದ್ದ' ಹಾಗೂ 'ಶರಣೆ ಅಕ್ಕಮಹಾದೇವಿ' ಕುರಿತ ಚಿತ್ರಕಥಾ ಮಾಲಿಕೆ ನಂತರ 'ವಿಶ್ವಗುರು ಬಸವಣ್ಣ ಕಥಾ ಮಾಲಿಕೆ' ಮುದ್ರಣಗೊಂಡಿದೆ.

ಹಿರಿಯ ಕಲಾವಿದ ನಾ.ರೇವನ್ ಅವರು ಬಸವಣ್ಣನವರ ಈ ಚಿತ್ರಕಥಾ ಮಾಲಿಕಯನ್ನು ಸರಳ ಹಾಗೂ ಸುಂದರವಾಗಿ, ಮಕ್ಕಳಿಗೆ ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಮಕ್ಕಳಲ್ಲಿ ಓದುವ ಹವ್ಯಾಸ ಬೆಳೆಸಲು ಸಹಕಾರಿಯಾಗಿದೆ.

ವಚನಗಳು, ವಚನ ಸಾಹಿತ್ಯ, ಶಿವಶರಣರ ಗೋಷ್ಠಿಗಳು ಹಿರಿಯರಿಗೆ ಮಾತ್ರ ಸೀಮಿತವಾಗಿರುವ ಪ್ರಸ್ತುತ ದಿನಗಳಲ್ಲಿ




ಶಿವಶರಣರ ಜೀವನ ಕುರಿತು ಮಕ್ಕಳಿಗೆ ತಿಳಿಸಲು ಚಿತ್ರಮಾಲಿಕೆ ಯಂತಹ ಸುಲಭ ಉಪಾಯ ಬೇರೊಂದಿರಲಾರದು.

ಚಂದಮಾಮದಂತಹ ಅನೇಕ ಮಕ್ಕಳ ಸಂಚಿಕೆಗಳು ನಮ್ಮ ಓದಿನ ಹುಚ್ಚು ಹೆಚ್ಚಿಸಿದ್ದವು. ಈಗ ಅಂತಹದ್ದೇ ಮಾದರಿ ಯಲ್ಲಿ ಮಕ್ಕಳ ಜ್ಞಾನ ಭಂಡಾರ ಹೆಚ್ಚಿಸಲು ತರಳಬಾಳು ಚಿತ್ರಕಥಾ ಮಾಲಿಕೆ ಹೊರ ಬರುತ್ತಿವೆ.

ಸದ್ಯ ವಿಶ್ವಗುರು ಬಸವಣ್ಣನವರ ಜೀವನದ ಚಿತ್ರಕಥೆಯ ಈ ಮಾಲಿಕೆಯಲ್ಲಿ ಬಸವಣ್ಣನ ಜನನದಿಂದ ಅವರು ಐಕ್ಯವಾಗುವವರೆಗೆ ಬದುಕು, ಹೋರಾಟ, ಸಮಾಜವನ್ನು ತಿದ್ದಿದ ರೀತಿಗಳ ಚಿತ್ರ ಸಹಿತ ಸರಳ ಸಾಲುಗಳ ಮೂಲಕ ಮಕ್ಕಳಿಗೆ ಮನಮುಟ್ಟುವಂತೆ ಚಿತ್ರಿಸಲಾಗಿದೆ. ಕಥೆಯೊಳಗಿನ ಸ್ಥಳಗಳು, ಸನ್ನಿವೇಶಗಳ ಚಿತ್ರಗಳು ಸೊಗಸಾಗಿವೆ. ಪ್ರತಿ ಪೋಷಕರು ತಮ್ಮ ಮಕ್ಕಳಿಗೆ ಅಪ್ಪಿಕೊಂಡೊಯ್ಯಬೇಕಾದ ಚಿತ್ರಮಾಲಿಕೆ ಇದು ಎಂದರೆ ತಪ್ಪಾಗಲಾರದು.

ಪುಸ್ತಕಗಳು ಬೇಕಾದಲ್ಲಿ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ ಸಿರಿಗೆರೆ. ದೂರವಾಣಿ 0819-268829, 268842, 268843ಕ್ಕೆ ಸಂಪರ್ಕಿಸಬಹುದಾಗಿದೆ.

- ಮಲ್ಲಿಕಾರ್ಜುನ

# ಕೊಮಾರನಹಳ್ಳಿಯಲ್ಲಿ 6ರಂದು ರಂಗನಾಥ ಸ್ವಾಮಿ ರಥೋತ್ಸವ



ಮಲೇಬೆನ್ನೂರು ಸಮೀಪದ ಕೊಮಾರನಹಳ್ಳಿಯ ಹೆಳವನಕಟ್ಟೆ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿಯ ದವನ ಪೂರ್ಣಿಮಾ ಬ್ರಹ್ಮ ರಥೋತ್ಸವವು ಇದೇ ದಿನಾಂಕ 6ರ ಗುರುವಾರ ಬೆಳಿಗ್ಗೆ 11.40ಕ್ಕೆ ಜರುಗಲಿದೆ ಎಂದು ಉಪತಹಶೀಲ್ದಾರ್ ಆರ್.ರವಿ ತಿಳಿಸಿದ್ದಾರೆ. ರಥೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ ಧ್ವಜಾರೋಹಣ, ಯಾಗ ಶಾಲಾ ಪ್ರವೇಶ, ಪುಣ್ಯಾಹ, ಅಂಕುರಾರ್ಪಣೆ, ನವಗ್ರಹ ಸ್ಥಾಪನೆ, ಕಳಸ ಸ್ಥಾಪನೆ, ಕಂಕಣ ಬಂಧನ, ಬಲಿ, ನೈವೇದ್ಯ ನಡೆಯಲಿದೆ.


ನಾಳೆ ಮಂಗಳವಾರ ಗರುಡೋತ್ಸವ, ಏ.5ರ ಬುಧವಾರ ಗಜಾರೋಹಣ, ಬಲಿ, ನೈವೇದ್ಯ, ಮಂಗಳಾರತಿ, ಏ.7ರ ಶುಕ್ರವಾರ ಅವಭೃತ ಬಲಿ, ಏ.8 ಮತ್ತು 9 ರಂದು ಶ್ರೀ ಆಂಜನೇಯ ಸ್ವಾಮಿಗೆ ಪವಮಾನ ಜಪ, ಶ್ರೀ ಸೂಕ್ತ, ಪುರುಷ ಸೂಕ್ತ ಸಹಿತ ಶ್ರೀ ಸ್ವಾಮಿಗೆ ಅರ್ಚನೆ ನೈವೇದ್ಯ ಮತ್ತು ಅನ್ನಸಂತರ್ಪಣೆ ನಡೆಯಲಿದೆ. ಏ.10ರ ಸೋಮವಾರ ಹೆಳವನಕಟ್ಟೆ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿಗೆ ಶತವಾರು ರುದ್ರಾಭಿಷೇಕ, ನೈವೇದ್ಯ ಮತ್ತು ಗಿರಿಯಮ್ಮನವರಿಗೆ ವಿಶೇಷ ಪೂಜೆ ಹಾಗೂ ಅನ್ನ ಸಂತರ್ಪಣೆಯೊಂದಿಗೆ ಜಾತ್ರಾ ಕಾರ್ಯಕ್ರಮಗಳು ಪೂರ್ಣಗೊಳ್ಳಲಿವೆ.

# ಅಪರಾಧ ತಡೆ ಬಗ್ಗೆ ಜಾಗೃತಿ ಅಗತ್ಯ

**(1ನೇ ಪುಟದಿಂದ)** ಮಾತನಾಡಿದರು. ಹೆಚ್ಚುವರಿ ಪೊಲೀಸ್ ಅಧೀಕ್ಷಕ ರಾಮಗೊಂಡ ಬಸರಗಿ, ನಿವೃತ್ತ ಅಧಿಕಾರಿ ಕೆ.ಪಿ. ಚಂದ್ರಪ್ಪ, ರವಿನಾರಾಯಣ, ಹಿಮೊಫಿಲಿಯಾ ಸೊಸೈಟಿ ಅಧ್ಯಕ್ಷ ಡಾ. ಸುರೇಶ್ ಹನಗವಾಡಿ, ವೈ. ಮಲ್ಲೇಶ್ ಮತ್ತಿತರರು ಉಪಸ್ಥಿತರಿದ್ದರು.

ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ 15 ಅಧಿಕಾರಿಗಳನ್ನು ಗೌರವಿಸಲಾಯಿತು. ಇದೇ ವೇಳೆ ಪೊಲೀಸ್ ಧ್ವಜಗಳನ್ನು ವಿತರಿಸಲಾಯಿತು. ದಾವಣಗೆರೆ ಹಿಮೊಫಿಲಿಯಾ ಸೊಸೈಟಿ ಹಾಗೂ ಪೊಲೀಸ್ ಇಲಾಖೆ ಸಹಯೋಗದಲ್ಲಿ ಸ್ವಯಂಪ್ರೇರಿತ ರಕ್ತದಾನ ಶಿಬಿರ ನಡೆಯಿತು.

## ನಾಗರಕಟ್ಟೆ ಬ್ಯಾಡಗಿ ಬಸವರಾಜಪ್ಪ ನಿಧನ



ದಾವಣಗೆರೆ ತಾಲ್ಲೂಕು ನಾಗರಕಟ್ಟೆ ಗ್ರಾಮದ ವಾಸಿ

**ಬ್ಯಾಡಗಿ ಬಸವರಾಜಪ್ಪ (71)**

ಅವರು ದಿನಾಂಕ 2.04.2023 ರ ಭಾನುವಾರ ಬೆಳಗ್ಗೆ 11.45 ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರ, ಮೂವರು ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 03.04.2023 ರ ಸೋಮವಾರ ಮಧ್ಯಾಹ್ನ 12.30 ಕ್ಕೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ನಾಗರಕಟ್ಟೆ ಗ್ರಾಮದಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ : **ಮೃತರ ಧರ್ಮಪತ್ನಿ, ಮಕ್ಕಳು, ಅಳಿಯಂದಿರು ಹಾಗೂ ಮೊಮ್ಮಕ್ಕಳು**

**ಮೊ :99723 31254, 96630 30502, 82173 87986**

## ಎಸ್. ವೀರಭದ್ರಪ್ಪ ನಿಧನ



ದಾವಣಗೆರೆ ಕೆ.ಟಿ.ಜೆ ನಗರ 3ನೇ ಮೇನ್ 17ನೇ ಕ್ರಾಸ್ ವಾಸಿ
ಬಾಪೂಜಿ ಡೆಂಟಲ್ ಕಾಲೇಜ್ ನಿವೃತ್ತ ಮ್ಯಾನೇಜರ್

**ಎಸ್.ವೀರಭದ್ರಪ್ಪ**

ಅವರು ದಿನಾಂಕ 2.04.2023 ರ ಭಾನುವಾರ ಬೆಳಗಿನ ಜಾವ 2.30 ಕ್ಕೆ ನಿಧನರಾದರು. ಮೃತರಿಗೆ 83 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಮೂವರು ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 02.04.2023 ರ ಭಾನುವಾರ ಮಧ್ಯಾಹ್ನ 3.30 ಕ್ಕೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

**ದುಃಖತಪ್ತ ಕುಟುಂಬ ವರ್ಗ**

**ಮೊ : 99975 43378 - ಅರುಣ್ ಕುಮಾರ್, 98458 09434 - ಮಲ್ಲಿಕಾರ್ಜುನ್**

# ಇದೇ ದಿನ ನೀ ಹೋದದ್ದು..

ಜನಜಂಗುಳಿಯ ಜಾತ್ರೆಯಲಿ
ಹಿಡಿದ ಕೈ ಬಿಟ್ಟಿದ್ದು
ಇದೇ ದಿನ ನೀ ಮರೆಯಾದದ್ದು
ಬಡತನದಿ ದಿನ ದೂಡುವುದು
ಸಾಕೆನಿಸಿ ತೊರೆದು
ನಮ್ಮಿಂದ ನೀ ದೂರಾದದ್ದು..
ದಿನ ರಾತ್ರಿ ಕುಡಿದರೂ
ನನ್ನವ್ವ ನೂಕುತ್ತಿದ್ದಳು ಸಂಸಾರ
ನೀನು ಹಿಡಿದಿದ್ದ ಕೈ ಕಾಯುತ್ತಿಲ್ಲ
ಹಿಡಿದಿದ್ದಾಳೆ ನನ್ನವ್ವ ನನಗಾಗಿ
ನಾ ನಡೆವ ದಿಕ್ಕಿಗಾಗಿ..
ಅವ್ವ ಬೈಯ್ಯುವಳು; ಹೊಸತೇನು ?
ತಿಳಿಲಿಲ್ಲ ನೀನು !
ಹಿಂಡಿ ಹಿಪ್ಪೆಯಾಗಿದ್ದಾಳೆ
ನೀ ಹೋಗುವ ಮುನ್ನ ತಳ್ಳಿದ
ಸಾಲದ ಸುಳಿಯಿಂದ ಹೊರ ಬರಲು..
ನೀ ಬರಲೆಂದು ಅವ್ವ ಅಳಲಾರಳು
ಬತ್ತಿವೆ ನೀರಿಲ್ಲದೆ ಆಕೆಯ ಕಣ್ಗಳು..
ನಿನ್ನ ಹಿಂದೆ ಅವ್ವ ಬರಳು;
ಯಾಕೆಂದರೆ..ನನಗಾಗಿ..
ನೀ ಮಾಡಿರದ ಉಗಾದಿ ಮಾಡಲು..

- ಕುಂ. ಮಲ್ಲಿಕಾರ್ಜುನ, ಶಿಕ್ಷಕರು,
ಸ. ಹಿ. ಪ್ರಾ. ಶಾಲೆ ತೋಳಹುಣಸೆ

# ಜಾಗೃತಿ ಜಾಥಾಕ್ಕೆ ಚಾಲನೆ

ದಾವಣಗೆರೆ, ಏ. 2 - ನಗರದ ಸ.ಪ್ರ.ದ ಕಾಲೇಜಿನಲ್ಲಿ ಮತದಾರರ ಜಾಗೃತಿ ಜಾಥಾಕ್ಕೆ ಪ್ರಾಂಶುಪಾಲ ಡಾ. ಅಂಜಿನಪ್ಪ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಡಾ.ಟಿ. ಮಂಜಣ್ಣ, ಭೀಮಣ್ಣ ಸುಣಗಾರ್, . ರುದ್ರಪ್ಪ, ಡಾ. ಸುರೇಶ್, ಯು.ಸಿ. ನರೇಶ್, ಜಿ.ಟಿ. ಶಶಿಕಲಾ, ಸವಿತಾ .ಎಂ, ಮತ್ತು ರಾಯಭಾರಿಗಳಾದ ಆರ್. ಭೀಮಾನಾಯ್ಕ್, ಮತ್ತು ಜಿ. ಮಮತಾ ನೇತೃತ್ವ ವಹಿಸಿದ್ದರು.

# ಇಟ್ಟಿಗುಡಿ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಕಟ್ಟಡಕ್ಕೆ 2 ಲಕ್ಷ ರೂ. ದೇಣಿಗೆ



ಹರಪನಹಳ್ಳಿ, ಏ.2- ತಾಲ್ಲೂಕಿನ ಇಟ್ಟಿಗುಡಿ ಗ್ರಾಮದಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಕಟ್ಟಡಕ್ಕೆ ಧರ್ಮಸ್ಥಳ ಮಂಜುನಾಥೇಶ್ವರ ದೇವಸ್ಥಾನದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆಯವರು 2 ಲಕ್ಷ ರೂ. ದೇಣಿಗೆ ನೀಡಿದ್ದಾರೆ.

ಗ್ರಾಮದ ದೇವಸ್ಥಾನದ ಹತ್ತಿರ ಭಾನುವಾರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕ ಜನಾರ್ಧನ್ ಅವರು ದೇವಸ್ಥಾನ ಸೇವಾ ಸಮಿತಿಯವರಿಗೆ 2 ಲಕ್ಷ ರೂ. ದೇಣಿಗೆ ಚೆಕ್ಕನ್ನು ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಸಂಘದ ತಾಲ್ಲೂಕು ಯೋಜನಾಧಿಕಾರಿ ಡಿ.ಸುಬ್ರಮಣ್ಯ, ವಲಯ ಮೇಲ್ವಿಚಾರಕ ರುದ್ರೇಶ್, ಆಂಜನೇಯ ಸೇವಾ ಸಮಿತಿ ಅಧ್ಯಕ್ಷ ಟಿ.ಬಸವರಾಜ, ಕಾರ್ಯದರ್ಶಿ ರಮೇಶ್, ಸೇವಾ ಪ್ರತಿನಿಧಿ ತಾನಾಜಿ, ಗ್ರಾಮ ಪಂಚಾಯ್ತಿ ಸದಸ್ಯರಾದ ತಿಮ್ಮೇಶ್, ವಿರುಪಾಕ್ಷಪ್ಪ, ಮುಖಂಡರಾದ ಕಟ್ಟೇರ್ ಶ್ಯಾಮಪ್ಪ, ಎಚ್.ಪರಸಪ್ಪ, ಹನುಮಂತಪ್ಪ, ರವಿ, ಅರುಣ್‌ಕುಮಾರ್ ಸೇರಿದಂತೆ ಸಂಘದ ಮಹಿಳಾ ಪ್ರತಿನಿಧಿಗಳು, ಗ್ರಾಮಸ್ಥರು ಇದ್ದರು.

# ದಾವಣಗೆರೆ ಸಿಡಿಪಿಒ ಆಗಿ ಜಿ.ಎಸ್. ಅಭಿಕುಮಾರ್



ದಾವಣಗೆರೆ, ಏ. 2 - ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಶಿಶು ಅಭಿವೃದ್ಧಿ ಯೋಜನೆ ಸಿಡಿಪಿಒ ಆಗಿ ಅಭಿಕುಮಾರ್ ಜಿ.ಎಸ್ ಅವರು ಬಡ್ತಿ ಹೊಂದಿ ನಗರಕ್ಕೆ ಸ್ಥಳ ನಿಯುಕ್ತಿ ಹೊಂದಿ ಇಂದು ಕರ್ತವ್ಯಕ್ಕೆ ಹಾಜರಾಗಿರುತ್ತಾರೆ.

ಸರ್ಕಾರಿ ನೌಕರರ ಸಂಘದ ನಿಕಟ ಪೂರ್ವ ಜಿಲ್ಲಾಧ್ಯಕ್ಷ ಎಸ್. ಹಾಲೇಶಪ್ಪ ಇವರು ಸನ್ಮಾನಿಸಿ, ಬರಮಾಡಿಕೊಂಡರು.

ಈ ಸಂದರ್ಭದಲ್ಲಿ ಸಿ.ರಾಘವೇಂದ್ರ, ದಯಾನಂದ, ಸುರೇಶ್, ಪ್ರಿಯದರ್ಶಿನಿ, ಕವಿತ ಹೆಚ್, ಸುಮಂಗಳ, ಸವಿತ ಸಣ್ಣಮನೆ , ಸುಧಾ ಮಕರಿ, ಶಿವಲೀಲಾ, ಸೌಮ್ಯ, ಸಿಂಧು, ಜ್ಯೋತಿ ಪಾಟೀಲ್, ಶ್ರೀನಿವಾಸ್, ಕುಮಾರ್ ಹಾಗೂ ತರೆ ಸಿಬ್ಬಂದಿಯವರು ಹಾಜರಿದ್ದರು.

# ಅಲೆಮಾರಿಗಳಿಗೆ ಶೇ.2 ಮೀಸಲಾತಿ ನೀಡದಿದ್ದರೆ ಚುನಾವಣೆ ಬಹಿಷ್ಕಾರ

ದಾವಣಗೆರೆ, ಮಾ.2- ಅಲೆಮಾರಿ ಬುಡಕಟ್ಟುಗಳ ಸಮುದಾಯಕ್ಕೆ ಸಿಗುವ ಮೀಸಲಾತಿಯಲ್ಲಿ ಹೊಸದಾಗಿ ಸೇರಿಸಿರುವ ಜಾತಿಗಳನ್ನು ಹೊರಹಾಕಿ, ಅಲೆಮಾರಿಗಳಿಗೆ ಶೇ.2 ರಷ್ಟು ಮೀಸಲಾತಿಯನ್ನು ನೀಡದಿದ್ದರೆ ಬರುವ ವಿಧಾನಸಭಾ ಚುನಾವಣೆಯನ್ನು ಬಹಿಷ್ಕರಿಸುವುದಾಗಿ ಕರ್ನಾಟಕ ರಾಜ್ಯ ಎಸ್‌ಸಿ, ಎಸ್‌ಟಿ, ಅಲೆಮಾರಿ ಬುಡಕಟ್ಟು ಮಹಾಸಭಾ ಎಚ್ಚರಿಕೆ ನೀಡಿದೆ.

ಪತ್ರಿಕಾಗೋಷ್ಠಿಯಲ್ಲಿ ಮಹಾಸಭಾದ ರಾಜ್ಯ ಕಾರ್ಯಾಧ್ಯಕ್ಷ ವಿ. ಸಣ್ಣ ಅಜ್ಜಯ್ಯ ಮತ್ತು ಕಾನೂನು ಸಲಹೆಗಾರ ಕೆ. ವೀರೇಶ್ ಕುಮಾರ್ ಮಾತನಾಡಿ, ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ಒಳಮೀಸಲಾತಿ ವರದಿ ಜಾರಿ ಮಾಡುವ ಅವೈಜ್ಞಾನಿಕ ನಿರ್ಧಾರವನ್ನು ರಾಜ್ಯ ಸರ್ಕಾರ ಕೈಗೊಂಡಿದೆ ಎಂದು ಕಿಡಿಕಾರಿದರು.

ವೀರೇಶ್ ಕುಮಾರ್, ಕಿರಣ ಕುಮಾರ್, ಪಿ. ರಾಮಪ್ಪ, ಎನ್.ಡಿ. ಮಂಜಪ್ಪ ಮತ್ತಿತರರು ಪತ್ರಿಕಾಗೋಷ್ಠಿಯಲ್ಲಿದ್ದರು.

# ರಾಜರಾಜೇಶ್ವರಿ ಶಾಲೆಯ ಪ್ರಿಯದರ್ಶಿನಿ ಈರಮ್ಮಗೆ 'ಇನ್ ಸ್ಪೈರ್' ಅವಾರ್ಡ್




ಮಲೇಬೆನ್ನೂರು, ಏ.2- ಶಿಕ್ಷಣ ಇಲಾಖೆ ವತಿಯಿಂದ ನಡೆಸಲಾದ 2022 - 23 ನೇ ಸಾಲಿನ ವಿಜ್ಞಾನ ಮಾದರಿ ತಯಾರಿಕೆ ಸ್ಪರ್ಧೆಯಲ್ಲಿ ಜಿಗಳಿ ರಸ್ತೆಯಲ್ಲಿರುವ ಒಡೆಯರ ಬಸವಾಪುರದ ಶ್ರೀ ರಾಜ ರಾಜೇಶ್ವರಿ ಆಂಗ್ಲ ಮಾಧ್ಯಮ ವಿದ್ಯಾ ಸಂಸ್ಥೆಯ 9ನೇ ತರಗತಿ ವಿದ್ಯಾರ್ಥಿನಿ ಪ್ರಿಯದರ್ಶಿನಿ ಹಾಗೂ 7ನೇ ತರಗತಿ ವಿದ್ಯಾರ್ಥಿನಿ ಈರಮ್ಮ ಅವರು ಜಿಲ್ಲಾ ಮಟ್ಟದ ಇನ್‌ಸ್ಪೈರ್ ಅವಾರ್ಡ್‌ಗೆ ಭಾಜನರಾಗಿದ್ದಾರೆ. ಪ್ರಾಂಶುಪಾಲರಾದ ಶ್ರೀಮತಿ ಸುಜಾತ ಅವರು ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ನೀಡಲಾದ ಅಧಿಕೃತ ಪ್ರಮಾಣ ಪತ್ರ ನೀಡಿ ಇಬ್ಬರನ್ನೂ ಅಭಿನಂದಿಸಿದರು. ಈ ವೇಳೆ ಸಂಸ್ಥೆಯ ಕಾರ್ಯದರ್ಶಿ ಜಿ. ಬಿ. ಶಿವಾನಂದಪ್ಪ, ಮುಖ್ಯೋಪಾಧ್ಯಾಯ ಎಸ್. ಶಶಿಧರ್ ಮತ್ತಿತರರು ಹಾಜರಿದ್ದರು.

# ತೈಲ ಉತ್ಪಾದನೆ ಕಡಿತಕ್ಕೆ ಸೌದಿ ನಿರ್ಧಾರ

**(1ನೇ ಪುಟದಿಂದ)** ಪ್ರತಿದಿನ 11.5 ದಶಲಕ್ಷ ಬ್ಯಾರಲ್ ತೈಲ ಉತ್ಪಾದಿಸುತ್ತದೆ. ಒಟ್ಟಾರೆ ಶೇ.5ರಷ್ಟು ತೈಲ ಉತ್ಪಾದನೆ ಕಡಿಮೆಯಾಗಲಿದೆ.

ಈ ಹಿಂದೆ ಅಮೆರಿಕದಲ್ಲಿ ಮಧ್ಯಂತರ ಚುನಾವಣೆ ನಡೆಯುವ ವೇಳೆ 2 ದಶಲಕ್ಷ ಬ್ಯಾರಲ್ ತೈಲ ಉತ್ಪಾದನೆ ಕಡಿತಗೊಳಿಸಲಾಗಿತ್ತು. ಆದರೆ, ತೈಲ ಉತ್ಪಾದನೆ ಕಡಿತದ ಹೊರತಾಗಿಯೂ, ಕಚ್ಚಾ ತೈಲದ ಬೆಲೆ ಜಾಗತಿಕವಾಗಿ ಕಡಿಮೆಯಾಗಿತ್ತು.

ಪ್ರಸಕ್ತ ಕಚ್ಚಾ ತೈಲದ ಬೆಲೆ ಬ್ಯಾರಲ್‌ಗೆ 80 ಡಾಲರ್ ಆಗಿದೆ. ಅಕ್ಟೋಬರ್ ವೇಳೆ ಕಚ್ಚಾ ತೈಲದ ಬೆಲೆ ಬ್ಯಾರಲ್‌ಗೆ 95 ಡಾಲರ್ ಆಗಿತ್ತು.

ಸೌದಿ ಅರೇಬಿಯಾದ ಸರ್ಕಾರಿ ಸ್ವಾಮ್ಯದ ತೈಲ ಕಂಪನಿಯಾದ ಅರಾಮ್ಕೋ, ಕಳೆದ ವರ್ಷ 161 ಶತಕೋಟಿ ಡಾಲರ್‌ಗಳ ದಾಖಲೆ ಲಾಭ ಪ್ರಕಟಿಸಿತ್ತು. 2021ಕ್ಕೆ ಹೋಲಿಸಿದರೆ ಲಾಭದಲ್ಲಿ ಶೇ.46.5ರ ಏರಿಕೆಯಾಗಿತ್ತು.

# 67 ಕೋಟಿ ಜನರ ಮಾಹಿತಿ ಕಳ್ಳತನದ ಬಗ್ಗೆ ಕೇಂದ್ರ ಸ್ಪಷ್ಟನೆ ನೀಡಲಿ : ಕಾಂಗ್ರೆಸ್

ನವದೆಹಲಿ, ಏ. 2- 67 ಕೋಟಿ ನಾಗರಿಕರು ಹಾಗೂ ಸಂಸ್ಥೆಗಳ ವೈಯಕ್ತಿಕ ಮಾಹಿತಿ ಕಳ್ಳತನವಾಗಿದೆ ಎಂಬ ವರದಿಗಳ ಬಗ್ಗೆ ಕೇಂದ್ರ ಸರ್ಕಾರ ಸ್ಪಷ್ಟನೆ ನೀಡಬೇಕು. ಭಾರತೀಯರ ಖಾಸಗಿತನ ಹಾಗೂ ಸುರಕ್ಷತೆ ಮೇಲೆ ದಾಳಿ ನಡೆದ ಪ್ರಕರಣ ಇದಾಗಿದೆ ಎಂದು ಕಾಂಗ್ರೆಸ್ ಹೇಳಿದೆ. 24 ರಾಜ್ಯಗಳು ಹಾಗೂ ಎಂಟು ಮಹಾನಗರಗಳ 67 ಕೋಟಿ ಜನರಿಗೆ ಸೇರಿದ ಮಾಹಿತಿಯನ್ನು ಕದ್ದ ವ್ಯಕ್ತಿಯನ್ನು ಬಂಧಿಸಿರುವುದಾಗಿ ಸೈಬರಾದಾಬ್ ಪೊಲೀಸರು ಶನಿವಾರ ಹೇಳಿಕೆ ನೀಡಿದ್ದರು. ಈ ಬಗ್ಗೆ ಪ್ರತಿಕ್ರಿಯಿಸಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ಕೇಂದ್ರ ಸರ್ಕಾರ ತಕ್ಷಣವೇ ಸ್ಪಷ್ಟನೆ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ವಿಜಯ್ ಭಾರದ್ವಜ್ ಎಂಬ ವ್ಯಕ್ತಿ 66.9 ಕೋಟಿ ಭಾರತೀಯರ ಮಾಹಿತಿ ಕದ್ದಿರುವುದಾಗಿ ಸೈಬರಾಬಾದ್ ಪೊಲೀಸರು ತಿಳಿಸಿದ್ದರು. ಜಿ.ಎಸ್. ಟಿ., ರಸ್ತೆ ಸಾರಿಗೆ ಸಂಘಟನೆಗಳು, ಇ-ವಾಣಿಜ್ಯ ಪೋರ್ಟಲ್, ಸಾಮಾಜಿಕ ಜಾಲತಾಣಗಳು ಹಾಗೂ ಫೈನ್‌ಟೆಕ್ ಕಂಪನಿಗಳಿಂದ ಮಾಹಿತಿ ಕದಿಯಲಾಗಿದೆ ಎಂದು ಪೊಲೀಸರು ಹೇಳಿದ್ದರು.

# ನಂದಿಗುಡಿ ಸರ್ಕಾರಿ ಶಾಲೆ ದತ್ತು ಸ್ವೀಕಾರ



ಮಲೇಬೆನ್ನೂರು ಏ. 2 - ಬೆಂಗಳೂರಿನ ಪ್ರತಿಬಿಂಬ ಟ್ರಸ್ಟ್ ಹಾಗೂ ಕೋಷಂಟ್ ಟೆಕ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರು ನಂದಿಗುಡಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ದತ್ತು ಪಡೆದು 50 ಇಂಚಿನ ಸ್ಮಾರ್ಟ್ ಟಿವಿ, ಕ್ರೀಡಾ ಸಾಮಗ್ರಿಗಳು, ಡ್ರಮ್ ಸೆಟ್ ವಿತರಿಸಿದರು.

ಪ್ರತಿಬಿಂಬ ಟ್ರಸ್ಟ್ ನ ಖಜಾಂಚಿ ಮಹೇಂದ್ರ, ಕೋಷಂಟ್ ಕಂಪನಿಯ ಮುಖ್ಯಸ್ಥ ರಘುನಂದನ್ ಮಾತನಾಡಿ, ಗ್ರಾಮೀಣ ಮಕ್ಕಳ ಶಿಕ್ಷಣದ ಗುಣಮಟ್ಟ ಸುಧಾರಣೆ ಆಗಬೇಕೆಂಬ ಉದ್ದೇಶದಿಂದ ನಾವು 4 ಸರ್ಕಾರಿ ಶಾಲೆಗಳನ್ನು ದತ್ತು ಪಡೆದು ಮಕ್ಕಳ ಕಲಿಕೆಗೆ ಅಗತ್ಯವಾಗಿ ಬೇಕಾದ ಸೌಲಭ್ಯಗಳನ್ನು ನೀಡಿದ್ದೇವೆ ಎಂದು ಹೇಳಿದರು.

ಸಂಸ್ಥೆಯ ನಾಗೇಶ್, ವಿನಯ್, ಅರುಣ್ ಕುಮಾರ, ಅಕ್ಷಯ್ ಕುಮಾರ, ದೇವರಾಜ, ಶಂಕರ್, ನಂದಿಗುಡಿ ಶಾಲೆಯ ಮುಖ್ಯೋಪಾಧ್ಯಾಯ ಪೀರು ನಾಯಕ್, ವಾಸನ ಶಾಲೆಯ ಶಿಕ್ಷಕ ಭಾನುವಳ್ಳಿ ಮಾರುತಿ, ಹರಿಹರ ತಾ. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಶರಣ್ ಕುಮಾರ ಹೆಗಡೆ ಹಾಗೂ ಪೋಷಕರು ಈ ವೇಳೆ ಹಾಜರಿದ್ದರು. ಇದೇ ದಿನ ಪ್ರತಿಬಿಂಬ ಟ್ರಸ್ಟ್ ಹಾಗೂ ಕೋಷಂಟ್ ಟೆಕ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರು ಬಿಳಸನೂರಿನ ಸರ್ಕಾರಿ ಪ್ರೌಢಶಾಲೆ, ಧೂಳೆಹೊಳೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮತ್ತು ಜಿಗಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳನ್ನೂ ದತ್ತು ಪಡೆದು ಅಗತ್ಯ ಸಾಮಗ್ರಿಗಳನ್ನು ವಿತರಿಸಿದರು.

# ಗೂಗಲ್ : ಎನ್.ಸಿ.ಎಲ್.ಎ.ಟಿ. ತೀರ್ಪಿನಿಂದ ಆವಿಷ್ಕಾರಕ್ಕೆ ಅನುಕೂಲ

ನವದೆಹಲಿ, ಏ. 2- ಗೂಗಲ್ ವಿಷಯಕ್ಕೆ ಸಂಬಂಧಿಸಿದಂತೆ ಎನ್.ಸಿ.ಎಲ್.ಎ.ಟಿ.ಯ ಮೇಲ್ಮನವಿ ಟ್ರಿಬ್ಯೂನಲ್ ನೀಡಿರುವ ತೀರ್ಪು ಮುಕ್ತ ಆವಿಷ್ಕಾರದ ಮಾರುಕಟ್ಟೆ ತೆರೆಯಲಿದೆ ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ಎನ್. ವೆಂಕಟರಮಣನ್ ಹೇಳಿದ್ದಾರೆ.

ಗೂಗಲ್‌ನ ಅಂಡ್ರಾಯ್ಡ್ ತಂತ್ರಾಂಶಕ್ಕೆ ಸಂಬಂಧಿಸಿದಂತೆ, ಭಾರತೀಯ ಸ್ಪರ್ಧಾ ಆಯೋಗವು ಎನ್.ಸಿ.ಎಲ್.ಎ.ಟಿ.ಯಲ್ಲಿ ಮೇಲ್ಮನವಿ ಸಲ್ಲಿಸಿತ್ತು. ಆಯೋಗದ ಪರವಾಗಿ ವೆಂಕಟರಮಣನ್ ವಾದ ಮಂಡಿಸಿದ್ದರು.

ತೀರ್ಪಿನ ಬಗ್ಗೆ ಪ್ರತಿಕ್ರಿಯೆ ನೀಡಿರುವ ಅವರು, ಕಂಪನಿಯೊಂದು ಪ್ರಾಬಲ್ಯ ಹೊಂದುವುದರ ಬಗ್ಗೆ ಜಾಗತಿಕವಾಗಿ ತೆಗೆದುಕೊಳ್ಳಲಾಗುತ್ತಿರುವ ಕ್ರಮಗಳಿಗೆ ಅನುಗುಣವಾಗಿ ಎನ್.ಸಿ.ಎಲ್.ಎ.ಟಿ. ತೀರ್ಪು ಇದೆ ಎಂದಿದ್ದಾರೆ.

ಅನುಚಿತ ಉದ್ಯಮ ಪದ್ಧತಿಗಳನ್ನು ತಡೆಯುವುದಕ್ಕೆ ಸಂಬಂಧಿಸಿದಂತೆ ಸ್ಪರ್ಧಾ ಆಯೋಗ ಆರು ಶಿಫಾರಸ್ಸು ಗಳನ್ನು ಮಾಡಿತ್ತು. ಈ ತೀರ್ಪು ಶೇ.99 ರಷ್ಟು ಆಯೋಗದ ಆಶಯಗಳಿಗೆ ಅನು ಗುಣವಾಗಿದೆ ಎಂದವರು ತಿಳಿಸಿದ್ದಾರೆ.

ಪ್ರಾಬಲ್ಯದ ದುರ್ಬಳಕೆ ಇಲ್ಲವಾ ದಾಗ ಮುಕ್ತ ಹಾಗೂ ನ್ಯಾಯೋಚಿತ ಮಾರುಕಟ್ಟೆಯಲ್ಲಿ ವೈಜ್ಞಾನಿಕ ಬೆಳವಣಿಗೆ ಮತ್ತು ಆವಿಷ್ಕಾರ ಗಳಾಗುತ್ತವೆ. ಹೆಚ್ಚು ನವೋದ್ಯಮಗಳು, ಉಪಕರಣಗಳ ಉತ್ಪಾದಕರು ಹಾಗೂ ಗ್ರಾಹಕರು ಬರುತ್ತಾರೆ. ಯಥಾಸ್ಥಿತಿಯ ದೋಷ ನಿವಾರಣೆಯಾಗುತ್ತದೆ ಎಂದವರು ಅಭಿಪ್ರಾಯ ಪಟ್ಟಿದ್ದಾರೆ.


ಎನ್.ಸಿ.ಎಲ್.ಎ.ಟಿ. ತೀರ್ಪಿನ ಕಾರಣದಿಂದಾಗಿ ಮೇಕ್ ಇನ್ ಇಂಡಿಯಾ ಹಾಗೂ ನವೋದ್ಯಮ ಬೆಳವ ಣಿಗೆ ಗಳ ಅವಳಿ ದೃಷ್ಟಿಕೋನಕ್ಕೆ ಅಡಿ ಪಾಯ ದೊರೆತಿದೆ ಎಂದರು.

ಅಂಡ್ರಾಯ್ಡ್ ತಂತ್ರಾಂಶಕ್ಕೆ ಸಂಬಂಧಿ ಸಿದಂತೆ ಗೂಗಲ್‌ಗೆ 1,338 ಕೋಟಿ ರೂ.ಗಳ ದಂಡ ವಿಧಿಸಲಾಗಿತ್ತು. ನ್ಯಾಯೋ ಚಿತ ವ್ಯಾಪಾರಕ್ಕೆ ಸಂಬಂಧಿಸಿದಂತೆ ಆರು ಶಿಫಾರಸ್ಸುಗಳನ್ನು ಎತ್ತಿ ಹಿಡಿದಿದ್ದರೆ, ನಾಲ್ಕನ್ನು ತಳ್ಳಿ ಹಾಕಲಾಗಿತ್ತು.

ಈ ತೀರ್ಪು ಜಾಗತಿಕ ಮಟ್ಟದಲ್ಲೂ ಸಹ ಉತ್ತಮ ಸ್ಪರ್ಧಾ ಕಾಯ್ದೆಯಾಗಲಿದೆ ಎಂದು ವೆಂಕಟರಮಣನ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಅಂಡ್ರಾಯ್ಡ್‌ಗೆ ಸಂಬಂಧಿಸಿದಂತೆ 189 ಪುಟಗಳ ತೀರ್ಪು ನೀಡಿದ್ದ ಎನ್.ಸಿ.ಎಲ್.ಎ.ಟಿ., ಆರಂಭಿಕ ಹಂತದಲ್ಲಿ ಫೋನ್ ಸೆಟ್ ಮಾಡುವಾಗ ಗ್ರಾಹಕರು ತಾವು ಬಯಸುವ ಶೋಧಕ ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಬೇಕು. ಗೂಗಲ್‌ನ ಆಪ್‌ಗಳನ್ನು ಮೊದಲೇ ಅಳವಡಿಸುವಂತೆ ಉಪಕರಣಗಳ ಉತ್ಪಾದಕರಿಗೆ ನಿರ್ಬಂಧಿಸಬಾರದು ಎಂದು ತಿಳಿಸಿತ್ತು.

# ಕಾಂಗ್ರೆಸ್ ಮೊದಲು ತನ್ನ ಮನೆ ಸರಿಪಡಿಸಿಕೊಳ್ಳಲಿ : ಹೆಚ್.ಡಿ.ದೇವೇಗೌಡ



ಬೆಂಗಳೂರು, ಏ. 2 – ಮುಂಬರುವ ಲೋಕಸಭಾ ಚುನಾವಣೆಗೆ ಮುಂಚೆ ಪ್ರತಿಪಕ್ಷಗಳಲ್ಲಿ ಒಗ್ಗಟ್ಟು ತರುವ ಪ್ರಯತ್ನಗಳ ನಡುವೆ ಹೇಳಿಕೆ ನೀಡಿರುವ ಜೆಡಿಎಸ್ ವರಿಷ್ಠ ಹಾಗೂ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ, ಕಾಂಗ್ರೆಸ್ ಮೊದಲು ತನ್ನ ಮನೆ ಸರಿಪಡಿಸಿಕೊಳ್ಳಬೇಕು ಎಂದಿದ್ದಾರೆ.

ಪ್ರತಿಪಕ್ಷಗಳಿಗೆ ಸಾಕಷ್ಟು ಆಯ್ಕೆಗಳಿವೆ. ದೇಶ ನಾಯಕತ್ವದಿಂದ ಸಮೃದ್ಧವಾಗಿದೆ ಎಂದೂ ಅವರು ಹೇಳಿದ್ದಾರೆ.

ಕರ್ನಾಟಕದ ಚುನಾವಣೆಯು ಈ ವರ್ಷ ನಡೆಯಲಿರುವ ಇತರೆ ರಾಜ್ಯಗಳ ಚುನಾವಣೆಗೆ ಹಾಗೂ 2024ರ ಲೋಕಸಭಾ ಚುನಾವಣೆ ಮಾರ್ಗಸೂಚಿ ಯಾಗಿದೆ ಎಂದವರು ಹೇಳಿದರು.

ಮುಂಬರುವ ಮೇ 10ರ ವಿಧಾನ ಸಭಾ ಚುನಾ ವಣೆ ಕುರಿತು ಮಾತ ನಾಡಿ ರುವ ದೇವೇ ಗೌಡರು, ಜೆಡಿಎಸ್ ಅಧಿಕಾ ರಕ್ಕೆ ಬರಲಿದೆ. ಸಾಮಾಜಿಕ ಸಹಭಾಗಿತ್ವ ಹಾಗೂ ಅಭಿವೃದ್ಧಿ ದೃಷ್ಟಿಕೋನದ ಪಂಚರತ್ನ ಕಾರ್ಯಕ್ರಮಗಳಿಂದಾಗಿ ಗೆಲ್ಲುತ್ತೇವೆ ಎಂದಿದ್ದಾರೆ.

ಜೆಡಿಎಸ್ ಕೇವಲ ಹಳೆ ಮೈಸೂರು ಪ್ರಾಂತ್ಯಕ್ಕೆ ಸೀಮಿತ ಎಂಬುದು ರಾಷ್ಟ್ರೀಯ ಪಕ್ಷಗಳ ತಂತ್ರಗಾರಿಕೆಯ ಪ್ರಚಾರ ಎಂದವರು ಹೇಳಿದ್ದಾರೆ. ರಾಷ್ಟ್ರೀಯ ಪಕ್ಷಗಳು ದೊಡ್ಡ ಹಾಗೂ ಸುಳ್ಳು ಹೇಳಿಕೆಗಳನ್ನು ನೀಡುತ್ತವೆ ಎಂದವರು ಟೀಕಿಸಿದ್ದಾರೆ.

ಹಳೆ ಮೈಸೂರು ಭಾಗದಲ್ಲಿ ಪಕ್ಷಕ್ಕೆ ಹೆಚ್ಚು ಬೆಂಬಲ ದೊರೆತಿದ್ದು, ಇದಕ್ಕಾಗಿ ನಾವು ಧನ್ಯವಾದ ಸಲ್ಲಿಸುತ್ತೇವೆ. ಈ ಬಾರಿ ನಾವು ರಾಜ್ಯದ ಎಲ್ಲಾ ಪ್ರಾಂತ್ಯಗಳಲ್ಲಿ ಯಶಸ್ಸು ಕಾಣಲಿದ್ದೇವೆ ಎಂದು ದೇವೇಗೌಡರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ರಾಜ್ಯಾದ್ಯಂತ ಜೆಡಿಎಸ್ ಉತ್ತಮ ಸಾಧನೆ ತೋರಲಿದೆ. ನಾವು ವಿಭಜನೆಯ ಅಜೆಂಡಾದೊಂದಿಗೆ ಮತಗಳನ್ನು ಕೇಳುತ್ತಿಲ್ಲ. ಸಾಮಾಜಿಕ ಸಹಭಾಗಿತ್ವ ಹಾಗೂ ಅಭಿವೃದ್ಧಿ ದೃಷ್ಟಿಕೋನದ ಪಂಚರತ್ನದ ಮೂಲಕ ಮತಗಳನ್ನು ಕೇಳುತ್ತಿದ್ದೇವೆ ಎಂದವರು ತಿಳಿಸಿದರು.

# ಸಾಹಸ ಪ್ರವಾಸೋದ್ಯಮಕ್ಕೆ ಕಾಯ್ದೆ ರೂಪಿಸಲು ಕೇಂದ್ರದ ಕ್ರಮ

ನವದೆಹಲಿ, ಏ. 2- ಸಾಹಸ ಪ್ರವಾಸೋ ದ್ಯಮಕ್ಕಾಗಿ ಕಾಯ್ದೆಯೊಂದನ್ನು ರೂಪಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ಈ ಕಾಯ್ದೆಯ ಮೂಲಕ ರಾಜ್ಯ ಮಟ್ಟದಲ್ಲಿ ಸುರಕ್ಷತಾ ಸಂಸ್ಥೆಗಳನ್ನು ಸ್ಥಾಪಿಸಲಾಗುವುದು, ನಿಯಮ ಉಲ್ಲಂಘಿಸಿದವರಿಗೆ ದಂಡ ವಿಧಿಸಲಾಗುವುದು ಹಾಗೂ ಸಾಹಸ ಪ್ರವಾಸೋದ್ಯಮಕ್ಕೆ ವಿಮೆ ಯೋಜನೆಗಳನ್ನೂ ಒದಗಿಸಲಾಗುವುದು ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಾಹಸ ಪ್ರವಾಸೋದ್ಯಮ ಮಾದರಿ ಕಾಯ್ದೆಯನ್ನು ರಾಜ್ಯಗಳಿಗೆ ವಿತರಿಸಲಾಗಿದ್ದು, ಈ ಬಗ್ಗೆ ಪ್ರತಿಕ್ರಿಯೆ ದಾಖಲಿಸುವಂತೆ ಕೇಳಲಾಗಿದೆ. ಆರು ರಾಜ್ಯಗಳು ಇದುವರೆಗೂ ಪ್ರತಿಕ್ರಿಯೆ ನೀಡಿವೆ ಎಂದು ಪ್ರವಾಸೋದ್ಯಮ ಸಚಿವಾಲಯ ಹೇಳಿದೆ.

ಪ್ರವಾಸೋದ್ಯಮ ರಾಜ್ಯಗಳ ವಿಷಯ ವಾಗಿದೆ. ಆದರೂ, ಈ ಶಾಸನದ ಮೂಲಕ ರಾಜ್ಯಗಳಿಗೆ ನಿರ್ದೇಶನ ನೀಡಲು ಕೇಂದ್ರ ಸರ್ಕಾರ ಬಯಸಿದೆ ಎಂದು ಪಂಜಾಬ್, ಉತ್ತರಾಖಂಡ ಹಾಗೂ ತ್ರಿಪುರಾಗಳು ಹೇಳಿವೆ.

ರಾಜ್ಯಗಳ ಪ್ರವಾಸೋದ್ಯಮ ನಿರ್ದೇಶನಾಲಯದ ವ್ಯಾಪ್ತಿಗೆ ಬರುವ ಸಾಹಸ ಪ್ರವಾಸೋದ್ಯಮ ಸುರಕ್ಷತಾ ವಿಭಾಗ ರಚಿಸಲು ಕೇಂದ್ರ ಸರ್ಕಾರ ಪ್ರಸ್ತಾಪಿಸಿದೆ.

ವಾರ್ಷಿಕ ಸುರಕ್ಷತಾ ಲೆಕ್ಕ ಪರಿಶೋಧನೆ ಹಾಗೂ ಭೌತಿಕ ತಪಾಸಣೆಗೂ ವ್ಯವಸ್ಥೆ ಕಲ್ಪಿಸಲು ಉದ್ದೇಶಿಸಲಾಗಿದೆ. ರಾಜ್ಯ ಸರ್ಕಾರ ಯಾವುದೇ ತಾಣವನ್ನು ಸಾಹಸ ಪ್ರವಾಸೋದ್ಯಮ ವಲಯ ಎಂದು ಗುರುತಿಸಬಹುದು. ಈ ವಲಯವನ್ನು ಅಭಿವೃದ್ಧಿ ಪಡಿಸಿ ಪ್ರವಾಸಕ್ಕೆ ಉತ್ತೇಜನ ನೀಡಬಹುದು. ಸಾಹಸ ಪ್ರವಾಸೋದ್ಯಮಕ್ಕೆ ಮಾರ್ಗದರ್ಶಕರ ನೇಮಕಕ್ಕೂ ಪ್ರಸ್ತಾಪಿಸಲಾಗಿದೆ.

ಸಾಹಸ ಪ್ರವಾಸೋದ್ಯಮ ನೋಂದಣಿ ಮಾಡಿಕೊಳ್ಳದೇ ಇರುವುದನ್ನು ಶಿಕ್ಷಾರ್ಹ ಮಾಡಲೂ ಸಹ ಪ್ರಸ್ತಾಪಿಸಲಾಗಿದೆ. ನಿಯಮ ಉಲ್ಲಂಘಿಸಿದವರಿಗೆ ಎಚ್ಚರಿಕೆ, ದಂಡ, ಅನುಮತಿ ರದ್ದತಿ ಹಾಗೂ ಜೈಲು ಶಿಕ್ಷೆಗೂ ಪ್ರಸ್ತಾಪಿಸಲಾಗಿದೆ.

# ನಿಷೇಧದ ನಡುವೆಯೂ ಇ-ಸಿಗರೇಟ್ ವ್ಯಾಪಕ

(1ನೇ ಪುಟದಿಂದ) ಲಭ್ಯತೆಯ ಬಗ್ಗೆ ಪರಿಶೀಲನೆ ನಡೆಸಲಾಗಿತ್ತು. ಆನ್‌ಲೈನ್ ಹಾಗೂ ಆಫ್‌ಲೈನ್ ಎರಡರಲ್ಲೂ ಸಮೀಕ್ಷೆ ನಡೆಸಲಾಗಿತ್ತು.

ಕೆಲವು ಅಂಗಡಿಯವರು ಶಿಕ್ಷಣ ಸಂಸ್ಥೆಗಳ ಬಳಿಯೇ ಮಾರಾಟ ಮಾಡುತ್ತಿದ್ದಾರೆ. ಇನ್ನು ಕೆಲವರು ಅಂಗಡಿಗಳಲ್ಲಿ ಮಾರದೇ, ಮನೆ ಬಾಗಿಲಿಗೆ ತಲುಪಿಸುತ್ತಿದ್ದಾರೆ.

ಇನ್ನು ಕೆಲ ವೆಬ್ ತಾಣಗಳು ವಯೋಮಾನ ಪರಿಶೀಲಿಸಿದರೆ, ಇನ್ನು ಕೆಲವರು 18 ಮೀರಿದೆ ಎಂಬುದನ್ನು ಟಿಕ್ ಮಾಡಿ ಸರಬರಾಜು ಮಾಡುತ್ತಿವೆ.

ಯುವಕರು ಇ-ಸಿಗರೇಟ್ ವ್ಯಸನಕ್ಕೆ ಸಿಲುಕುವುದನ್ನು ತಡೆಯಲು ನಿಷೇಧ ಹೇರಲಾಗಿತ್ತು. ಆದರೆ, ಈ ನಿಷೇಧ ಜಾರಿ ದುರ್ಬಲವಾಗಿದೆ. ಕಡಿಮೆ ಬೆಲೆಯ ಬ್ರಾಂಡ್ ರಹಿತ ಚೀನಾ ನಿರ್ಮಿತ ಇ-ಸಿಗರೇಟುಗಳ ವ್ಯಾಪಾರ ಹೆಚ್ಚಾಗಿದೆ. ಇದನ್ನು ತಡೆಯಲು ಕೇಂದ್ರ ಹಾಗೂ ರಾಜ್ಯ ಮಟ್ಟದಲ್ಲಿ ಸುಯೋಜಿತ ಕ್ರಮದ ಅಗತ್ಯವಿದೆ ಎಂದು ವಾಲಂಟರಿ ಹೆಲ್ತ್ ಅಸೋಸಿಯೇಷನ್ ಆಫ್ ಇಂಡಿಯಾದ ಮುಖ್ಯ ಕಾರ್ಯಕಾರಿ ಅಧಿಕಾರಿ ಭಾವನಾ ಮುಖ್ಯೋಪಾಧ್ಯಾಯ್ ಹೇಳಿದ್ದಾರೆ.

ಇ-ಸಿಗರೇಟುಗಳನ್ನು ಮಾರಿದವರಿಗೆ ದುಬಾರಿ ದಂಡ ಹಾಗೂ ಜೈಲು ಶಿಕ್ಷೆಯೂ ಆಗುತ್ತದೆ. ಆದರೂ ವ್ಯಾಪಕವಾಗಿ ಇವುಗಳು ಲಭ್ಯವಿವೆ. ನಿಷೇಧ ಸಂಪೂರ್ಣ ಜಾರಿಗೆ ಸಮರ್ಪಕ ಕ್ರಮಗಳನ್ನು ತೆಗೆದುಕೊಂಡಿಲ್ಲ ಎಂದು ಮ್ಯಾಕ್ಸ್ ಇನ್‌ಸ್ಟಿಟ್ಯೂಟ್ ಆಫ್ ಕ್ಯಾನ್ಸರ್ ಕೇರ್‌ನ ಅಧ್ಯಕ್ಷ ಡಾ. ಹರಿತ್ ಚತುರ್ವೇದಿ ಹೇಳಿದ್ದಾರೆ.

ಇ-ಸಿಗರೇಟುಗಳ ನಿಷೇಧ ಜಾರಿ ಕ್ರಮ ದುರ್ಬಲವಾಗಿದೆ. ವಿಶೇಷ ಅಭಿಯಾನ ಹಾಗೂ ದಾಳಿಗಳ ಮೂಲಕ ಕಟ್ಟುನಿಟ್ಟಿನ ಕ್ರಮಗಳಿಗೆ ಮುಂದಾಗಬೇಕು ಎಂದು ಕೇಂದ್ರ ಆರೋಗ್ಯ ಸಚಿವಾಲಯ ಇತ್ತೀಚೆಗೆ ರಾಜ್ಯಗಳಿಗೆ ತಿಳಿಸಿತ್ತು.

# ಠಾಕ್ರೆ ವಿರುದ್ಧದ ರಾಣೆ ಹೇಳಿಕೆ ದ್ವೇಷವಲ್ಲ : ಕೋರ್ಟ್ ತೀರ್ಪು

(1ನೇ ಪುಟದಿಂದ) ಸ್ವಾತಂತ್ರ್ಯ ದಿನಾಚರಣೆಯ ಭಾಷಣ ಮಾಡುತ್ತಿದ್ದರು. ಆಗ ಯಾವ ವರ್ಷದಲ್ಲಿ ಸ್ವಾತಂತ್ರ್ಯ ದೊರೆತಿದೆ ಎಂಬುದನ್ನು ಮರೆತಿದ್ದರು ಎಂದು ರಾಣೆ ಆರೋಪಿಸಿದ್ದರು.

ಸ್ವಾತಂತ್ರ್ಯ ದೊರೆತು ಎಷ್ಟು ವರ್ಷಗಳಾಗಿವೆ ಎಂಬುದನ್ನು ಠಾಕ್ರೆ ಲೆಕ್ಕ ಹಾಕುತ್ತಿರುವ ದೃಶ್ಯ ಪ್ರಸಾರವಾಗಿತ್ತು. ನಾನೇನಾದರೂ ಆ ಜಾಗದಲ್ಲಿದ್ದರೆ ಠಾಕ್ರೆ ಕಪಾಳಕ್ಕೆ ಭಾರಿಸಿರುತ್ತಿದ್ದೆ ಎಂದು ರಾಣೆ ಹೇಳಿದ್ದರು.

ಈ ಹಿನ್ನೆಲೆಯಲ್ಲಿ ಅವರ ವಿರುದ್ಧ ಸಮುದಾಯಗಳ ನಡುವೆ ದ್ವೇಷ ಹರಡಿದ, ಸಾರ್ವಜನಿಕ ಕುಚೇಷ್ಠೆ ಮಾಡಿದ, ಶಾಂತಿ ಕದಡುವ ಪ್ರಯತ್ನ ನಡೆಸಿದ ಹಾಗೂ ಅಪರಾಧಿಕ ಬೆದರಿಕೆ ಹಾಕಿದ ಪ್ರಕರಣವನ್ನು ರಾಯಗಢದ ಮಹಾಡ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು.

ಈ ಬಗ್ಗೆ ವಿಚಾರಣೆ ನಡೆಸಿದ ರಾಯಗಢ ಅಲಿಬಾಗ್ ನ್ಯಾಯಾಲಯದ ನ್ಯಾಯಮೂರ್ತಿ ಎಸ್.ಡಬ್ಲ್ಯೂ. ಉಗಲೆ, ರಾಣೆ ಹೇಳಿಕೆ ವಿವಾದಾತ್ಮಕ ಹಾಗೂ ರಾಜಕೀಯವಾಗಿ ಸಂವೇದನಾ ರಹಿತ. ಕೇಂದ್ರ ಸಚಿವ ಸ್ಥಾನದಲ್ಲಿರುವವರಿಂದ ಇಂತಹ ಹೇಳಿಕೆ ನಿರೀಕ್ಷೆ ಇರುವುದಿಲ್ಲ ಎಂದಿದ್ದಾರೆ.

ನಾನಾಗಿದ್ದರೆ ಕಪಾಳಕ್ಕೆ ಭಾರಿಸಿರುತ್ತಿದ್ದೆ ಎಂದು ಹೇಳುವುದು ಅಪರಾಧಿಕ ಬೆದರಿಕೆಯ ಸ್ಪಷ್ಟ ಸ್ವರೂಪವಲ್ಲ. ತಕ್ಷಣವೇ ಬೆದರಿಕೆ ಇದ್ದಾಗ ಮಾತ್ರ ಅಪರಾಧಿಕ ಬೆದರಿಕೆಯ ವ್ಯಾಪ್ತಿಗೆ ಬರುತ್ತದೆ ಎಂದು ನ್ಯಾಯಾಲಯ ತಿಳಿಸಿದೆ.

ರಾಣೆ ಹೇಳಿಕೆ ಸಮುದಾಯಗಳ ನಡುವೆ ಜಾತಿ, ಧರ್ಮ, ಜನಾಂಗಗಳ ನಡುವೆ ದ್ವೇಷ ತರುವಂಥದಲ್ಲ.

ರಾಜಕೀಯ ಕಾರಣಕ್ಕಾಗಿ ರಾಣೆ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಅವರ ಪರ ವಕೀಲರು ನ್ಯಾಯಾಲಯದಲ್ಲಿ ವಾದ ಮಂಡಿಸಿದ್ದರು.

# ವಚನ ಸಾಹಿತ್ಯದಿಂದ ಪರಿವರ್ತನೆ ಸಾಧ್ಯ



ದಾವಣಗೆರೆ, ಏ. 2- ವ್ಯಕ್ತಿಯ ಮನಸ್ಸನ್ನು ಪರಿವರ್ತನೆ ಮಾಡುವ ಶಕ್ತಿ ವಚನ ಸಾಹಿತ್ಯಕ್ಕಿದೆ ಎಂದು ಎವಿಕೆ ಮಹಿಳಾ ಪದವಿ ಪೂರ್ವ ಕಾಲೇಜು ಉಪನ್ಯಾಸಕಿ ಡಾ. ಗೀತಾ ಬಸವರಾಜ್ ಹೇಳಿದರು.

ನಗರದ ಎ.ಆರ್.ಜಿ. ಕಾಲೇಜಿನಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ದಾವಣಗೆರೆ ನಗರ ಘಟಕ, ಎ.ಆರ್.ಜಿ. ಕಲಾ ಮತ್ತು ವಾಣಿಜ್ಯ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರದ ಕನ್ನಡ ವಿಭಾಗದ ವತಿಯಿಂದ ಹಮ್ಮಿಕೊಂಡಿದ್ದ ದತ್ತಿ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ 'ವಚನ ಸಾಹಿತ್ಯದಲ್ಲಿ ಮಾನವೀಯ ಮೌಲ್ಯಗಳು' ಕುರಿತು ಮಾತನಾಡಿದರು.

ಶರಣರ ವಿಚಾರಧಾರೆ ಇಂದಿನ ಸಮಾಜಕ್ಕೆ ಅತ್ಯಗತ್ಯ. ವರ್ಣಭೇದ, ಲಿಂಗಭೇದವಿಲ್ಲದ ಸಮಾನತೆಯ ಸಮಾಜ ನಿರ್ಮಾಣ ಮಾಡಿದವರು 12 ನೇ ಶತಮಾನದ ಶರಣರು ಎಂದು ಹೇಳಿದರು.

ವಚನ ಸಾಹಿತ್ಯ ಅಧ್ಯಯನ ಮನುಷ್ಯನನ್ನು ಸಂಸ್ಕಾರವಂತನನ್ನಾಗಿ ಮಾಡಿ, ಸದ್ಗುಣಗಳನ್ನು ಬೆಳೆಸುತ್ತದೆ. ವಿಕೃತ ಮನಸ್ಸನ್ನು ಸಾತ್ವಿಕ ಮನಸ್ಸನ್ನಾಗಿ ಪರಿವರ್ತಿಸುತ್ತದೆ ಎಂದರು.

ವಚನ ಸಾಹಿತ್ಯ ಎರವಲು ತಂದದ್ದಲ್ಲ. ಅದು ಕನ್ನಡದ ಸ್ವಯಾರ್ಜಿತ ಆಸ್ತಿ ಎಂದು ಅಭಿಪ್ರಾಯಪಟ್ಟರು.

ಎ.ಆರ್.ಜಿ. ಕಲಾ ಮತ್ತು ವಾಣಿಜ್ಯ ಕಾಲೇಜಿನ ಪ್ರಾಚಾರ್ಯ ಡಾ.ಜಿ.ಬಿ. ಬೋರಯ್ಯ ಅಧ್ಯಕ್ಷತೆ ವಹಿಸಿದ್ದರು. ಪರಿಷತ್ ನಗರ ಘಟಕದ ಅಧ್ಯಕ್ಷ ಎ. ಪರಮೇಶ್ವರಪ್ಪ ಸಿರಿಗೆರೆ ಕಾರ್ಯಕ್ರಮ ಉದ್ಘಾಟಿಸಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ, ನಗರ ಘಟಕದ ಗೌರವಾಧ್ಯಕ್ಷ ಎಂ.ಎಸ್. ನಾಗರಾಜಪ್ಪ, ಎ.ಆರ್.ಜಿ.ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಕೆ. ಬೊಮ್ಮಣ್ಣ, ಐಕ್ಯೂಎಸಿ ಸಂಯೋಜಕಿ ಪ್ರೊ. ಜೆ. ಅನಿತಕುಮಾರಿ, ಸಹಾಯಕ ಪ್ರಾಧ್ಯಾಪಕ ಡಾ.ಹೆಚ್.ಆರ್. ತಿಪ್ಪೇಸ್ವಾಮಿ, ಉಪನ್ಯಾಸಕಿ ಸುಮತಿ ಜಯ್ಯಪ್ಪ, ದತ್ತಿ ದಾನಿಗಳಾದ ಶಾಮನೂರು ಗೌಡಪ್ಪ ಬಸವರಾಜಪ್ಪ ಮತ್ತಿತರರು ಉಪಸ್ಥಿತರಿದ್ದರು.

ಕುಮಾರ್ ಆನೆಕೊಂಡ ಸ್ವಾಗತಿಸಿದರು. ತಿಪ್ಪೇಸ್ವಾಮಿ ನಿರೂಪಿಸಿದರು. ಲೀಲಾ ಸೋಮಣ್ಣ ದತ್ತಿ ದಾನಿಗಳ ಪರಿಚಯ ಮಾಡಿಕೊಟ್ಟರು. ಶೈಲಾ ಪಾಲಾಕ್ಷಪ್ಪ ವಂದಿಸಿದರು.

# ನೀತಿ ಸಂಹಿತೆ: ಅಂಬೇಡ್ಕರ್ ಜಯಂತಿ ನಿರ್ಲಕ್ಷ್ಯ ಬೇಡ

ದಾವಣಗೆರೆ, ಮಾ.2- ಚುನಾವಣಾ ನೀತಿ ಸಂಹಿತೆ ಹೆಸರಲ್ಲಿ ಸಂವಿಧಾನ ಶಿಲ್ಪಿ ಅಂಬೇಡ್ಕರ್ ಜಯಂತಿಯನ್ನು ನಿರ್ಲಕ್ಷಿಸಬಾರದು. ಏ.14ರಂದು ಅಂಬೇಡ್ಕರ್ ಜಯಂತಿಯನ್ನು ಎಲ್ಲ ಸರ್ಕಾರಿ ಕಚೇರಿಗಳಲ್ಲಿ ಕಡ್ಡಾಯವಾಗಿ ಆಚರಿಸಬೇಕು ಎಂದು ಕರ್ನಾಟಕ ಭೀಮ್ ಸೇನೆ ಜಿಲ್ಲಾಧ್ಯಕ್ಷ ಆರ್. ಸೂರ್ಯಪ್ರಕಾಶ್ ಕೋರಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂಬೇಡ್ಕರ್ ಜಯಂತಿ ಆಚರಣೆಗೆ ಚುನಾವಣಾ ನೀತಿ ಸಂಹಿತೆ ಅಡ್ಡಿಯಾಗದಂತೆ ನೋಡಿಕೊಳ್ಳಬೇಕು.


ಸಾರ್ವಜನಿಕರಲ್ಲಿ ಈ ಕುರಿತು ಮಾಹಿತಿ ನೀಡಿ ಎಲ್ಲೆಡೆ ಅಂಬೇಡ್ಕರ್ ಜಯಂತಿ ಆಚರಣೆಯಾಗುವಂತೆ ಮಾಡಬೇಕು. ಈ ಕುರಿತು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗುವುದು ಎಂದರು.

ಭೀಮ್ ಸೇನೆ ಸಂಘಟನೆಯಿಂದ ಅಂದು ನಗರದ ಗಾಂಧಿ ವೃತ್ತದಿಂದ ಪಿ.ಬಿ. ರಸ್ತೆ, ಎವಿಕೆ ಕಾಲೇಜು ರಸ್ತೆ ಮೂಲಕ ಅಂಬೇಡ್ಕರ್ ವೃತ್ತದವರೆಗೆ ಪಥಸಂಚಲನ ನಡೆಸಲಾಗುವುದು. ಅಂಬೇಡ್ಕರ್ ಪ್ರತಿಮೆಗೆ ಹಾಲಿನ ಅಭಿಷೇಕ ಮಾಡಿ, ಮಾಲಾರ್ಪಣೆ ಸಹ ಮಾಡಲಾಗುವುದು ಎಂದರು.

ಸಂಘಟನೆಯ ಪ್ರಮುಖರಾದ ಮಂಜುನಾಥ್, ಎನ್. ಸಂತೋಷ್, ಬಿ.ಮಂಜುನಾಥ್, ರಾಘವೇಂದ್ರ ಇನ್ನಿತರರು ಪತ್ರಿಕಾಗೋಷ್ಠಿಯಲ್ಲಿದ್ದರು.

# ಸಾಂಕ್ರಾಮಿಕ ರೋಗಗಳ ನಿರ್ಮೂಲನೆಯಿಂದ ದೇಶ ಅಭಿವೃದ್ಧಿ

## ಕ್ಷಯರೋಗ ನಿರ್ಮೂಲನಾ ದಿನಾಚರಣೆ ಕಾರ್ಯಕ್ರಮದಲ್ಲಿ ಆರೋಗ್ಯಾಧಿಕಾರಿ ಡಾ. ಚಂದ್ರಮೋಹನ್



ದಾವಣಗೆರೆ, ಏ. 2- ಭಾರತವನ್ನು 2025 ರ ಒಳಗೆ ಕ್ಷಯರೋಗ ಮುಕ್ತ ದೇಶವನ್ನಾಗಿ ಮಾಡಬೇಕಾಗಿದೆ. ಆದ್ದರಿಂದ 'ಕ್ಷಯ ರೋಗವನ್ನು ಸೋಲಿಸೋಣ, ದೇಶವನ್ನು ಉಳಿಸೋಣ' ಎಂದು ತಾಲ್ಲೂಕು ಆರೋಗ್ಯ ಅಧಿಕಾರಿ ಡಾ. ಚಂದ್ರಮೋಹನ್ ಹೇಳಿದರು.

ಹರಿಹರ ನಗರದಲ್ಲಿ ತಾಲ್ಲೂಕು ಮಟ್ಟದ ಕ್ಷಯ ರೋಗ ನಿರ್ಮೂಲನಾ ದಿನಾಚರಣೆ ಕಾರ್ಯಕ್ರಮಕ್ಕೆ ಹಸಿರು ನಿಶಾನೆ ತೋರುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಭಾರತವನ್ನು 2025 ರ ಒಳಗೆ ಕ್ಷಯರೋಗ ಮುಕ್ತ ದೇಶವನ್ನಾಗಿ ಮಾಡಬೇಕಾಗಿದೆ. ಆದುದರಿಂದ ಕ್ಷಯ ರೋಗವನ್ನು ಸೋಲಿಸೋಣ ದೇಶವನ್ನು ಉಳಿಸೋಣ ಎಂದು ಕ್ಷಯ ರೋಗದ ಕುರಿತು ಘೋಷಣೆಗಳನ್ನು ಕೂಗುವುದರೊಂದಿಗೆ ಜನರಲ್ಲಿ ಜಾಗೃತಿ ಮೂಡಿಸೋಣ ಹಾಗೂ ಈ ವರ್ಷದ ಘೋಷಣಾ ವಾಕ್ಯ ಹೌದು ನಾವು ಕ್ಷ ಯ ರೋ ಗ ವ ನ್ನು ಕೊನೆಗೊಳಿಸಬಹುದು. ಇದರ ಉದ್ದೇಶ ರೋಗವನ್ನು ನಿರ್ಮೂಲನೆ ಮಾಡಿ, ದೇಶವನ್ನು ರಕ್ಷಣೆ ಮಾಡೋಣ ಎನ್ನುವುದಾಗಿದೆ ಎಂದರು.

ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ನಾಗರಾಜ್ ಮಾತನಾಡಿ, ಕ್ಷಯ ರೋಗದ ಬಗ್ಗೆ ಕ್ರಿಯಾ ಯೋಜನೆ ಸಭೆ, ಕಾರ್ಯತಂತ್ರದ ಸಭೆ, ತಂಡ ಕಟ್ಟುವ ಸಭೆ, ತಂಡದ ಸದಸ್ಯರು ಒಟ್ಟಾಗಿ ಕೆಲಸ ಮಾಡುವ ಸಭೆಗಳನ್ನು ಆಯೋಜಿಸುವ ಮೂಲಕ ಕ್ಷಯ ರೋಗದ ಬಗ್ಗೆ ಜನ ಜಾಗೃತಿ ಮೂಡಿಸುವುದರ ತಂತ್ರಗಾರಿಕೆ ಯೊಂದಿಗೆ ಕ್ಷಯ ರೋಗವನ್ನು ನಿರ್ಮೂಲನೆ ಮಾಡಬೇಕಾಗಿದೆ ಎಂದರು.

ಜಾಥಾವು ನಗರದ ಮುಖ್ಯ ಬೀದಿಯಿಂದ ತಾಲ್ಲೂಕು ಆರೋಗ್ಯ ಅಧಿಕಾರಿಗಳ ಕಚೇರಿಗೆ ಬಂದು ಮುಕ್ತಾಯವಾಯಿತು.

ಕಾರ್ಯಕ್ರಮದಲ್ಲಿ ಡಾ. ವಿಶ್ವನಾಥ್, ಡಾ. ಮಹಮ್ಮದ್ ಅಲಿ,. ಡಾ. ಮಮತಾ, ಡಾ. ಕಲ್ಲೇಶ್, ಡಾ. ಯುವರಾಜ್, ತಾಲ್ಲೂಕು ಹಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿ ಶ್ರೀಮತಿ ಸುಧಾ, ತಾಲ್ಲೂಕು ಕ್ಷಯರೋಗ ಮೇಲ್ವಿಚಾರಕ ಮಂಜುನಾಥ, ಕ್ಷಯರೋಗ ನಿರ್ಮೂಲನ ಘಟಕದ ಸತೀಶ್, ಟಿ ಬಿ ಹೆಚ್.ಬಿ. ಶರೀಫ್, ಎಸ್.ಟಿ.ಎಲ್. ಎಸ್ ಕಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿಗಳು, ಶುಶ್ರೂಷಣಾಧಿಕಾರಿಗಳು ಹಾಗೂ ಆಶಾ ಕಾರ್ಯಕರ್ತರು ಭಾಗವಹಿಸಿದ್ದರು.

# ಜಿಎಂಐಟಿಯಲ್ಲಿ ಯುವ ಉತ್ಸವ - 2023



ದಾವಣಗೆರೆ, ಏ. 2- ನಗರದ ಜಿ.ಎಂ. ತಾಂತ್ರಿಕ ಮಹಾವಿದ್ಯಾಲಯ ಮತ್ತು ನೆಹರು ಯುವ ಕೇಂದ್ರ ದಾವಣಗೆರೆ, ಇವರ ಸಂಯುಕ್ತಾಶ್ರಯದಲ್ಲಿ ದಾವಣಗೆರೆ ನಗರದ ಜಿಎಂಐಟಿ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಯುವ ಉತ್ಸವ - 2023 ಕಾರ್ಯಕ್ರಮದ ನಿಮಿತ್ತ ಭಾಷಣ, ಕವನ ಬರವಣಿಗೆ, ಪೇಂಟಿಂಗ್, ಫೋಟೋಗ್ರಫಿ ಸ್ಪರ್ಧೆ ಹಾಗೂ ಸಾಂಸ್ಕೃತಿಕ ಹಾಗೂ ಜಾನಪದ ನೃತ್ಯ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಾ, ಯುವ ಉತ್ಸವ ಉದ್ದೇಶಗಳನ್ನು ಹಾಗೂ ಯುವಕರು ಇದರ ಲಾಭ ಪಡೆಯುವುದರ ಬಗ್ಗೆ ಜಾಗೃತಿ ಮೂಡಿಸಿದರು. ಡಾ. ಎ.ಹೆಚ್. ಶಿವಯೋಗಿಸ್ವಾಮಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಅನಿಲ್‌ಕುಮಾರ್, ಡಾ. ಎಂ.ಬಿ. ಸಂಜಯ್‌ಪಾಂಡೆ, ಭುಕ್ಯ ಸಂಜೀವ್, ಡಾ. ಹೆಚ್.ಎಸ್. ಓಂಕಾರಪ್ಪ, ಡಾ. ಬಿ.ಎನ್. ವೀರಭದ್ರಸ್ವಾಮಿ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಜೇನುಗೂಡು ಸಮಾಜದ ವಾರ್ಷಿಕೋತ್ಸವ



ದಾವಣಗೆರೆ, ಏ. 2 - ಜೇನುಗೂಡು ಮಹಿಳಾ ಸಮಾಜದ ವಾರ್ಷಿಕೋತ್ಸವ ಮತ್ತು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ವಿವಿಧ ಸಂಘ-ಸಂಸ್ಥೆಗಳಿಗೆ ಭಕ್ತಿ ಗೀತೆ ಸಮೂಹ ಗಾಯನ ಸ್ಪರ್ಧೆಯನ್ನು ಸದ್ಯೋ ಜಾತ ಮಠದಲ್ಲಿ ಏರ್ಪಡಿಸಲಾಗಿತ್ತು ತೀರ್ಪುಗಾರರಾಗಿ ಶ್ರೀಮತಿ ನೇತ್ರಾ ವರ್ಣೇಕರ್ ಆಗಮಿಸಿದ್ದರು.

ಕಾರ್ಯಕ್ರಮದ ಜೇನುಗೂಡು ಮಹಿಳಾ ಸಮಾಜದ ಅಧ್ಯಕ್ಷೆ ಸುಜಾತ ನಾಗೇಶ್ ವಹಿಸಿದ್ದರು, ಶ್ರೀಮತಿ ಕೊಟ್ರಮ್ಮ ಮುರುಗೇಶ್ ಸ್ವಾಗತಿಸಿದರು, ಪ್ರೀತಿ ಮಠದ ನಿರೂಪಿಸದರು. ಖಜಾಂಚಿ ವಿದ್ಯಾ ಭಾಸ್ಕರ್ ರೂಪ ಚೆನ್ನವೀರ ಸ್ವಾಮಿ, ಮಧು ಉಮೇಶ್ ಕಾರ್ಯದರ್ಶಿ ಉಪಸ್ಥಿತರಿದ್ದರು. ತೃತೀಯ ಬಹುಮಾನ ಜೇನುಗೂಡು ಮಹಿಳಾ ಸಮಾಜದ ಮೀನಾಕ್ಷಿ ವೆಂಕಟೇಶ್, ಶೈಲಜಾ ಕೊಟ್ರೇಶ್, ಸುಧಾ ಸಂತೋಷ್, ಜ್ಯೋತಿ ದೀಪಕ್, ತೃತೀಯ ಬಹುಮಾನ ವಿನೂತನ ಸಮಾಜದ ರೇಖಾ ಓಂಕಾರಪ್ಪ, ಶೈಲಜಾ ತಿಮ್ಮೇಶ್, ಮಮತಾ ಶ್ರೀಧರ್, ಭಾರತೀ ಗಣೇಶ, ಚೈತ್ರ ಜಗದೀಶ್ ಹಾಗೂ ದ್ವಿತೀಯ ಬಹುಮಾನ ಭುವನೇಶ್ವರಿ ತಂಡದ ಉಷಾ ಅರುಣ ಭಾರತಿ ಸುಕನ್ಯಾ ನಾಗರತ್ನ. ಪ್ರಥಮ ಬಹುಮಾನ ಅಕ್ಕಮಹಾದೇವಿ ಸಮಾಜದ ಶಾಂತ ಸುಮಾ, ಕವಿತಾ, ದಿವ್ಯ, ಮಂಜುಳಾ, ಬಹುಮಾನಗಳನ್ನು ಪಡೆದರು.

# ರಂಗ ಅನಿಕೇತನದಿಂದ 'ವಿಶ್ವ ರಂಗಭೂಮಿ ದಿನ'



ದಾವಣಗೆರೆ, ಏ.2- ನಗರದ 'ರಂಗ ಅನಿಕೇತನ ದಾವಣಗೆರೆ' ತಂಡದಿಂದ ಕಳೆದ ದಿನಾಂಕ 27 ರಂದು ಸೋಮೇಶ್ವರ ಶಾಲೆ ಆವರಣದಲ್ಲಿ 'ವಿಶ್ವ ರಂಗಭೂಮಿ ದಿನ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ತಂಡದ ನಟ ಕರಣ್ ತಮಟೆ ಬಡಿಯುವುದರೊಂದಿಗೆ ಕಾರ್ಯಕ್ರಮ ಆರಂಭವಾಯಿತು. ತಂಡದ ಅಧ್ಯಕ್ಷರಾದ ಹೆಚ್. ಎನ್ . ಸುಧಾ, ಜಂಟಿ ಕಾರ್ಯದರ್ಶಿ ವಿನಾಯಕ, ಖಜಾಂಚಿ ಡಾ. ಸೀಮಾ, ರಾಜೇಶ್ವರಿ, ಚೇತನ್, ದಿನೇಶ್ ತಂಡದ ಎಲ್ಲಾ ಸದಸ್ಯರು ಹಾಜರಿದ್ದರು. ಶ್ರೀಧರ್ ಎನ್. ಪ್ರಾಸ್ತಾವಿಕ ಭಾಷಣ ಮಾಡಿದರು.

2023ರ ರಂಗಭೂಮಿ ದಿನಾಚರಣೆಯ ಸಂದೇಶವನ್ನು ಅನಿತಾ ರತ್ನಕಲೆ ಓದಿದರು. ಭೂಮಿಕಾ ತಂಡದ ಜಾಹ್ನವಿ, ಅನುರಾಧ, ಸತ್ಯಭಾಮ ಹಾಜರಿದ್ದು ರಂಗ ಗೀತೆಗಳಿಗೆ ಧ್ವನಿಯಾದರು. ರಂಗ ತಂಡದವರು, ಉಮೇಶ್ ಬಾದರದಿನ್ನಿಯವರ, ಮೆಳೆಹಳ್ಳಿ ದೇವರಾಜ್ ನಿರ್ದೇಶನದ 'ಒಂದು ಸಾವಿನ ಸುತ್ತ' ನಾಟಕ ಪ್ರದರ್ಶಿಸಿದರು.

# ಬೆಳ್ಳೂಡಿ : ಯಶಸ್ವಿ ಕ್ಯಾನ್ಸರ್ ತಪಾಸಣಾ ಶಿಬಿರ



ಮಲೇಬೆನ್ನೂರು, ಏ. 2- ಬೆಳ್ಳೂಡಿ ಗ್ರಾಮದಲ್ಲಿರುವ ಶ್ರೀ ಪಟೇಲ್ ಗುರುಬಸಪ್ಪ ಶಾಲಾ ಆವರಣದಲ್ಲಿ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕ್ಯಾನ್ಸರ್ ತಪಾಸಣಾ ಮತ್ತು ಜಾಗೃತಿ ಶಿಬಿರವನ್ನು ವಿಶ್ವರಾಧ್ಯ ಕ್ಯಾನ್ಸರ್ ಆಸ್ಪತ್ರೆ ಮತ್ತು ಸಂಶೋಧನಾ ಸಂಸ್ಥೆ ಇವರ ಸಹಯೋಗದೊಂದಿಗೆ ನಡೆಸಲಾಯಿತು. ಶಿಬಿರದಲ್ಲಿ ಸುಮಾರು 100ಕ್ಕೂ ಹೆಚ್ಚು ಜನರು ಶಿಬಿರದಲ್ಲಿ ಭಾಗವಹಿಸಿದ್ದರು.

ವಿಶ್ವಾರಾಧ್ಯ ಕ್ಯಾನ್ಸರ್ ಆಸ್ಪತ್ರೆ ಮತ್ತು ಸಂಶೋಧನಾ ಸಂಸ್ಥೆ ಆಸ್ಪತ್ರೆಯ ಡಾ. ಇಬ್ರಾಹಿಂ ನಾಗನೂರು ಅವರು ಜಾಗೃತಿ ಕಾರ್ಯಕ್ರಮ ನಡೆಸಿಕೊಟ್ಟರು. ಆಸ್ಪತ್ರೆಯ ಸಿಬ್ಬಂದಿಗಳೊಂದಿಗೆ ಅಂಕೋಲಜಿ ವಿಭಾಗದ ಡಾ.ವಿಘ್ನೇಶ್ವರ ಗ್ರಾಮದ ನಾಗರಿಕರಿಗೆ ತಪಾಸಣೆ ನಡೆಸಿದರು.

ಕಾರ್ಯಕ್ರಮದಲ್ಲಿ ರೆಡ್ ಕ್ರಾಸ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆನಂದ್ ಜ್ಯೋತಿ, ನಿರ್ದೇಶಕರುಗಳಾದ ಶಿವಾನಂದ ಡಿ.ಎನ್, ಮೊಹಮ್ಮದ್ ಇನಾಯತ್‌ವುಲ್ಲಾ, ಎ.ಜೆ. ರವಿ ಕುಮಾರ್ ಹಾಗೂ ವ್ಯವಸ್ಥಾಪಕ ರವೀಂದ್ರ ನಾಥ್, ಸಮಾಲೋಚಕ ಶಿವಕುಮಾರ್, ಸಿಬ್ಬಂದಿಗಳಾದ ಪದ್ಮಾಬಾಯಿ, ವಿನಾಯಕ, ಗಿರೀಶ್ ಭಾಗವಹಿಸಿದ್ದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಬೆಳ್ಳೂಡಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಗಳು, ಬೆಳ್ಳೂಡಿ ಗ್ರಾಮ ಪಂಚಾಯತಿಯ ಅಧ್ಯಕ್ಷರು, ಸದಸ್ಯರು, ಆಶಾ ಕಾರ್ಯಕರ್ತೆ ಯರು ಮತ್ತು ಗುರುಬಸಪ್ಪ ಪ್ರೌಢಶಾಲೆಯ ಹಾಗೂ ಸರ್ಕಾರಿ ಹಿರಿಯ ಹಾಗೂ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರುಗಳು, ಊರಿನ ಪ್ರಮುಖರು ಉಪಸ್ಥಿತರಿದ್ದರು.

# ಧೂಳೆಹೊಳೆ ಪ್ರೌಢಶಾಲೆಗೆ ಉಚಿತ ಡೆಸ್ಕ್ ವಿತರಣೆ



ಮಲೇಬೆನ್ನೂರು, ಏ. 2- ಧೂಳೆಹೊಳೆ ಗ್ರಾಮದ ಜಿ.ಎಂ.ಸಿ.ಜಿ.ಪ್ರೌಢಶಾಲೆಗೆ ಬೆಂಗಳೂರಿನ ಆಕ್ವಿನ್ ಫೈನಾನ್ಷಿಯಲ್ ಸಲ್ಯೂಷನ್ ಪ್ರೈವೇಟ್ ಲಿಮಿಟೆಡ್ ಇವರು 1.80 ಲಕ್ಷ ರೂ. ಮೌಲ್ಯದ 20 ಡೆಸ್ಕ್‌ಗಳನ್ನು ಮಂಗಳವಾರ ಉಚಿತವಾಗಿ ನೀಡಿದರು. ಕಂಪನಿಯ ಇಂಜಿನಿಯರ್ ಬಸಯ್ಯ ಹಿರೇಮಠ್ ಅವರು ಡೆಸ್ಕ್‌ಗಳನ್ನು ಶಾಲೆಗೆ ಹಸ್ತಾಂತರ ಮಾಡಿದರು. ಹುಲುಗಿನಹೊಳೆ ಇಂಜಿನಿಯರ್ ಶ್ರೀನಿವಾಸ್, ಉಪನ್ಯಾಸಕ ಗಜೇಂದ್ರ, ಶಾಲಾ ಮುಖ್ಯ ಶಿಕ್ಷಕ ಡಿ.ಎಂ. ಮಂಜುನಾಥಯ್ಯ, ಶಿಕ್ಷಕರಾದ ಕೆ.ಎಂ.ಗುರುಬಸಯ್ಯ, ಆರ್. ಶಂಕರ್ ನಾಯ್ಕ್, ಕೆ.ಸಂತೋಷ್ ಕುಮಾರ್, ಜಿ. ಮಲ್ಲಪ್ಪ, ಡಿ.ಹೆಚ್. ವೀರಭದ್ರಯ್ಯ, ದೇವೇಂದ್ರಪ್ಪ ಮತ್ತಿತರರು ಉಪಸ್ಥಿತರಿದ್ದರು.

## ಈರುಳ್ಳಿ ಬೆಳೆ ಸಂರಕ್ಷಣಾ ಮಾಹಿತಿ



ದಾವಣಗೆರೆ, ಏ.2- ಬೇಸಿಗೆಯಲ್ಲಿ ಈರುಳ್ಳಿ ಬೆಳೆಯಲ್ಲಿ ರಸ ಹೀರುವ ಕೀಟದ ಬಾಧೆ ಹೆಚ್ಚಾಗುವ ಸಂಭವವಿದ್ದು, ಅಗತ್ಯ ಸಸ್ಯ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳುವ ಅಗತ್ಯವಿದೆ ಎಂದು ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ತಜ್ಞ ಬಸವನಗೌಡ ಎಂ.ಜಿ. ಅಭಿಪ್ರಾಯಪಟ್ಟರು. ದಾವಣಗೆರೆ ತಾಲ್ಲೂಕು ಹಾಲುವರ್ತಿ ಗ್ರಾಮದಲ್ಲಿ ಕೇಂದ್ರದಿಂದ ಹಮ್ಮಿಕೊಂಡ ಹಿಂಗಾರು ಈರುಳ್ಳಿ ಪ್ರಾತ್ಯಕ್ಷಿಕೆ ತಾಕುಗಳಿಗೆ ಭೇಟಿ ನೀಡಿ ಮಾಹಿತಿ ನೀಡಿದರು.

ಪ್ರಸ್ತುತ ಕೇಂದ್ರದಿಂದ ಭೀಮಾ ಶಕ್ತಿ ಎಂಬ ಹಿಂಗಾರು ಹಂಗಾಮಿನ ಬೀಜವನ್ನು ಪ್ರಾತ್ಯಕ್ಷಿಕೆಗೆ ನೀಡಿದ್ದು, ಬೆಳೆ 50 ದಿನಗಳ ಹಂತದಲ್ಲಿದೆ. ಈ ಸಂದರ್ಭದಲ್ಲಿ ರಸ ಹೀರುವ ಕೀಟಗಳಾದ ನುಸಿಯ ಬಾಧೆ ಹೆಚ್ಚಾಗುವ ಸಂಭವವಿದೆ. ಇದರ ನಿಯಂತ್ರಣಕ್ಕೆ ಇಮಿಡಾಕ್ಲೋಪ್ರಿಡ್ 0.5 ಮಿಲೀ ಅಥವಾ ಫಿಪ್ರೋನಿಲ್ 1.5 ಮಿಲೀ ಪ್ರತೀ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕೆಂದರು. ಗಡ್ಡೆಗಳ ಉತ್ತಮ ಗುಣಮಟ್ಟ ಮತ್ತು ಇಳುವರಿಗೆ ಈ ಸಿಂಪರಣೆಯ ಜೊತೆಗೆ ತರಕಾರಿ ಸ್ಪೆಷಲ್ 5 ಗ್ರಾಂ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕೆಂದು ತಿಳಿಸಿದರು. ಹಳದಿ ಅಂಟು ಪಟ್ಟಿ ಹಾಳೆಗಳನ್ನು ಪ್ರತೀ ಎಕರೆಗೆ 4-5 ರಷ್ಟು ಈರುಳ್ಳಿ ತಾಕುಗಳಲ್ಲಿ ಕಟ್ಟುವುದರಿಂದ ರಸ ಹೀರುವ ಕೀಟದ ಹಾನಿಯ ಹಂತವನ್ನು ತಿಳಿದುಕೊಳ್ಳಲು ಅನುಕೂಲವಾಗುವುದೆಂದು ತಿಳಿಸಿದರು.

ಭೇಟಿಯ ಸಂದರ್ಭದಲ್ಲಿ ರೈತರಾದ ದ್ಯಾಮಣ್ಣ, ಮನೋಜ್, ದೇವರಾಜ, ನಾಗರಾಜ, ಕಾರ್ತಿಕ್ ಇತರರು ಹಾಜರಿದ್ದರು.

## ಜಿಗಳಿಯಲ್ಲಿ ಸ್ವಚ್ಛ ಸಂಕೀರ್ಣ ಘಟಕದ ಉದ್ಘಾಟನೆ



ಮಲೇಬೆನ್ನೂರು, ಏ.2- ಜಿಗಳಿ ಗ್ರಾಮದಲ್ಲಿ ಉದ್ಯೋಗ ಖಾತರಿ ಯೋಜನೆಯಡಿ ನಿರ್ಮಿಸಿರುವ ಸ್ವಚ್ಛ ಸಂಕೀರ್ಣ ಘಟಕದ ಉದ್ಘಾಟನೆ ಹಾಗೂ ಕಸ ಸಂಗ್ರಹಣಾ ಬಕೆಟ್‌ಗಳ ವಿತರಣಾ ಕಾರ್ಯಕ್ರಮವು ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ವಿನೋದ ಜಿ.ಆರ್. ಹಾಲೇಶ್‌ಕುಮಾರ್ ಅವರ ಅಧ್ಯಕ್ಷತೆಯಲ್ಲಿ ಜರುಗಿತು.

ಗ್ರಾ.ಪಂ. ಕಚೇರಿ ಆವರಣದಲ್ಲಿ ಜರುಗಿದ ವೇದಿಕೆ ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಜಿ.ಪಂ. ಎಇಇ ಬಿ.ಗಿರೀಶ್, ಕಸವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡುವುದು ಪ್ರಸ್ತುತ ಸವಾಲಾಗಿದ್ದು, ಗ್ರಾಮಸ್ಥರು ಹಸಿರು ಮತ್ತು ನೀಲಿ ಬಣ್ಣದ ಬಕೆಟ್‌ಗಳನ್ನು ಗ್ರಾ.ಪಂ.ನಿಂದ ಉಚಿತವಾಗಿ ಪಡೆದು ಒಣ ಮತ್ತು ಹಸಿ ಕಸವನ್ನು ಬೇರೆ ಬೇರೆಯಾಗಿ ಬಕೆಟ್‌ಗಳಲ್ಲಿ ಹಾಕುವಂತೆ ಮನವಿ ಮಾಡಿದರು.

ಒಣ ಮತ್ತು ಹಸಿ ಕಸ ಸಂಗ್ರಹಿಸುವ ಬಗ್ಗೆ ಮಹಿಳಾ ಸಂಘಗಳಿಗೆ ತರಬೇತಿ ನೀಡಲಾಗುವುದೆಂದು ಗಿರೀಶ್ ಹೇಳಿದರು.

ಗ್ರಾ.ಪಂ. ಸದಸ್ಯ ಎನ್.ಎಂ.ಪಾಟೀಲ್, ತಾ.ಪಂ. ಎಡಿ ಜಿ.ಆರ್.ಸುನೀಲ್ ಮಾತನಾಡಿ, ಸ್ವಚ್ಛ ಸಂಕೀರ್ಣ ಘಟಕದ ಮಹತ್ವ ತಿಳಿಸಿದರು.

ಈ ವೇಳೆ ಗ್ರಾಮದ ಮಹಿಳೆಯರಿಗೆ ಕಸ ಸಂಗ್ರಹಿಸುವ ಬಕೆಟ್‌ಗಳನ್ನು ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ವಿನೋದ ಹಾಲೇಶ್‌ಕುಮಾರ್, ಉಪಾಧ್ಯಕ್ಷ ಜಿ.ಬೇವಿನಹಳ್ಳಿಯ ಮಹಾಂತೇಶ್ ವಿತರಿಸಿದರು.

ಗ್ರಾ.ಪಂ. ಸದಸ್ಯರಾದ ಕೆ.ಜಿ. ಬಸವರಾಜ್, ಡಿ.ಎಂ.ಹರೀಶ್, ಶ್ರೀಮತಿ ರೇಣುಕ ಪೂಜಾರ್ ನಾಗರಾಜ್, ಶ್ರೀಮತಿ ಮಂಜುಳ ಸಿ. ಎನ್.ಪರಮೇಶ್ವರಪ್ಪ, ಶ್ರೀಮತಿ ಕರಿಯಮ್ಮ ಚಂದ್ರಶೇಖರ್, ಶ್ರೀಮತಿ ಕವಿತಾ ಮಾಕನೂರು ಶಿವು, ವೈ.ಆರ್. ಚೇತನ್‌ಕುಮಾರ್, ಶ್ರೀಮತಿ ಜಯಮ್ಮ ಜಿ.ಕೆ. ರಂಗನಾಥ್, ಶ್ರೀಮತಿ ಆಶಾ ಅಣ್ಣಪ್ಪ, ಪಿ.ಹೆಚ್. ದೇವರಾಜ್, ಶ್ರೀಮತಿ ರೇಣುಕಮ್ಮ ಮಡಿವಾಳರ ರಂಗಪ್ಪ, ಬಸವಾಪುರದ ಹನುಮಂತಪ್ಪ, ಗ್ರಾಮದ ಮುಖಂಡ ಗೌಡ್ರ ಬಸವರಾಜಪ್ಪ, ಜಿ.ಪಂ. ಸಹಾಯಕ ಇಂಜಿನಿಯರ್ ಹನುಮಂತಪ್ಪ, ಪಿಡಿಓ ಉಮೇಶ್, ಕಾರ್ಯದರ್ಶಿ ಸುಜಾತ ಭಾಗವಹಿಸಿದ್ದರು.

ಶಿಕ್ಷಕ ಗುಡ್ಡಪ್ಪ ಸ್ವಾಗತಿಸಿದರು. ದ್ವಿತೀಯ ದರ್ಜೆ ಲೆಕ್ಕ ಪರಿಶೋಧಕ ಬಿ.ಮೌನೇಶ್ ವಂದಿಸಿದರು.

## ಶಿವನಪಾದದಲ್ಲಿ ನಾಳೆಯಿಂದ ಜಾತ್ರಾ ಮಹೋತ್ಸವ

ಶಿವಮೊಗ್ಗ, ಏ. 2- ಶಿಕಾರಿಪುರ ತಾಲ್ಲೂಕಿನ ಶ್ರೀ ಶಿವನಪಾದ ಕ್ಷೇತ್ರದಲ್ಲಿ ನಾಡಿದ್ದು ದಿನಾಂಕ 4 ರಿಂದ 6 ರವರೆಗೆ ಜಾತ್ರಾ ಮಹೋತ್ಸವ ಜರುಗಲಿದೆ.

4 ರಂದು ಬೆಳಿಗ್ಗೆ 8 ಕ್ಕೆ ಶಿವನಪಾದ ಗ್ರಾಮದ ಮುಖಂಡ ಕೆ.ಜಿ. ಬಸವರಾಜಪ್ಪ ಶಿವ ಧ್ವಜಾರೋಹಣ ನೆರವೇರಿಸಲಿದ್ದಾರೆ. ಸಂಜೆ 5 ಗಂಟೆಗೆ ಶ್ರೀ ಸ್ವಾಮಿಯ ಅಭಿಷೇಕ, ಕಂಕಣ ಧಾರಣೆ, ಕಳಸ ಪೂಜೆ, ಶಿವ ನಾಮಾವಳಿ, ಮಹಾಮಂಗಳಾರತಿ ನಡೆಯಲಿದೆ. 5 ರಂದು ಬುಧವಾರ ಬೆಳಿಗ್ಗೆ 8 ಕ್ಕೆ ಗಂಟೆಗೆ ಶಿವ ಧ್ವಜಾರೋಹಣ ನಿಜಲಿಂಗಪ್ಪ ಮಾರಯ್ಯ ಅವರಿಂದ ನೆರವೇರಲಿದೆ. 6 ರಂದು ಗುರುವಾರ ಬೆಳಿಗ್ಗೆ 8 ಸದಾಶಿವಪ್ಪ ಬಣಕಾರ್ ಅವರಿಂದ ಶಿವ ಧ್ವಜಾರೋಹಣ ನಡೆಯಲಿದೆ. ಬೆಳಿಗ್ಗೆ 9 ಗಂಟೆಗೆ ಮಾಯತಮ್ಮನಮುಚಡಿ ಗ್ರಾಮದ ಭಕ್ತರಿಂದ ಸಕಲ ವಾದ್ಯಗಳೊಂದಿಗೆ ರಥಸೇವೆ ಹಾಗೂ ಕೊರಟಿಕೆರೆ ಗ್ರಾಮದ ಭಕ್ತಾದಿಗಳಿಂದ ಜರುಗಲಿದೆ.

ಮಧ್ಯಾಹ್ನದ 12 ರವರೆಗೆ ಇಕ್ಕದ ಮಾರಯ್ಯನ ಮಹಾ ಮಂಟಪದಲ್ಲಿ ಜಾತ್ರಾ ಮಹೋತ್ಸವದ ಕಾರ್ಯಕ್ರಮ ನಡೆಯಲಿದೆ. ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಲಿದ್ದಾರೆ. ಸದಾಶಿವಪ್ಪ ಬಣಕಾರ್ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ರೈತ ಮುಖಂಡ ಹೆಚ್.ಆರ್. ಬಸವರಾಜಪ್ಪ, ವೀರಶೈವ ಸಮಾಜದ ಮುಖಂಡರಾದ ಎನ್.ಜಿ. ರಾಜಶೇಖರಪ್ಪ, ಎನ್. ವೀರೇಶ್, ಚಂದ್ರಶೇಖರಪ್ಪ, ಎನ್.ಜಿ. ಈಶ್ವರಪ್ಪ, ಬಸವನಗೌಡ ಕಳ್ಳೇರ, ವಿಶ್ವನಾಥ್ ಮುರಡಿ, ಪರಮೇಶ, ಬಿ.ಎಸ್. ನಾಗೇಶ, ಎ.ಎಂ.ಪ್ರವೀಣ, ಮಂಜುನಾಥ ಎಸ್. ಕುರಿ, ರವಿ ರಾಥೋಡ್, ವಿ. ರವಿಕುಮಾರ್ ಮತ್ತಿತರರು ಭಾಗವಹಿಸಲಿದ್ದಾರೆ.

## ಮೇಯರ್ ಮತ್ತು ಆಯುಕ್ತರಿಂದ ಬಸಾಪುರದ ರುದ್ರಭೂಮಿ ಸ್ಥಳ ವೀಕ್ಷಣೆ



ದಾವಣಗೆರೆ, ಏ.2- ಮಹಾನಗರ ಪಾಲಿಕೆಯ 21 ನೇ ವಾರ್ಡ್ ಬಸಾಪುರ ಗ್ರಾಮದ ರುದ್ರಭೂಮಿ ಸ್ಥಳವನ್ನು ಮೇಯರ್ ಹಾಗೂ ಆಯುಕ್ತರು ವೀಕ್ಷಣೆ ಮಾಡಿ ಸಮಸ್ಯೆಗಳನ್ನು ಪರಿಶೀಲಿಸಿದರು.

ಸುಮಾರು 4 ಸಾವಿರ ಜನಸಂಖ್ಯೆ ಇರುವ ಬಸಾಪುರ ಗ್ರಾಮದಲ್ಲಿ ಕೇವಲ ಒಂದೇ ರುದ್ರಭೂಮಿಯಿದ್ದು, ಅದು ಸಹ ಸಾರ್ವಜನಿಕರ ಉಪಯೋಗಕ್ಕೆ ಬರದ ಸ್ಥಿತಿಯಲ್ಲಿರುವುದನ್ನು ಕಂಡ ಮೇಯರ್ ವಿನಾಯಕ ಪೈಲ್ವಾನ್ ಹಾಗೂ ಪಾಲಿಕೆ ಆಯುಕ್ತರಾದ ರೇಣುಕಾ ಶೀಘ್ರದಲ್ಲಿಯೇ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದರು.

ಪಕ್ಕದಲ್ಲಿರುವ ಹಳ್ಳದ ನೀರು ರುದ್ರಭೂಮಿಯೊಳಗೆ ಬರುತ್ತಿದ್ದು, ಹಳ್ಳದಲ್ಲಿ ಬೆಳೆದಿರುವ ಗಿಡಗಂಟೆಗಳನ್ನು ಸ್ವಚ್ಛಗೊಳಿಸಿ, ನೀರನ್ನು ಸರಾಗವಾಗಿ ಮುಂದೆ ಹೋಗುವಂತೆ ಮಾಡಿದರೆ, ಮುಂದೆ ಆಗುವಂತಹ ಅನಾಹುತ ತಪ್ಪಿಸಬಹುದು ಎಂದು ಗ್ರಾಮಸ್ಥರು ಮನವಿ ಮಾಡಿದರು.

ರುದ್ರಭೂಮಿಗೆ ಕಾಂಪೌಂಡ್, ಗ್ರಾವಲ್ ಹಾಗೂ ಸರ್ವೇ ಮಾಡುವ ಮೂಲಕ ಒತ್ತುವರಿಯಾಗಿರುವ ರುದ್ರಭೂಮಿ ಜಾಗವನ್ನು ಬಿಡಿಸಿಕೊಳ್ಳಲು ಬೇಕಾದ ಕ್ರಮ ತೆಗೆದುಕೊಳ್ಳಲು ಮೇಯರ್ ಸೂಚಿಸಿದರು.

ಈ ಸಂದರ್ಭದಲ್ಲಿ ಗ್ರಾಮಸ್ಥರಾದ ಎಂ.ಎಸ್.ಕೊಟ್ರಯ್ಯ, ಕೆ.ಎಲ್. ಹರೀಶ್, ಎಸ್.ಸುರೇಂದ್ರಪ್ಪ, ವಿಜಯ್ ಕುಮಾರ್, ಎನ್.ಎಂ.ಕೊಟ್ರಯ್ಯ, ದೇವೇಂದ್ರಪ್ಪ, ಕರಿಬಸಪ್ಪ, ನಾಗರಾಜ್, ಸತೀಶ್ ಪೈಲ್ವಾನ್ ಪಾಲಿಕೆಯ ಇಂಜಿನಿಯರ್‌ಗಳಾದ ಹರ್ಷಿತಾ, ಮಧುಸೂದನ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಭಾರತದ ಜೊತೆ ಸ್ನೇಹಕ್ಕೆ ಬಾಜ್ವ ಒತ್ತಡ : ಇಮ್ರಾನ್ ಖಾನ್

ಲಾಹೋರ್, ಏ. 2 – ಭಾರತದ ಜೊತೆ ಸ್ನೇಹ ಬೆಳೆಸಿಕೊಳ್ಳುವಂತೆ ಪಾಕಿಸ್ತಾನದ ಸೈನ್ಯದ ಆಗಿನ ಮುಖ್ಯಸ್ಥ ಜನರಲ್ ಕಮರ್ ಜಾವಿದ್ ಬಾಜ್ವ ತಮ್ಮ ಮೇಲೆ ಒತ್ತಡ ಹೇರಿದ್ದರು ಎಂದು ಪಾಕಿಸ್ತಾನದ ಮಾಜಿ ಪ್ರಧಾನ ಮಂತ್ರಿ ಇಮ್ರಾನ್ ಖಾನ್ ಹೇಳಿದ್ದಾರೆ.

ಕಾಶ್ಮೀರ ವಿಷಯ ಹಾಗೂ ಗಡಿಯಾಚೆಗಿನ ಭಯೋತ್ಪಾದನೆ ಹಿನ್ನೆಲೆಯಲ್ಲಿ ಉಭಯ ದೇಶಗಳ ಸಂಬಂಧ ಹದಗೆಟ್ಟಿದೆ. ಕಾಶ್ಮೀರಕ್ಕೆ ಸಂಬಂಧಿಸಿದ 370ನೇ ವಿಧಿ ರದ್ದುಗೊಳಿಸಿದ್ದು ಪಾಕಿಸ್ತಾನದ ತೀವ್ರ ಆಕ್ಷೇಪಕ್ಕೆ ಕಾರಣವಾಗಿತ್ತು.

ಭಾರತದ ಜೊತೆ ಸ್ನೇಹ ಬೆಳೆಸಲು ಬಾಜ್ವ ಒತ್ತಡ ಹೇರಿದ್ದರು. ನನ್ನ ಹಾಗೂ ಬಾಜ್ವ ನಡುವೆ ಸಂಬಂಧ ಹದಗೆಡಲು ಇದೂ ಒಂದು ಕಾರಣ ಎಂದು ಖಾನ್ ಹೇಳಿದ್ದಾರೆ. ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಮತ್ತೆ ನೆಲೆಗೊಳಿಸಿದಾಗ ಮಾತ್ರ ಶಾಂತಿ ಮಾತುಕತೆ ಸಾಧ್ಯ ಎಂಬುದು ನನ್ನ ದೃಢ ನಿಲುವು ಎಂದವರು ತಿಳಿಸಿದ್ದಾರೆ.

## ಮಾಹಿತಿ ಆಯೋಗದಲ್ಲಿ ಹೊರಗುತ್ತಿಗೆ ಸಿಬ್ಬಂದಿ ಹೆಚ್ಚಿರುವುದಕ್ಕೆ ಆಕ್ಷೇಪ

ನವದೆಹಲಿ, ಏ. 2 – ಕೇಂದ್ರ ಮಾಹಿತಿ ಆಯೋಗದಲ್ಲಿ ಹೊರಗುತ್ತಿಗೆ ಸಿಬ್ಬಂದಿ ಸಂಖ್ಯೆ ಹೆಚ್ಚಾಗಿದೆ ಎಂದು ಹೇಳಿರುವ ಸಂಸದೀಯ ಸಮಿತಿ, ಸಿಬ್ಬಂದಿ ನೇಮಕ ಆಯೋಗ ಈ ಬಗ್ಗೆ ಗಮನ ಹರಿಸಬೇಕು ಎಂದು ತಿಳಿಸಿದೆ.

ಕೇಂದ್ರ ಮಾಹಿತಿ ಆಯೋಗದಲ್ಲಿ 160 ಹುದ್ದೆಗಳಿದ್ದು, ಈ ಪೈಕಿ 100 ಸಿಬ್ಬಂದಿಯನ್ನು ಗುತ್ತಿಗೆ ಮೂಲಕ ನೇಮಿಸಲಾಗಿದೆ. ಸೂಕ್ತ ಅಭ್ಯರ್ಥಿಗಳ ಕೊರತೆಯಿಂದಾಗಿ ಹೊರಗುತ್ತಿಗೆ ಮೂಲಕ ನೇಮಿಸಲಾಗುತ್ತಿದೆ ಎಂದು ಆಯೋಗ ತಿಳಿಸಿದೆ. ಈ ಬಗ್ಗೆ ವರದಿ ನೀಡಿರುವ ಸಿಬ್ಬಂದಿ ಸಾರ್ವಜನಿಕ ಅಹವಾಲು, ಕಾನೂನು ಹಾಗೂ ನ್ಯಾಯ ಕುರಿತ ಸಂಸತ್ತಿನ ಸ್ಥಾಯಿ ಸಮಿತಿ, ಗುತ್ತಿಗೆ ಸಿಬ್ಬಂದಿ ಪೂರಕವಾಗಿ ಕಾರ್ಯನಿರ್ವಹಿಸಬೇಕು. ಇದರ ಬದಲು ಅವರೇ ಪ್ರಮುಖವಾಗಬಾರದು ಎಂದು ಹೇಳಿದೆ.

## ಕುಣೆಬೆಳಕೆರೆಯಲ್ಲಿ ನಾಳೆ ರಥೋತ್ಸವ



ಮಲೇಬೆನ್ನೂರು ಸಮೀಪದ ಕುಣೆಬೆಳಕೆರೆ ಗ್ರಾಮದ ಶ್ರೀ ವೀರಾಂಜನೇಯ ಸ್ವಾಮಿಯ ರಥೋತ್ಸವವು ನಾಳೆ ಮಂಗಳವಾರ ಬೆಳಿಗ್ಗೆ 8 ಗಂಟೆಗೆ ಜರುಗಲಿದೆ.

ರಥೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ 8.30 ಕ್ಕೆ ಉಚ್ಛಾಯ. ಇದೇ ದಿನ ರಾತ್ರಿ 10 ಗಂಟೆಗೆ ಹರಿಸೇವೆ ನಡೆಯಲಿದೆ. ಏ.4 ರ ಮಂಗಳವಾರ ಬೆಳಿಗ್ಗೆ ರಥೋತ್ಸವದ ನಂತರ ಭಕ್ತಾದಿಗಳಿಂದ ವಿವಿಧ ಸೇವೆಗಳು ನಡೆಯಲಿದ್ದು, ಸಾಯಂಕಾಲ 4 ಗಂಟೆಗೆ ಮುಳ್ಳೋತ್ಸವ, 6 ಕ್ಕೆ ಓಕುಳಿ ಇರುತ್ತದೆ. ಏ.5ರ ಬುಧವಾರ ಸಕಲ ದೇವರುಗಳ ಉತ್ಸವದ ನಂತರ ಸಾಯಂಕಾಲ 4 ಕ್ಕೆ ಭೂತ ಸೇವೆಯೊಂದಿಗೆ ಜಾತ್ರೆಗೆ ತೆರೆ ಬೀಳಲಿದೆ.

## ಕಾಟನ್ ಮಾರ್ಕೆಟ್ ಶಾಲೆಯಲ್ಲಿ ಸಿದ್ಧಗಂಗಾ ಶ್ರೀ ಜನ್ಮ ದಿನಾಚರಣೆ

ದಾವಣಗೆರೆ, ಏ. 2- ಶ್ರೀ ಸಿದ್ಧಗಂಗಾ ಮಕ್ಕಳ ಲೋಕದ ವತಿಯಿಂದ ನಗರದ ನಿಟ್ಟುವಳ್ಳಿಯ ಕನ್ನಡ ಮತ್ತು ಉರ್ದು ಸರ್ಕಾರಿ ಶಾಲೆಗಳಲ್ಲಿ ಸಿದ್ಧಗಂಗಾ ಶ್ರೀ ಶಿವಕುಮಾರ ಮಹಾಸ್ವಾಮಿಗಳ ಜನ್ಮ ದಿನವನ್ನು ಆಚರಿಸಲಾಯಿತು. ಬಡಮಕ್ಕಳಿಗೆ ನೀಡಿದ ಉಚಿತ ಶಿಕ್ಷಣ ಬೆಲೆ ಕಟ್ಟಲಾಗದು. ಶ್ರೀಗಳ ಸೇವಾ ಮನೋಭಾವನೆ ಇತರರಿಗೆ ಮಾದರಿ ಎಂದು ಜಿ. ಶಿವಕುಮಾರ್ ಕೊಂಡಾಡಿದರು.

ಶ್ರೀ ಸಿದ್ಧಗಂಗಾ ಮಕ್ಕಳ ಲೋಕದ ಸ್ಥಾಪಕ, ಹಿರಿಯ ಕವಿ ಕೆ.ಎನ್. ಸ್ವಾಮಿ ಅವರು, ರಾಮಾಂಜನೇಯ ಪೈಪ್ ಅಂಡ್ ಸ್ಯಾನಿಟರಿ ಅವರಿಗೆ ಅಭಿನಂದನೆ ಸಲ್ಲಿಸಿದರು.

ಎ.ಎನ್. ಕರಿಬಸಮ್ಮ, ಕೆ.ಎಂ.ವೀರಮ್ಮ, ಶೈಲಮ್ಮ ಇವರು ಕಾರ್ಯಕ್ರಮ ಸಂಯೋಜಿಸಿದ್ದರು. ಮಕ್ಕಳಾದ ಸುಮಿತ್ರ, ನೀತು, ಸುಕನ್ಯಾ, ದೀಕ್ಷಾ, ಲಲಿತಾ, ಸ್ಫೂರ್ತಿ, ಚಿರಂಜೀವಿ, ಯಾಸಿನ್, ಅಭಯ್, ಜೈತುನ್ ಬೀ, ನಿತಿನ್, ಶ್ರೀನಿವಾಸ್, ಅಭಯ್ ಬಹುಮಾನ ಪಡೆದುಕೊಂಡರು.

## ರಾಜ್ಯಮಟ್ಟದ ಪವರ್ ಲಿಫ್ಟಿಂಗ್ ಸ್ಪರ್ಧೆ ಜಿಎಂಐಟಿ ವಿದ್ಯಾರ್ಥಿಗಳಿಗೆ ಪದಕ



ದಾವಣಗೆರೆ, ಏ. 2 - ಹೊಸಪೇಟೆಯ ಪಂಪ ಭವನದಲ್ಲಿ ಈಚೆಗೆ ನಡೆದ ರಾಜ್ಯಮಟ್ಟದ ಪವರ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ನಗರದ ಜಿಎಂಐಟಿ ವಿದ್ಯಾರ್ಥಿಗಳಾದ ಎಸ್.ವಿನಾಯಕ 59 ಕೆಜಿ ಜ್ಯೂನಿಯರ್ ವಿಭಾಗದಲ್ಲಿ ಬಂಗಾರದ ಪದಕ ಪಡೆದು ಪ್ರಥಮ ಸ್ಥಾನ ಗಳಿಸಿದ್ದಾರೆ. ಬಿ.ಎಂ. ಸುಹಾಸ್ 59 ಕೆಜಿ ಜ್ಯೂನಿಯರ್ ವಿಭಾಗದಲ್ಲಿ ಕಂಚಿನ ಪದಕ ಪಡೆದು ತೃತೀಯ ಸ್ಥಾನ ಪಡೆದಿದ್ದಾರೆ.

ಕ್ರೀಡಾಪಟುಗಳನ್ನು ಕಾಲೇಜಿನ ಪ್ರಾಂಶುಪಾಲ ಡಾ. ಎಂ.ಬಿ. ಸಂಜಯ್ ಪಾಂಡೆ, ಆಡಳಿತಾಧಿಕಾರಿ ವೈ.ಯು. ಸುಭಾಷ್ಚಂದ್ರ, ಜಿ.ಎಂ. ಪಾಲಿಟೆಕ್ನಿಕ್‌ನ ಪ್ರಾಂಶುಪಾಲ ಡಾ. ಬಿ.ಆರ್. ಶ್ರೀಧರ್ ಹಾಗೂ ಕ್ರೀಡಾ ಸಂಯೋಜಕ ಡಾ. ಹೆಚ್.ಎಸ್. ಕಿರಣ್‌ಕುಮಾರ್, ಡಾ. ಪ್ರವೀಣ್, ಜಿ. ಕೀರ್ತಿಪ್ರಸಾದ್, ದೈಹಿಕ ಶಿಕ್ಷಣ ನಿರ್ದೇಶಕ ಜಿ.ಬಿ. ಅಜ್ಜಯ್ಯ, ವೈ. ಹನುಮಂತಪ್ಪ ಅಭಿನಂದಿಸಿದ್ದಾರೆ.

## ಬಾಪೂಜಿ ಹೈ-ಟೆಕ್ ಇನ್‌ಸ್ಟಿಟ್ಯೂಟ್‌ನಲ್ಲಿ ಇಂದು ಗ್ರಾಜ್ಯುಯೇಷನ್ ಡೇ

ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಹೈ-ಟೆಕ್ ಎಜುಕೇಶನ್‌ನ ಕಾಮರ್ಸ್ ವಿಭಾಗದಿಂದ ಮೊದಲನೇ ಗ್ರಾಜ್ಯುಯೇಷನ್ ಡೇ ಸಮಾರಂಭವನ್ನು ಇಂದು ಸಂಜೆ 5 ಗಂಟೆಗೆ ಎಂ.ಬಿ.ಎ. ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಮುಖ್ಯ ಅತಿಥಿಗಳಾಗಿ ಹೆಚ್.ಬಿ. ಮಂಜುನಾಥ್ ಆಗಮಿಸುವರು. ಅಧ್ಯಕ್ಷತೆಯನ್ನು ಡಾ. ಬಿ. ವೀರಪ್ಪ ವಹಿಸುವರು ಎಂದು ಡಾ. ಸ್ವಾಮಿ ತ್ರಿಭುವಾನಂದ ಹೆಚ್.ವಿ. ತಿಳಿಸಿದ್ದಾರೆ.

## ಬಸವಾಪಟ್ಟಣ ಶ್ರೀ ದುರುಗಮ್ಮದೇವಿ ಎಡೆಜಾತ್ರೆ ಮಹೋತ್ಸವ

ದಾವಣಗೆರೆಯ ಬೇತೂರು ರಸ್ತೆಯಲ್ಲಿರುವ ಶ್ರೀ ದುರುಗಮ್ಮ ದೇವಸ್ಥಾನ ಸಮಿತಿಯಿಂದ ಇಂದಿನಿಂದ ಇದೇ ದಿನಾಂಕ 8ರವರೆಗೆ ಬಸವಾಪಟ್ಟಣ ಶ್ರೀ ದುರುಗಮ್ಮದೇವಿ ಎಡೆಜಾತ್ರೆ ಮಹೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ.

ಇಂದು ಶ್ರೀ ದೇವಿಗೆ ಅಭಿಷೇಕ, ಮಹಾಮಂಗಳಾರತಿ ಮತ್ತು ಪೂಜೆ ನಡೆಯಲಿದೆ. ನಾಳೆ ಮಂಗಳವಾರ ಶ್ರೀ ದೇವಿಯ ಪೂಜಾ ಸಮಾರಂಭದ ಜೊತೆಗೆ ಅಲಂಕೃತ ಮಂಟಪದಲ್ಲಿ ವಾದ್ಯಗಳೊಂದಿಗೆ ದೇವಿ ಮೆರವಣಿಗೆ ನಡೆಯಲಿದೆ. ಏ.5ರಂದು ದೇವಿಗೆ ಹರಕೆ, ಮುಡಪು ಒಪ್ಪಿಸುವ ಕಾರ್ಯಕ್ರಮ ಇರುತ್ತದೆ. ಏ.7 ಮತ್ತು 8ರಂದು ರಾಜ್ಯ ಹಾಗೂ ರಾಷ್ಟ್ರಮಟ್ಟದ ಮುಕ್ತ ಬಯಲು ಜಂಗೀ ಕುಸ್ತಿ ಸ್ಪರ್ಧೆಗಳನ್ನು ಬೇತೂರು ರಸ್ತೆಯಲ್ಲಿರುವ ಕೊರಚರ ಕಾಲೋನಿಯಲ್ಲಿ ಏರ್ಪಡಿಸಲಾಗಿದೆ.


**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ
28ನೇ ವರ್ಷದ
ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ
ಏಪ್ರಿಲ್ 1 ರಿಂದ ಮೇ 15ರವರೆಗೆ.
ಸ್ಥಳ : ಮಹಾನಗರ ಪಾಲಿಕೆ ಆವರಣ
ಇಂದಿನ ಮಜ್ಜಿಗೆ ಪ್ರಾಯೋಜಕರು :
ಎಲ್. ಎಸ್ ಪ್ರಭು
ನಿವೃತ್ತ ಪ್ರಾಧ್ಯಾಪಕರು
ಮತ್ತು ಕುಟುಂಬ ವರ್ಗದವರ ಸೇವಾರ್ಥ.

**ಸೈಟ್ ಸೇಲ್‌ಗೆ (KHB)**
ಕರ್ನಾಟಕ ಹೌಸಿಂಗ್ ಬೋರ್ಡ್‌ನಲ್ಲಿ
ರಿಜಿಸ್ಟರ್ ಖರ್ಚು ಸೇರಿ
1)30x40 ಉತ್ತರ (31 ಲಕ್ಷ)
2)20x28.5 ಪೂರ್ವ (14 ಲಕ್ಷ)
3)40x60 (59ಲಕ್ಷ)
ಕಿರಣ್ ಬೂಸ್ನೂರ್ (AGENT)
(ಮನೆ ಕಟ್ಟಲು ತುಂಬಾ ಚನ್ನಾಗಿ ಇದೆ)
97315-63409

**Manipal Institute of Computer Education**
Basic Computer,
Tally + GST, C, C++
Courses New Batch Start.
On Offer
90364 27272, 96320 70707

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ
ಡ್ರೈವರ್ (ಪುರುಷ) ಮತ್ತು
ಕಂಡಕ್ಟರ್ (ಪುರುಷ ಅಥವಾ ಮಹಿಳಾ)
ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಸೈಟುಗಳು ಮಾರಾಟಕ್ಕಿವೆ**
ಕುಂದುವಾಡ ರಸ್ತೆ ಬಂಟರ ಭವನ
ಎದುರು ಬಸವೇಶ್ವರ ಲೇಔಟ್‌ನಲ್ಲಿ
40x60 ಪೂರ್ವ ಮಹಾಲಕ್ಷ್ಮಿ ಲೇಔಟ್
ಹತ್ತಿರ, ರಶ್ಮಿ ಹಾಸ್ಟೆಲ್ ಎದುರು 40x50
ಪಶ್ಚಿಮ 30x57 ಪೂರ್ವ.
ಸ್ವಾಮಿ ಏಜೆಂಟ್ (ವಿದ್ಯಾನಗರ)
97421 44715

**ಕೆಲಸಕ್ಕೆ ಬೇಕಾಗಿದ್ದಾರೆ**
ಡೆಂಟಲ್ ಆರ್ಟ್ ಲ್ಯಾಬ್
ಇಂಡಸ್ಟ್ರೀಯಲ್ ಏರಿಯಾ,
ಲೋಕಿಕೆರೆ ರೋಡ್, ದಾವಣಗೆರೆ-5.
ವಿದ್ಯಾರ್ಹತೆ : ದ್ವಿತೀಯ ಪಿಯುಸಿ
ಅಥವಾ ಯಾವುದೇ ಡಿಗ್ರಿ
ಮೊ. : 99000 05433

**ಮನೆ ಬಾಡಿಗೆಗೆ ಇದೆ**
ಎಂಸಿಸಿ 'ಬಿ' ಬ್ಲಾಕ್, 9ನೇ ಮೇನ್ ನಲ್ಲಿ ದಾವಣಗೆರೆ
ಹಾರ್ಟ್ ಆಸ್ಪತ್ರೆ ಹತ್ತಿರ ಮೂರು ಬೆಡ್ ರೂಂ
ಇರುವ ಕೆಳಗಿನ ಮನೆ ಮತ್ತು ಎರಡು ಬೆಡ್
ರೂಮ್ ಇರುವ ಮೊದಲನೆ ಮಹಡಿಯ ಮನೆ
ಬಾಡಿಗೆಗೆ ಇದೆ. ಮುನಿಸಿಪಲ್ ಮತ್ತು ಬೋರ್
ನೀರು, ಸೌಲಭ್ಯವಿದೆ. ಸಸ್ಯಹಾರಿಗಳಿಗೆ ಮಾತ್ರ.
08192-220207

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ
35x60 ಉತ್ತರ-ಪೂರ್ವ ಕಾರ್ನರ್,
30x46 ಪೂರ್ವ, 30x50 ಪೂರ್ವ,
40x60 ಪಶ್ಚಿಮ, ಹೊಸ ಬನಶಂಕರಿ
ಬಡಾವಣೆಯಲ್ಲಿ 30x50 ಪಶ್ಚಿಮ
ಅಕ್ಕ-ಪಕ್ಕ. 30x50 ಉತ್ತರ ಅಕ್ಕ-ಪಕ್ಕ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**2 ಬೆಡ್ ರೂಂ ಮನೆ ಬಾಡಿಗೆಗೆ**
ಡೋ.ನಂ. 240/2, 4ನೇ ಮೇನ್,
ಪಿ.ಜೆ. ಬಡಾವಣೆ, ನರ್ಸರಿ ಜೈನ್
ವಿದ್ಯಾಲಯದ ಹತ್ತಿರ, ರಾಂ ಅಂಡ್
ಸರ್ಕಲ್ ಬಳಿ 2 ಬೆಡ್ ರೂಂನ ಮನೆ
ಬಾಡಿಗೆಗೆ ಇದೆ. ಸಂಪರ್ಕಿಸಿ :
9380921540, 8971949707

**KHB ಸೈಟುಗಳು ಮಾರಾಟಕ್ಕೆ**
ಕರ್ನಾಟಕ ಹೌಸಿಂಗ್ ಬೋರ್ಡ್
(ತುಂಗಭದ್ರಾ ಬಡಾವಣೆ) ದಾವಣಗೆರೆಯಲ್ಲಿ
30X40 ಅಳತೆಯ ದಕ್ಷಿಣ ದಿಕ್ಕಿನ ಸೈಟುಗಳು
ಫಲಾನುಭವಿಗಳಿಂದ ನೇರ ಮಾರಾಟ
ಮಧ್ಯವರ್ತಿಗಳಿಗೆ ಅವಕಾಶವಿಲ್ಲ
63605 67975

**EC / ಇಸಿ,**
E-swathu,
Khatha Change
Building Licence
& Other Property
Documents
96118-66449

**ಕೆಲಸಗಾರರು ಬೇಕಾಗಿದ್ದಾರೆ**
ಆಟೋಮೊಬೈಲ್ ಉತ್ಪನ್ನಗಳನ್ನು ಮಾರಾಟ
ಮಾಡಲು ಮಾರಾಟ ಪ್ರತಿನಿಧಿಗಳು
(ಸೇಲ್ಸ್ ಎಕ್ಸಿಕ್ಯೂಟಿವ್) ಬೇಕಾಗಿದ್ದಾರೆ.
ಸುಬ್ರಹ್ಮಣ್ಯ ಮೋಟಾರ್ಸ್.
ಪಿಸಾಳೆ ಕಾಂಪೌಂಡ್ ದಾವಣಗೆರೆ.
ಮೊ ನಂ. 98866 18484

**ಬೇಕಾಗಿದ್ದಾರೆ**
ಹುಡುಗರು, ಹುಡುಗಿಯರು
ಬೇಕಾಗಿದ್ದಾರೆ. ಕಾವ್ಯಾಂಜಲಿ ,
ಚೌಕಿಪೇಟೆ, ಜೈನ್ ದೇವಸ್ಥಾನದ
ಹತ್ತಿರ, ದಾವಣಗೆರೆ .
ಸಂಬಳ: 10000 ರಿಂದ 15000

**WANTED TEACHER**
B.Sc, B.Ed, B.A.,
B.Ed & D.Ed (only
Ladies) Galaxy High
Primary School
Devaraj Urs Layout.
80732 26541, 90362 12686

**ಸೈಟುಗಳು ಮಾರಾಟಕ್ಕೆ**
ಡಾಲರ್ಸ್ ಕಾಲೋನಿ, ಬನಶಂಕರಿ
ಬಡಾವಣೆ ಶಿವ-ಪಾರ್ವತಿ, ಗ್ಲಾಸ್
ಹೌಸ್ ಲೇಔಟ್ ಹಾಗೂ ಟೀಚರ್ಸ್
ಕಾಲೋನಿ. ದಾವಣಗೆರೆಯ ಎಲ್ಲಾ
ಬಡಾವಣೆಗಳಲ್ಲಿ & ಕಮರ್ಷಿಯಲ್
ಸೈಟುಗಳು ದೊರೆಯುತ್ತವೆ. 30x40,
30x50, 40x60, 50x85.
97315 12365

**ಮನೆ ಲೀಸ್‌ಗೆ**
#1846/178 ಗ್ರೌಂಡ್ ಫ್ಲೋರ್,
2 BHK, ಕಾರ್ನರ್ ಮನೆ,
ವಿನಾಯಕ ಬಡಾವಣೆ,
ವಿದ್ಯಾನಗರ, ಸೌಜನ್ಯ ಪಾರ್ಕ್
ಹತ್ತಿರ, ಲೀಸ್‌ಗೆ ಇದೆ.
ಫೋ. : 98864 11116

**ಮನೆ ಬಾಡಿಗೆಗೆ ಇದೆ**
ಎಂಸಿಸಿ ಬಿ ಬ್ಲಾಕ್, ಕುವೆಂಪು ನಗರ, #3810
19ನೇ ಮೇನ್, 4ನೇ ಕ್ರಾಸ್, ಬಾಪೂಜಿ ಹೈ
ಸ್ಕೂಲ್, ಹಿಂಭಾಗ, ಎಸ್‌ಎಸ್ ಮಾಲ್ ಹತ್ತಿರ,
2 BHK, 1ನೇ ಮಹಡಿ, ಸಸ್ಯಹಾರಿಗಳಿಗೆ
ಮಾತ್ರ. ಮುನ್ಸಿಪಲ್ ನೀರು, ಬೋರ್‌ವೆಲ್,
ಸೋಲಾರ್ ಎಲ್ಲಾ ಸೌಲಭ್ಯವಿದೆ.
ಫೋ. : 97421 57455

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಲೇಔಟ್‌ನಲ್ಲಿ 40x60
East, 80x60 North-East
corner. 30x50 East, 30x50
West, 40x60 North.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಲೇಔಟ್‌ನಲ್ಲಿ
40x46 East, 80x46 East,
30x60 North, 30x50
West, 30x40 West
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆ ಬಾಡಿಗೆಗಿದೆ**
ದೇವರಾಜ ಅರಸು ಬಡಾವಣೆ
'ಎ' ಬ್ಲಾಕ್ 9ನೇ ಕ್ರಾಸ್‌ನಲ್ಲಿ
ಡೋರ್ ನಂ. 144 ನಂಬರಿನ
ಮನೆಯ ಒಂದನೇ ಮಹಡಿಯಲ್ಲಿ
ನೀರಿನ ಸೌಕರ್ಯ ಇರುವ 3 ಬೆಡ್
ರೂಂ ಮನೆ ಬಾಡಿಗೆಗಿದೆ. ಸಂಪರ್ಕಿಸಿ
94480-47506

**ಬೇಕಾಗಿದ್ದಾರೆ**
ಬ್ರ್ಯಾಂಡೆಂಡ್ ಬಟ್ಟೆ
ಅಂಗಡಿಯಲ್ಲಿ ಕೆಲಸಕ್ಕೆ
ಹುಡುಗಿಯರು ಬೇಕಾಗಿದ್ದಾರೆ.
98867 57688

**ಸೈಟ್ ಮತ್ತು ಮನೆಗಳು ಮಾರಾಟಕ್ಕಿವೆ**
ವಿನಾಯಕ 30x50 ದಕ್ಷಿಣ, ವಿದ್ಯಾನಗರ 30x66
ಉತ್ತರ, ಕುಂದವಾಡ ಮುಖ್ಯ 30x60 ಪೂರ್ವ,
ಸಿದ್ದವೀರಪ್ಪ ಬಡಾವಣೆ 50x33 ಪೂರ್ವ.
ಏಜೆಂಟ್ ಯಲ್ಲೋಜಿರಾವ್ .S
97418 11694

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಪೆಟ್ರೋಲ್
ಹಾಕಲು ಹುಡುಗರು ಬೇಕಾಗಿದ್ದಾರೆ.
ಅನುಭವವುಳ್ಳರಿಗೆ ಆದ್ಯತೆ.
ಸಂಪರ್ಕಿಸಿ : ಶಂಕರಲೀಲಾ ಫ್ಯೂಯಲ್ ಸ್ಟೇಷನ್
ಜೈನ್ ಟೆಂಪಲ್ ಪಕ್ಕ, ಆವರಗೆರೆ - ದಾವಣಗೆರೆ.
90190-94446

**ಸೈಟ್ ಮಾರಾಟಕ್ಕಿದೆ**
ಶಾಮನೂರಿನ ಪೋದಾರ್ ಸ್ಕೂಲ್
ಹತ್ತಿರ 20x30 ಸೈಟ್
ಮಾರಾಟಕ್ಕಿದೆ.
ಸಂಪರ್ಕಿಸಿ :
95918 29780
80731 78139

**ಮನೆಗಳು ಬಾಡಿಗೆಗಿವೆ**
1BHK ಹಾಗೂ 2BHK ಸುಸಜ್ಜಿತ
ಮನೆಗಳು ಬಸವೇಶ್ವರ ಬಡಾವಣೆ
ಮುಖ್ಯ ರಸ್ತೆ, ಹೋಟೆಲ್ ಸಾಯಿ ಇಂಟರ್
ನ್ಯಾಷನಲ್ ಹಿಂಭಾಗ, ದಾವಣಗೆರೆ ಇಲ್ಲಿ
ಬಾಡಿಗೆಗೆ ಇವೆ. ಸಂಪರ್ಕಿಸಿ.
94481 13829, 98441 32621

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆಯಲ್ಲಿ
* ಇನ್ಸೂರೆನ್ಸ್ ಮ್ಯಾನೇಜರ್ - 1
* ಕಸ್ಟಮರ್‌ಕೇರ್ ಎಕ್ಸಿಕ್ಯೂಟಿವ್ - 3 (Female)
* ಸೇಲ್ಸ್ ಎಕ್ಸಿಕ್ಯೂಟಿವ್ - 5
ಬೇಕಾಗಿದ್ದಾರೆ. ಸಂಪರ್ಕಿಸಿ :
ಫೋ. : 97314 89430

**ಡ್ರೈವರ್ ಬೇಕಾಗಿದ್ದಾರೆ**
ವೈಟ್ ಬೋರ್ಡ್‌ಗೆ ಅನುಭವ
ಇರುವ ಲೈಸನ್ಸ್ ಹೊಂದಿರುವ
ಕಾರ್ ಡ್ರೈವರ್ ಬೇಕಾಗಿದ್ದಾರೆ.
ಶಂಕರಲೀಲಾ ಗ್ಯಾಸ್ ಏಜೆನ್ಸಿ
ಕುವೆಂಪು ನಗರ,
ಎಂ.ಸಿ.ಸಿ 'ಬಿ' ಬ್ಲಾಕ್, ದಾವಣಗೆರೆ.

**ಬಾಡಿಗೆಗೆ ಮನೆಗಳು ದೊರೆಯುತ್ತವೆ ವಿಚಾರಿಸಿ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ,
ಆಂಜನೇಯ ಬಡಾವಣೆಯಲ್ಲಿ, ಸಿಂಗಲ್
ಬೆಡ್ ರೂಮ್, ಡಬಲ್ ಬೆಡ್ ರೂಮ್,
ತ್ರೀಬಲ್ ಬೆಡ್ ರೂಮ್ ಮನೆ.
ದಕ್ಷಿತ್ ಐನಳ್ಳಿ ಏಜೆಂಟ್
7795506795

**ಹೋಟೆಲ್ ಬಾಡಿಗೆ ಅಥವಾ ಲೀಸ್‌ಗೆ ಕೊಡುವುದಿದೆ**
ಎವಿಕೆ ಕಾಲೇಜು ರೋಡ್,
ಸಿಟಿ ಸೆಂಟ್ರಲ್ ಹಾಸ್ಪಿಟಲ್‌ನ ಪಕ್ಕ.
99801 02403, 83107 52803

**ಸೊಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಷನ್ ವರ್ಕ್ಸ್, ಸೋಫಾ ಸೆಟ್,
Duroflex Bed, ಕಿಟಕಿಗೆ ಅಲ್ಯುಮಿನಿಯಂ ಡೋರ್,
ಸೊಳ್ಳೆ ಮೆಶ್ ಹಾಕಲಾಗುವುದು.
Swapna Cushion Work
Behind Vittal Temple,
Maharaj Pet, Davanagere
98445 81966

**ಬೇಕಾಗಿದ್ದಾರೆ**
S.N. ENTERPRISES
ನಮ್ಮಲ್ಲಿ ಕೆಲಸ ಮಾಡಲು ಯುವಕ-
ಯುವತಿಯರು ಬೇಕಾಗಿದ್ದಾರೆ. ಆಕರ್ಷಕ
ಸಂಬಳದೊಂದಿಗೆ (Unmarried Only)
P.J. Extn., Davanagere
78992 96668, 85489 01454

**ಸಾಲಗಳಿಗಾಗಿ ಸಂಪರ್ಕಿಸಿ**
ಮನೆ ಕಟ್ಟಲು, ಖರೀದಿ, ಅಡಮಾನ, ಸೈಟ್
ಖರೀದಿ ಮತ್ತು ಫೈನಾನ್ಸ್ ಕಂಪನಿಗಳ ಸಾಲ
ನಮ್ಮ ಬ್ಯಾಂಕಿಗೆ ಸಾಲ ವರ್ಗಾವಣೆಗೆ ಇಂದೇ
ಕರೆ ಮಾಡಿ (ಬಡ್ಡಿ ದರ ವಾರ್ಷಿಕ 8.5%)
ಫೋ. : 99455 22287

**SPOKEN ENGLISH**
* Grammer & Vocabulary
* Writing Skills
* Pronuciation Story telling
* Public Speaking
Call : 98442 39618

**WANTED**
Civil Engineers
74060 21863
80880 50729

**2 BHK ಮನೆ ಬಾಡಿಗೆಗಿದೆ**
2 ಬೆಡ್ ರೂಂ ಮನೆ, 1ನೇ ಫ್ಲೋರ್
ಸಿದ್ದವೀರಪ್ಪ ಬಡಾವಣೆ, 10ನೇ ಕ್ರಾಸ್,
ಪಶ್ಚಿಮ ಬಾಗಿಲು, #3711/E,
ಸಾಯಿಬಾಬಾ ನಿಲಯ, ಮುನ್ಸಿಪಲ್,
ಬೋರ್ ನೀರಿನ ವ್ಯವಸ್ಥೆಯಿರುತ್ತದೆ.
6362 624711, 99648 58493

**ಕಾಂಪ್ಲೆಕ್ಸ್ ಬಾಡಿಗೆ ಇದೆ**
ಹದಡಿ ರಸ್ತೆ ಸ್ಟೇಡಿಯಂ ಎದುರುಗಡೆ ಇರುವ
ಸುಸಜ್ಜಿತವಾದ ನೀರಿನ ಸೌಕರ್ಯವುಳ್ಳ
ಮಳಿಗೆಗಳು ಬಾಡಿಗೆ ಇವೆ. ಮೊದಲನೇ
ಮಹಡಿಯಲ್ಲಿ 10x25 ಅಡಿ-2 ಮಳಿಗೆಗಳು
ಮತ್ತು ಮೂರನೇ ಮಹಡಿಯಲ್ಲಿ 25x25
ಅಡಿಯ ಒಂದು ಮಳಿಗೆ ಬಾಡಿಗೆಗೆ
ದೊರೆಯುತ್ತದೆ. ಸಂಪರ್ಕಿಸಿ.
94498 30566

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ – ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**JOBS**
HR, Civil Engineer, Autocad Draftsman,
Telecallers, CRM, Billing, sales,
Graphic Designer, Office Manager,
Marketing, Cashier, Digital Marketing
98444 92888

**ಬೇಕಾಗಿದ್ದಾರೆ**
ಸ್ವಾಗತಕಾರರು - ಮಹಿಳೆಯರು
ಆಫೀಸ್ ಕೆಲಸ - ಮಹಿಳೆಯರು
ಸೆಕ್ಯೂರಿಟಿ ಗಾರ್ಡ್ - ಮಹಿಳೆಯರು /ಪುರುಷರು
ಪಾರ್ಟ್ ಟೈಂ ಕೆಲಸ - ಮಹಿಳೆಯರು
ಟೈಲರಿಂಗ್ ಮಹಿಳೆಯರು
ಕಂಪ್ಯೂಟರ್ ಮಹಿಳಾ ಅಭ್ಯರ್ಥಿ.
79751 07268

**ಡೂಪ್ಲೆಕ್ಸ್ ಹೌಸ್ ಮಾರಾಟಕ್ಕಿದೆ**
ಶಾಮನೂರಿನ ಯುರೋ ಕಿಡ್ಸ್
ಸ್ಕೂಲ್ ಹತ್ತಿರ 30x50 ರಲ್ಲಿ
ಸ್ವಂತಕ್ಕೆ ಕಟ್ಟಿಕೊಂಡಿರುವ ಡೂಪ್ಲೆಕ್ಸ್
ಹೌಸ್ ಮಾರಾಟಕ್ಕಿದೆ.
ಸಂಪರ್ಕಿಸಿ :
73492 00928

**IIT Foundation Maths**
From 5th, 6th, 7th, class
Bruit Academy
Nijalingappa Badavane.
97390 66956

**ನಮ್ಮಲ್ಲಿ ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ.**
ಸ್ಥಳ : ಬೆಳಕೇರಿ
ಫೋ : 97318 46014

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್
ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್,
ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**HOUSE FOR RENT**
3 BHK, with
Car Parking, Ground
floor, SS Layout
'B' block, Davangere.
98446 44718
80501 36584

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ: 2 & 3 ರಂದು
ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಸ್.ಆಯ್. ದೊಡ್ಡಮನಿ
ದಮ್ಮಣಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26
ಹಳೇಬಸ್ ಸ್ಟ್ಯಾಂಡ ಎದುರಿಗೆ, ಹುಬ್ಬಳ್ಳಿ
M:9740523710

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್
ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್,
ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಶ್ರೀ ಚಾಮುಂಡೇಶ್ವರಿ ಜ್ಯೋತಿಷ್ಯ ಫಲ**
ಮನೆಯಲ್ಲಿ ಅಶಾಂತಿ ಸಾಲಬಾಧೆ, ವಿವಾಹದಲ್ಲಿ
ತೊಂದರೆ, ಗಂಡ-ಹೆಂಡತಿ ಕಲಹ, ಸಂತಾನ
ಫಲ, ಆರೋಗ್ಯ, ಶತ್ರುಕಾಟ, ಘೋರ ನಿಗೂಢ
ಗುಪ್ತ ಸಮಸ್ಯೆಗಳಿಗೆ ಅತೀ ಶೀಘ್ರದಲ್ಲಿ 101%
ಗ್ಯಾರಂಟಿ ಪರಿಹಾರ. ನಂಬಿಕೆ ಇದ್ದರೆ ಕರೆಮಾಡಿ.
63635 42003
ಫೋನಿನಲ್ಲಿ ಪ್ರಶ್ನೆ, ಫೋನಿನಲ್ಲಿ ಉತ್ತರ, ಫೋನಿನಲ್ಲಿ ಪರಿಹಾರ

**PART TIME JOBS**
ಮನೆಯಲ್ಲೇ ಕುಳಿತು ನಾವು ಕೊಡುವ
ಪುಸ್ತಕ ಬರೆಯುವ ಹಾಗೂ ಫಾರಂ
ತುಂಬುವ ಮೂಲಕ ತಿಂಗಳಿಗೆ
15,000 ರಿಂದ 20,000 ಸಂಪಾದಿಸಿ
(ಕೋರಿಯರ್ ಸೌಲಭ್ಯವಿದೆ)
87490 98879

**ನೇರ ಪರೀಕ್ಷೆಗಳು**
SSLC, PUC, BA, B.Com,
BBA, MBA (ALL) B.Tech,
Diploma, ITI, NTC,
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್
ಶ್ರೀ ಗಂಗೋತ್ರಿ ಕರೆಸ್ಪಾಂಡೆನ್ಸ್ ಕಾಲೇಜ್
ಲಾಯರ್ ರೋಡ್, ದಾವಣಗೆರೆ.
ಫೋ. : 86602 35013

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near
Shaneshwara Temple Karur
Industrial Area, P.B Road,
Davanagere -577006
72049 94628

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist
(ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು
ದಿ.5.4.2023ರ ಬುಧವಾರ
ದಿ.6.4.2023ರ ಗುರುವಾರ
ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**DULL IN MATHS**
Junior Abacus
1st Std to 3rd Std
Vedic Maths
4th Std to 10th Std
Bruit abacus and Vedic maths
Nijalingappa Badavane.
97390 66956

## ಸ್ವಾಧಾರ್ ಗೃಹದಲ್ಲಿ ಮಹಿಳಾ ದಿನಾಚರಣೆ



ದಾವಣಗೆರೆ, ಏ.2- ಶುಭೋದಯ ಸೇವಾ ಸಂಸ್ಥೆ ವತಿಯಿಂದ ಸ್ವಾಧಾರ್ ಗೃಹದಲ್ಲಿ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಉದ್ಘಾಟಕರಾಗಿ ಆಗಮಿಸಿದ್ದ ಪಾಲಿಕೆ ಸದಸ್ಯರಾದ ರೇಖಾ ಸುರೇಶ್ ಗಂಡಗಾಳೆ ಮಾತನಾಡಿ, ಮಹಿಳೆ ಮೊದಲು ನಾನು ಅಬಲೆಯಲ್ಲ ಎನ್ನುವುದನ್ನು ಮನದಟ್ಟು ಮಾಡಿಕೊಳ್ಳಬೇಕು.

ಜೀವನದಲ್ಲಿ ಬರುವ ಕಷ್ಟಗಳನ್ನು ಎದುರಿಸಿ ನಿಂತು ಬದುಕು ಕಟ್ಟಿಕೊಳ್ಳುವ ಛಲ ಹೊಂದಬೇಕು ಎಂದರು.

ಸಂಸ್ಥೆಯ ಮುಖ್ಯಸ್ಥೆ ಶಕುಂತಲಾ ಮಾತನಾಡಿ, ಸಂಸಾರದಲ್ಲಿ ವಿರಸಕ್ಕಿಂತ ಹೊಂದಾಣಿಕೆಗೆ ಮೊದಲ ಆದ್ಯತೆ ನೀಡಬೇಕು, ತಾಳ್ಮೆಯಿಂದ ಎಷ್ಟೋ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು ಎಂದರು.

ಈ ವೇಳೆ ಸಂಸ್ಥೆ ವತಿಯಿಂದ ಕೇಂದ್ರದ ನಿವಾಸಿಗಳಿಗೆ ಮತ್ತು ಅವರ ಮಕ್ಕಳಿಗೆ ಬಟ್ಟೆ ಹಾಗೂ ಬಚ್‌ಪನ್ ಶಾಲೆಯ ಪ್ರಾಂಶುಪಾಲರಾದ ಚಂದ್ರಾಚಾರ್ ಅವರಿಂದ ಮಕ್ಕಳಿಗೆ ಶಬ್ದಕೋಶ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಸ್ವಾಧಾರ್ ಕೇಂದ್ರದ ನೈಬರ್ ಹುಡ್ ಕಮಿಟಿ ಸದಸ್ಯರಾದ ಸರೋಜಮ್ಮ, ಉಮಾ ಹಾಗೂ ಆರೋಗ್ಯ ಇಲಾಖೆಯ ಆನಂದ ಮೂರ್ತಿ, ರೋಟರಿ ಸಂಸ್ಥೆ ವಿದ್ಯಾನಗರ ಘಟಕದ ಅಧ್ಯಕ್ಷ ಸಿದ್ದಪ್ಪ ಮತ್ತಿತರರಿದ್ದರು.

## ಲೂರ್ಡ್ಸ್ ಬಾಯ್ಸ್ ಶಾಲೆಯಲ್ಲಿ ಸ್ನೇಹ ಸಮ್ಮಿಲನ, ಗುರು ವಂದನೆ

### ಬದುಕಿನ ಪ್ರತಿ ಕ್ಷಣವನ್ನು ಸವಿಯುತ್ತಾ ಮುನ್ನಡೆಯಬೇಕು : ಫಾದರ್ ವೀರೇಶ್

ದಾವಣಗೆರೆ, ಏ.2- ವಿದ್ಯಾರ್ಥಿಗಳಲ್ಲಿ ಮಾನವೀಯತೆ, ಪ್ರೀತಿ, ವಿಶ್ವಾಸ ಬೆಳೆಸಲು ಲೂರ್ಡ್ಸ್ ಬಾಯ್ಸ್ ಶಾಲೆಯು ಸದಾಕಾಲ ಶ್ರಮಿಸುತ್ತಿದೆ ಎಂದು ಎಂಸಿಇಎಸ್ ಸಂಸ್ಥೆಯ ಕಾರ್ಯದರ್ಶಿ ಫಾದರ್ ವೀರೇಶ್ ಮೋರಾಸ್ ಹೇಳಿದರು.

ಶನಿವಾರ ನಗರದ ಲೂರ್ಡ್ಸ್ ಬಾಯ್ಸ್ ಶಾಲೆಯ 1998ರ ಬ್ಯಾಚಿನ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳು ಹಮ್ಮಿಕೊಂಡಿದ್ದ ಸ್ನೇಹ ಸಮ್ಮಿಲನ ಹಾಗೂ ಗುರು ವಂದನಾ ಕಾರ್ಯಕ್ರಮವನ್ನುದ್ದೇಶಿಸಿ ಅವರು ಮಾತನಾಡಿದರು.

ದೇಹಕ್ಕೆ ಮುಪ್ಪಾದಂತೆ ಬದುಕಿನ ಆಶಯಗಳು ಬದಲಾಗುತ್ತವೆ. ಬದುಕು ಕ್ಷಣಿಕ, ಬದುಕಿನ ಪ್ರತಿ ಕ್ಷಣವನ್ನು ಸವಿಯುತ್ತಾ ಮುನ್ನಡೆಯುವ ಜೊತೆಗೆ ಮೂಲ ಸತ್ವ ತಿಳಿಯಬೇಕು. ಆ ಹಿನ್ನೆಲೆಯಲ್ಲಿ ಒಳ್ಳೆಯ ನೆನಪು, ಆಟ-ಪಾಠ, ತುಂಟಾಟ ಏಳು ಬೀಳುಗಳನ್ನು ಕಂಡು, 25 ವರ್ಷಗಳ ನಂತರ ಒಂದೆಡೆ ಸೇರಿ ಸ್ನೇಹ ಗಟ್ಟಿಗೊಳಿಸುವ ಜೊತೆಗೆ ಗುರು ವಂದನಾ ಕಾರ್ಯಕ್ರಮ ಹಮ್ಮಿಕೊಂಡಿರುವುದು ಹರ್ಷ ಉಂಟು ಮಾಡಿದೆ ಎಂದರು.

ಕೋವಿಡ್ ನಂತರ ಬದುಕಲ್ಲಿ ಅನೇಕ ಪಾಠಗಳನ್ನು ಕಲಿತಿದ್ದೇವೆ. ಹಾಗಾಗಿ ಸೈಟು, ಮನೆ, ಬಂಗಲೆ ಕಟ್ಟುವುದು ಇದ್ದದ್ದೇ. ಆದರೆ, ಬದುಕಲ್ಲಿ ಕುಟುಂಬ, ಸ್ನೇಹ, ವ್ಯಕ್ತಿಗಳಿಗೆ ಸಮಯ ನೀಡೋಣ ಎಂದರು.



ಹಿರಿಯ ಪತ್ರಕರ್ತ ಬಿ.ಎನ್ ಮಲ್ಲೇಶ್ ಮಾತನಾಡಿ, ಹಣ, ಕೀರ್ತಿ, ಸಂಪತ್ತು ಯಾವುದನ್ನು ಬೇಕಾದರೂ ಸಂಪಾದಿಸಬಹುದು. ಆದರೆ, ಸ್ನೇಹ ಸಂಪಾದನೆ ಬಹಳ ಕಷ್ಟ. ಸ್ನೇಹಿತರು ಇಲ್ಲದ ಬದುಕು, ಬದುಕೇ ಅಲ್ಲ. ಅಂತಹ ಸ್ನೇಹಿತರು ಬಾಲ್ಯದಲ್ಲಿ ಸಿಗುತ್ತಾರೆ. ಬಾಲ್ಯದ ಕ್ಷಣಗಳನ್ನು ಮೆಲುಕು ಹಾಕುವುದರಲ್ಲಿ ಸಿಗುವ ಸಂತೋಷ ಬೇರೆಲ್ಲೂ ಸಿಗುವುದಿಲ್ಲ. ಕುಟುಂಬದವರೊಂದಿಗೆ ಹೇಳಿಕೊಳ್ಳಲಾಗದ ವಿಚಾರಗಳನ್ನು ಸ್ನೇಹಿತರೊಂದಿಗೆ ಹಂಚಿಕೊಳ್ಳುತ್ತೇವೆ. ಆ ರೀತಿಯ ಗೆಳೆತನ ಹೊಂದಿರುವವರು ಮಾತ್ರ ನಿಜವಾದ ಶ್ರೀಮಂತರು. ಇಲ್ಲದಿದ್ದರೆ ಅವರೇ ನಿಜವಾದ ಬಡವರು ಎಂದರು.

ಜಗತ್ತಿನಲ್ಲಿ ಖರೀದಿಗೆ ಸಿಗದ, ಸ್ವಾರ್ಥ ಕಲ್ಮಶಗಳಿಲ್ಲದ, ಅತ್ಯಂತ ಪವಿತ್ರವಾದ ಸಿಹಿ ಭಾವನೆಗಳೇ ತುಂಬಿ ತುಳುಕುತ್ತಿರುವ ನೈಜ ಸಂಬಂಧ ಸ್ನೇಹವಾಗಿದೆ.

ಬಾಲ್ಯದಲ್ಲಿ ಜೊತೆಯಾಗಿ ಓದಿದ ಸ್ನೇಹಿತರೆಲ್ಲ ಸಂಘಟಿತರಾಗಿ, ಬದುಕಲ್ಲಿ ಸರಿ-ತಪ್ಪುಗಳನ್ನು ತಿದ್ದಿ, ಸಮಾಜದಲ್ಲಿ ಉತ್ತಮ ನಾಗರಿಕರಾಗಲು ಮಾರ್ಗದರ್ಶನ ಮಾಡಿದ ಶಿಕ್ಷಕರಿಗೆ ಗುರು ವಂದನಾ ಸಮಾರಂಭ ಏರ್ಪಡಿಸಿರುವುದು ಶ್ಲಾಘನೀಯವಾದದ್ದು ಎಂದರು.

ಉದ್ಯಮಿ ಬಿ. ಸಿ ಶಿವಕುಮಾರ್ ಮಾತನಾಡಿ, ಸ್ನೇಹಕ್ಕೆ ಹಣ, ಅಂತಸ್ತು ಬೇಕಾಗಿಲ್ಲ,ಪ್ರೀತಿ-ನಂಬಿಕೆ ಮುಖ್ಯ. ಲೂರ್ಡ್ಸ್ ಬಾಯ್ಸ್ ಶಾಲೆಯಲ್ಲಿ ಕಲಿತ ಅನೇಕರು ದೇಶ-ವಿದೇಶಗಳಲ್ಲಿ ಬದುಕು ಕಟ್ಟಿಕೊಂಡಿದ್ದಾರೆ.

ಪ್ರಸ್ತುತ ದಾವಣಗೆರೆಯಲ್ಲಿ ಗುಣಮಟ್ಟದ ಶಿಕ್ಷಣ ನೀಡುವ ಸಂಸ್ಥೆಗಳ ಕೊರತೆಯಿದೆ. ಬಾಲ್ಯದಲ್ಲಿ ಮಕ್ಕಳು ಹಾಸ್ಟೆಲ್ ಗಿಂತ, ಮನೆಯಲ್ಲೇ ವಾಸವಿದ್ದು ಶಿಕ್ಷಣ ಕಲಿತರೆ, ಶಿಕ್ಷಣದ ಜೊತೆಗೆ ಸಂಸ್ಕಾರ ಹಾಗೂ ಮೌಲ್ಯಗಳನ್ನು ಬದುಕಲ್ಲಿ ಅಳವಡಿಸಿಕೊಳ್ಳುತ್ತಾರೆ ಎಂದರು.

ಲೂರ್ಡ್ಸ್ ಬಾಯ್ಸ್ ಶಾಲೆಯ ವ್ಯವಸ್ಥಾಪಕ ಫಾದರ್ ಅಲ್ವಿನ್ ಸ್ಟಾನಿಸ್ಲಾಸ್ ಮಾತನಾಡಿ, ಲೂರ್ಡ್ಸ್ ಬಾಯ್ಸ್ ಶಾಲೆಯು ಮಕ್ಕಳ ತಪ್ಪುಗಳನ್ನು ಮಾತ್ರವಲ್ಲದೆ, ಅವರಲ್ಲಿರುವ ಶ್ರೇಷ್ಠ ಗುಣಗಳನ್ನು ಗುರುತಿಸಿ, ತಂದೆ-ತಾಯಿಗಳಿಗೆ ತಿಳಿಸುವ ಕಾರ್ಯ ಮಾಡುತ್ತದೆ. ಹಾಗಾಗಿ, ಸಂಸ್ಥೆ ಮೌಲ್ಯಯುತ ಶಿಕ್ಷಣಕ್ಕೆ ಹೆಸರುವಾಸಿಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಶಿವಮೊಗ್ಗದ ಸೆಕ್ರೆಡ್ ಹಾರ್ಟ್ ಪಿ. ಯು ಕಾಲೇಜಿನ ಪ್ರಾಂಶುಪಾಲ ಡಾ. ಫ್ರಾನ್ಸಿಸ್ ಫೆರ್ನಾಂಡಿಸ್ ಸೇರಿದಂತೆ, 1998ರ ಬ್ಯಾಚ್‌ನ ವಿದ್ಯಾರ್ಥಿಗಳು, ಶಿಕ್ಷಕರು ಭಾಗವಹಿಸಿದ್ದರು.

## ಅನುದಾನ ರಹಿತ ಪ್ರಾಥಮಿಕ, ಪ್ರೌಢಶಾಲಾ ಮುಖ್ಯ ಶಿಕ್ಷಕರ ಸಭೆ

**ರಾಣೇಬೆನ್ನೂರು**

ರಾಣೇಬೆನ್ನೂರು, ಏ.2- ಇಲ್ಲಿನ ಚೋಳ ಮರಡೇಶ್ವರ ನಗರದಲ್ಲಿರುವ ಮಾತಾ ಪಬ್ಲಿಕ್ ಶಾಲೆಯಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕ ಬಿ.ಎಸ್. ಜಗದೀಶ್ವರ, ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಹೆಚ್. ಪಾಟೀಲ್ ನೇತೃತ್ವದಲ್ಲಿ ತಾಲ್ಲೂಕಿನ ಎಲ್ಲಾ ಅನುದಾನ ರಹಿತ ಪ್ರಾಥಮಿಕ, ಪ್ರೌಢಶಾಲೆಗಳ ಮುಖ್ಯ ಶಿಕ್ಷಕರ ಸಭೆಯನ್ನು ನಡೆಸಲಾಯಿತು.

ಆರ್‌ಟಿಇ ಅಡಿಯಲ್ಲಿ ದಾಖಲಾದ ಮಕ್ಕಳ ಸಮಸ್ಯೆ ಹಾಗೂ ಮಾರಾಟ ಪಠ್ಯ ಪುಸ್ತಕಗಳನ್ನು ಆದಷ್ಟು ಬೇಗ ಶಾಲೆಗಳಿಗೆ ವಿತರಿಸಲು ಅಧಿಕಾರಿಗಳು ಸೂಚಿಸಿದರು. ಕ್ಷೇತ್ರ ಶಿಕ್ಷಣಾಧಿಕಾರಿ ಎಂ. ಹೆಚ್. ಪಾಟೀಲ್ ಅವರು, ಖಾಸಗಿ ಶಾಲೆಗಳ ಹಲವಾರು ತಾಂತ್ರಿಕ ಸಮಸ್ಯೆಗಳನ್ನು ವಿವರಿಸಿದರು. ಸಭೆಯಲ್ಲಿ ಆರ್‌ಟಿಇ ನೋಡಲ್ ಅಧಿಕಾರಿ ಡಿ. ಸುನೀತ, ಮುಖ್ಯಸ್ಥರಾದ ಎಸ್. ಚನ್ನಬಸಪ್ಪ ಮತ್ತು ಇತರರು ಉಪಸ್ಥಿತರಿದ್ದರು. ಇದೇ ವೇಳೆ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆಯ ಉಪನಿರ್ದೇಶಕ ಬಿ.ಎಸ್. ಜಗದೀಶ್ ಅವರನ್ನು ಸನ್ಮಾನಿಸಲಾಯಿತು.

## ಜೀವನದಲ್ಲಿ ಮೌಲ್ಯಯುತ ಚಿಂತನೆಗಳಿಗೆ ಆದ್ಯತೆ ನೀಡಬೇಕು

### ತಾಲ್ಲೂಕು ಕಸಾಪ ಕಾರ್ಯಕ್ರಮದಲ್ಲಿ ಕಸಾಪ ನಿಕಟಪೂರ್ವ ಅಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ ಕುರ್ಕಿ

ದಾವಣಗೆರೆ, ಏ.2- ಬದುಕಿನಲ್ಲಿ ತಲಾದಾಯ ಹೆಚ್ಚಳಕ್ಕಿಂತ ಮೌಲ್ಯಯುತ ಚಿಂತನೆಗಳ ಹೆಚ್ಚಳಕ್ಕೆ ಆದ್ಯತೆ ನೀಡಬೇಕು ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ನಿಕಟ ಪೂರ್ವ ಜಿಲ್ಲಾಧ್ಯಕ್ಷ ಡಾ. ಮಂಜುನಾಥ್ ಕುರ್ಕಿ ಹೇಳಿದರು.

ಶುಕ್ರವಾರ ನಗರದ ಸರ್ವಮಂಗಳಮ್ಮ ಮಾಗನೂರು ಬಸಪ್ಪ ಶಿಕ್ಷಣ ಮಹಾವಿದ್ಯಾಲಯದಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್, ಹಿರಿಯ ನಾಗರಿಕರ ಸಹಾಯವಾಣಿ ಇವರ ಸಹಯೋಗದಲ್ಲಿ ಮೊನ್ನೆ ಆಯೋಜಿಸಲಾಗಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಬದುಕು ಮತ್ತು ಸಾಮಾಜಿಕ ಮೌಲ್ಯಗಳು ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಆಧುನಿಕ ದಿನಗಳಲ್ಲಿ ಅಧಿಕಾರದ ಆಸೆಗಾಗಿ ವ್ಯಕ್ತಿತ್ವ ಮೌಲ್ಯವನ್ನು ಮರೆತಿದ್ದೇವೆ. ಸಮಾಜ ಸ್ವಾರ್ಥದೆಡೆಗೆ ಸಾಗಿದೆ, ಧಾರ್ಮಿಕ ಕ್ಷೇತ್ರ ತನ್ನ ಮೂಲ ಸತ್ವ ಕಳೆದುಕೊಂಡಿದೆ. ರಾಜಕೀಯ ತತ್ವಗಳು ಅಧಿಕಾರದ ದಾಹಕ್ಕೆ ಬಲಿಯಾಗಿವೆ. ಹಾಗಾಗಿ ಬದುಕಿನ ಸಾರ್ಥಕತೆ ಪಡೆಯಲು ಸಾಮಾಜಿಕ ಮೌಲ್ಯಗಳನ್ನು ಉಳಿಸಿ, ಬೆಳೆಸಲು ಪ್ರಯತ್ನ ಮಾಡಬೇಕು. ನೈತಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಮೂಲಕ ಬದುಕು ಕಟ್ಟಿಕೊಳ್ಳಲು ಮುಂದಾಗಬೇಕು ಎಂದರು.



ಸ್ವಾಸ್ಥ್ಯ ಸಮಾಜ ನಿರ್ಮಾಣ ಮಾಡಲು ಮುಂದಿನ ಪೀಳಿಗೆಗೆ ಅವಶ್ಯವಿರುವ ಚಿಂತನೆಗಳನ್ನು ಉಳಿಸಿ, ಬೆಳೆಸಲು ಆದ್ಯತೆ ನೀಡಬೇಕು. ಆದ್ದರಿಂದ, ಆಧುನಿಕ ಶಿಕ್ಷಣ ಪದ್ಧತಿಯಲ್ಲಿ ಕೌಶಲ್ಯಾಧಾರಿತ ಶಿಕ್ಷಣಕ್ಕೆ ಒತ್ತು ನೀಡಲಾಗಿದೆ. ಶಿಕ್ಷಣವೆಂದರೆ ಕೇವಲ ಮಾಹಿತಿ ಕಲೆ ಹಾಕುವುದಲ್ಲ, ಮನುಷ್ಯನ ವ್ಯಕ್ತಿತ್ವ ಮತ್ತು ಚಾರಿತ್ರ್ಯ ನಿರ್ಮಾಣವೇ ಶಿಕ್ಷಣದ ಮೂಲ ಧ್ಯೇಯವಾಗಬೇಕು. ಜಾಗತೀಕರಣ ವ್ಯವಸ್ಥೆಯಲ್ಲಿ ಮಾರುಕಟ್ಟೆ ಸಂಸ್ಕೃತಿಗಳು, ನಮ್ಮ ಪಾರಂಪರಿಕ ಸಾಂಸ್ಕೃತಿಕ ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತಿವೆ ಎಂದು ವಿಷಾದ ವ್ಯಕ್ತಪಡಿಸಿದರು.

ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟ್ ಕಾರ್ಯದರ್ಶಿ ಎಂ.ಬಿ. ಸಂಗಮೇಶ್ವರ ಗೌಡ್ರು ಮಾತನಾಡಿ, ಕನ್ನಡ ಭಾಷೆ ಉಳಿಸಿ, ಬೆಳೆಸುವ ಅಭಿಲಾಷೆ ಎಲ್ಲರಿಗೂ ಇರುತ್ತದೆ. ಆದರೆ, ಅದರ ಬದ್ಧತೆ ಪ್ರದರ್ಶಿಸುವುದು ಮುಖ್ಯ. ಉತ್ಸಾಹದ ಕೊರತೆಯಿಂದ ಕನ್ನಡ ಬಳಕೆ ಕ್ಷೀಣಿಸುತ್ತಿದೆ. ಸ್ವಚ್ಛ ಕನ್ನಡ ಮಾತನಾಡಲು ಪ್ರಯತ್ನಿಸುವ ಜೊತೆಗೆ, ಮುಂದಿನ ಪೀಳಿಗೆಗೆ ಕನ್ನಡ ಕಲಿಸಲು ಆದ್ಯತೆ ನೀಡಬೇಕು ಎಂದರು.

ಈ ವೇಳೆ ಮಾಗನೂರು ಬಸಪ್ಪ ಶಾಲೆಯ ಆಡಳಿತಾಧಿಕಾರಿ ಶಿರಗುಂಬಿ ಎಸ್‌ಆರ್, ದತ್ತಿದಾನಿಗಳಾದ ಬಿ.ಕೆ ತಿಪ್ಪೇಸ್ವಾಮಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಎಸ್.ಎಸ್.ಎಂ.ಬಿ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಪಿ. ಎಂ. ಪ್ರೇಮಾ ಅಧ್ಯಕ್ಷತೆ ವಹಿಸಿದ್ದರು, ನಿವೃತ್ತ ಉಪನ್ಯಾಸಕರಾದ ಮಂಜುಳಾ ತಿಪ್ಪೇಸ್ವಾಮಿ, ಎ.ಆರ್ ಉಜ್ಜನಪ್ಪ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಬಿ ಪರಮೇಶ್ವರಪ್ಪ ಸೇರಿದಂತೆ ತಾಲ್ಲೂಕು ಕಸಾಪ ಪದಾಧಿಕಾರಿಗಳು, ವಿದ್ಯಾರ್ಥಿಗಳು ಮತ್ತಿತರರಿದ್ದರು.

## ರಾಜ್ಯಮಟ್ಟದ ನವತಾರೆ ಬ್ಯೂಟಿ ಹಾಗೂ ಫಿಟ್‌ನೆಸ್ ಸ್ಪರ್ಧೆಯಲ್ಲಿ ಸೃಜನಾಗೆ ಪ್ರಶಸ್ತಿ



ದಾವಣಗೆರೆ, ಏ.2- ಬೆಂಗಳೂರಿನಲ್ಲಿ ಈಚೆಗೆ ನಡೆದ ರಾಜ್ಯಮಟ್ಟದ ವಿಜಯ ಕರ್ನಾಟಕ ನವತಾರೆ ಬ್ಯೂಟಿ ಹಾಗೂ ಫಿಟ್‌ನೆಸ್ ಸ್ಪರ್ಧೆಯ ಐದನೇ ಆವೃತ್ತಿಯಲ್ಲಿ ಪ್ರಥಮ ರನ್ನರ್‌ಅಪ್ ಸೃಜನಾ ವೀರೇಂದ್ರಕುಮಾರ್ ಅವರು ಆಯ್ಕೆಯಾಗಿದ್ದಾರೆ.

ಸೃಜನಾ ಅವರು ಜನವರಿ 2023ರಲ್ಲಿ ನಗರ ದಲ್ಲಿ ನಡೆದ ಚಿಕ್ಕಮಗ ಳೂರು, ದಾವಣಗೆರೆ, ಶಿವಮೊಗ್ಗ ಹಾಗೂ ಚಿತ್ರದುರ್ಗ ಜಿಲ್ಲೆಗಳನ್ನೊ ಳಗೊಂಡ ಪ್ರಾದೇಶಿಕ ಸುತ್ತಿನಲ್ಲಿಯೂ ಪ್ರಥಮಳಾಗಿ ಆಯ್ಕೆಗೊಂ ಡಿದ್ದರು. ರಾಜ್ಯಮಟ್ಟದ ಸ್ಪರ್ಧೆಯಲ್ಲಿ ರಾಜ್ಯದ ಒಟ್ಟು 21 ಕಾಲೇಜು ಯುವತಿಯರು ಭಾಗವಹಿಸಿದ್ದರು. ಸೃಜನಾ ವೀರೇಂದ್ರಕುಮಾರ್ ಅವರು ನಗರದ ಜೆಜೆಎಂ ಮೆಡಿಕಲ್ ಕಾಲೇಜಿನಲ್ಲಿ ಅಂತಿಮ ವರ್ಷದ ಎಂಬಿಬಿಎಸ್ ಪದವಿ ಓದುತ್ತಿದ್ದಾರೆ. ಸೃಜನಾ ಅವರು ಜೆಜೆಎಂ ಮೆಡಿಕಲ್ ಕಾಲೇಜಿನ ಶಸ್ತ್ರಚಿಕಿತ್ಸಾ ಪ್ರಾಧ್ಯಾಪಕ ಡಾ. ವೀರೇಂದ್ರಕುಮಾರ್ ಮತ್ತು ಶ್ರೀಮತಿ ಸುಮ ದಂಪತಿ ಪುತ್ರಿ.

## ರಾಣೇಬೆನ್ನೂರಿನ ಮಹಿಳಾ ಸೇವಾ ರತ್ನರು ಸಿದ್ಧಗಂಗಾ ಮಕ್ಕಳ ಲೋಕಕ್ಕೆ ಭೇಟಿ

ದಾವಣಗೆರೆ, ಏ. 2- ರಾಣೇಬೆನ್ನೂರಿನ ಬಿ.ಕೆ. ಗುಪ್ತಾ ಸಂಸ್ಥೆಯ ಮಹಿಳಾ ಸೇವಾ ರತ್ನರು ನಿಟುವಳ್ಳಿಯ ಶ್ರೀ ಸಿದ್ಧಗಂಗಾ ಮಕ್ಕಳ ಲೋಕಕ್ಕೆ ಭೇಟಿ ನೀಡಿದ್ದರು.

ಕವಿತಾ ಸುಬ್ರಹ್ಮಣ್ಯ, ರಂಜನಾ ವರಗಿರಿ, ರೋಹಿಣಿ ಗುತ್ತಲ್, ಪದ್ಮಜಾ ದೇಶಪಾಂಡೆ, ಭುವನ ಮಠ, ರಾಮಕೃಷ್ಣ ಈಳಿಗೇರ, ಮಲ್ಲಿಕಾರ್ಜುನ ಚನ್ನಳ್ಳಿ ಶ್ರೀ ಸಿದ್ಧಗಂಗಾ ಸ್ವಾಮೀಜಿಯವ ಗುರುವಂದನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಶ್ರೀಗಳ ಸೇವೆಯನ್ನು ಸ್ಮರಿಸಿದರು. ಸಿದ್ಧಗಂಗಾ ಮಕ್ಕಳ ಲೋಕದ ಸಂಸ್ಥಾಪಕ ಕೆ.ಎನ್. ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ರುದ್ರಾಕ್ಷಿಬಾಯಿ ಪುಟ್ಟಾನಾಯ್ಕ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

## ಕೂಡು ಕುಟುಂಬಗಳ ಕಣ್ಮರೆ ವಿಷಾದದ ಸಂಗತಿ : ಶಾಂತಾ ಭಟ್

ದಾವಣಗೆರೆ, ಏ.2- ಹಣದ ಆಮಿಷಕ್ಕೆ ಒಳಗಾಗಿ, ಉನ್ನತ ಹುದ್ದೆಗಳ ನಿರೀಕ್ಷೆ, ಹೊರ ದೇಶಗಳಿಗೆ ಹೋಗುವ ಭರಾಟೆಯಲ್ಲಿ ಕೂಡು ಕುಟುಂಬದ ಸಂಸ್ಕಾರ, ಸಂಸ್ಕೃತಿ, ಮಾನವೀಯ ಮೌಲ್ಯಗಳ ಸಂಬಂಧಗಳು ಮರೆಯಾಗುತ್ತಿರುವುದು ವಿಷಾದದ ಸಂಗತಿ ಎಂದು ನಗರದ ಸ್ತ್ರೀರೋಗ ತಜ್ಞರೂ, ಹಿರಿಯ ಪರಿಸರ ವಾದಿಯೂ ಆದ ಡಾ. ಶಾಂತಾ ಭಟ್ ಹೇಳಿದರು.

ನಗರದ ಕಲಾಕುಂಚ ಮಹಿಳಾ ವಿಭಾಗದ ಆಶ್ರಯದಲ್ಲಿ ರೋಟರಿ ಬಾಲಭವನದಲ್ಲಿ ಮಹಿಳಾ ದಿನಾಚರಣೆ ಅಂಗವಾಗಿ ಏರ್ಪಡಿಸಲಾಗಿದ್ದ 'ದಾವಣ ಗೆರೆ ಗೃಹಿಣಿ 'ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಣಾ ಸಮಾರಂಭದ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.



ಆಧುನಿಕ ತಂತ್ರಜ್ಞಾನದ ಅನುಕರಣೆ ನಮ್ಮ ಕುಟುಂಬಗಳ ಮುಂದಿನ ಪೀಳಿಗೆಗಳಿಗೆ ಮಾರಕವಾಗುತ್ತದೆ. ಸಾಮಾಜಿಕ ಕಾಳಜಿಯ ಸಮಾಜ ಸೇವೆಯೊಂದಿಗೆ ಕೂಡು ಕುಟುಂಬದ ತೃಪ್ತಿ ಮಹಿಳೆಯರ ಜೀವನಕ್ಕೆ ಸಾರ್ಥಕತೆ ಬರುತ್ತದೆ ಎಂಬ ಕಳಕಳಿ ವ್ಯಕ್ತಪಡಿಸಿದರು.

'ಏಕಲವ್ಯ' ರಾಜ್ಯ ಪ್ರಶಸ್ತಿ ಪುರಸ್ಕೃತರೂ ಆದ ಪಿ. ಎಸ್.ಐ. ಕೆ.ಎಸ್.ಶೈಲಜಾ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಚಿಕ್ಕ ಚಿಕ್ಕ ಮಕ್ಕಳು ವಾಹನ ಚಲಾಯಿಸುತ್ತಿದ್ದಾರೆ. 18 ವರ್ಷದ ಒಳಗಿನ ಮಕ್ಕಳು ಚಾಲನಾ ಪರವಾನಿಗೆ ಇಲ್ಲದೆ ವಾಹನ ಚಲಾಯಿಸಿದಾಗ ಅದರ ಶಿಕ್ಷೆ ಪೋಷಕರಿಗೆ ಆಗುತ್ತದೆ ಎಂದು ಕಾನೂನು ಶಿಸ್ತಿನ ಬಗ್ಗೆ ವಿವರಿಸಿದರು.

ಏಜು ಏಷ್ಯಾ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕರಾದ ಶ್ರೀಮತಿ ನೀಲಮ್ಮ ಸಂಗನಬಸಪ್ಪ ಮಾಗಾನಹಳ್ಳಿ ಅವರು ಮಾತನಾಡಿ, 'ಮಹಿಳೆಯರು ಜೀವನದ ಕಷ್ಟ ಕಾರ್ಪಣ್ಯಗಳನ್ನು ತಾಳ್ಮೆಯಿಂದ ಎದುರಿಸಿ, ಕೆಚ್ಚೆದೆಯಿಂದ ಧೈರ್ಯವಾಗಿ ಮುನ್ನಡೆದರೆ ಸಾಧನೆಗಳ ಹಾದಿ ಸುಗಮವಾಗುತ್ತದೆ' ಎಂದರು.

ಕಲಾಕುಂಚ ಮಹಿಳಾ ವಿಭಾಗದ ಸಂಸ್ಥಾಪಕಿ ಜ್ಯೋತಿ ಗಣೇಶ್ ಶೆಣೈ ಅಧ್ಯ ಕ್ಷತೆ ವಹಿಸಿದ್ದರು. ಹೇಮಾ ಶಾಂತಪ್ಪ ಪೂಜಾರಿ, ವಸಂತಿ ಮಂಜು ನಾಥ್, ಪರ್ವಿನ್ ಅಮೀರ್‌ಜಾನ್, ಲಲಿತಾ ಕಲ್ಲೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಜಯಲಕ್ಷ್ಮಿ ಮಲ್ಲನಗೌಡ್ರು - ಉಮಾ ನಾಗರಾಜ್ ಪ್ರಾರ್ಥಿಸಿದರು. ಪುಷ್ಪಾ ಮಂಜುನಾಥ್ ಸ್ವಾಗತಿಸಿದರು. ಶೈಲಾ ವಿನೋದ್ ದೇವರಾಜ್ ವಂದಿಸಿದರು.

### ಓದುಗರ ಪತ್ರ

## ದುಶ್ಚಟಗಳ ತಾಣವಾದ ಐತಿಹಾಸಿಕ ತುಂಗಭದ್ರಾ ಸೇತುವೆ



**ಮಾನ್ಯರೇ,**

ಹರಿಹರದ ತುಂಗಭದ್ರಾ ಹೊಳೆಯ ಹಳೆಯ ಸೇತುವೆ ಇತಿಹಾಸ ಸೃಷ್ಟಿಸಿದೆ. ಈ ಸೇತುವೆ ಉತ್ತರ ಕರ್ನಾಟಕ ಮತ್ತು ಮಧ್ಯ ಕರ್ನಾಟಕದ ಕೊಂಡಿಯಾಗಿ ಶತಮಾನಗಳ ಕಾಲ ಜನರಿಗೆ ಸೇವೆ ನೀಡಿ, ಈಗ ತನ್ನ ಕೆಲಸವನ್ನು ಹೊಸ ಸೇತುವೆಗೆ ಒಪ್ಪಿಸಿದೆ.

ಹೊಸ ಸೇತುವೆ ನಿರ್ಮಾಣವಾದ ನಂತರ ಹಳೆಯ ಸೇತುವೆಯ ಮೇಲೆ ವಾಹನ ಸಂಚಾರವನ್ನು ನಿಷೇಧಿಸಿದೆ. ಇದೀಗ ಶತಮಾನದ ಹರೆಯದ ಸೇತುವೆ ಜನರಿಗೆ ವಾಯುವಿಹಾರ ಮಾಡಲು ತನ್ನ ಸೇವೆಯನ್ನು ನೀಡುತ್ತಿದೆ. ಆದರೆ ಈ ಶತಮಾನದ ಸೇತುವೆಯಲ್ಲಿ ಪುಂಡ ಪೋಕರಿಗಳ ಅಟ್ಟಹಾಸ ಹೆಚ್ಚಾಗಿದೆ. ರಾತ್ರಿಯಾದರೆ ಸಾಕು ಕುಡುಕರ ಅಡ್ಡಾಗಳು ಸೇತುವೆಯ ಸೌಂದರ್ಯವನ್ನು ಹಾಳುಮಾಡುತ್ತಿವೆ.

ಸೇತುವೆಯ ಮೇಲೆ ಇರುವ ನೀರಿನ ಪೈಪುಗಳ ಕೆಳಗೆ ರಾಶಿ-ರಾಶಿ ಕಸ, ಬಿಯರ್ ಬಾಟಲ್‌ಗಳು, ಸಿಗರೇಟ್ ತುಂಡುಗಳು, ಪಾನ್ ಮಸಾಲ ಚೀಟ್ ಗಳು, ಉಗುಳಿದ ಕಲೆಗಳು, ಸೇತುವೆಯ ಅಂದವನ್ನು ಕುಗ್ಗಿಸುತ್ತಿವೆ.

ಸೇತುವೆ ಮೇಲೆ ಮೀನು ಹಿಡಿಯಲು ಕುಳಿತ ಮೀನುಗಾರರು ಪ್ರಾಣ ಭಯವಿಲ್ಲದೆ ಸೇತುವೆ ಗೋಡೆಯ ಮೇಲೆ ಕುಳಿತಿರುತ್ತಾರೆ ಮತ್ತು ಪಾನ್ ಮಸಾಲ ಜಗಿದು ಅಲ್ಲಲ್ಲಿ ಉಗುಳಿರುವುದು ಕಾಣಿಸುತ್ತಿದೆ.

ವಾಯುವಿಹಾರಕ್ಕೆ ಬರುವ ಸಾರ್ವಜನಿಕರಿಗೆ ಗಾಜಿನ ಚೂರುಗಳು ಗಾಯಗೊಳಿಸುತ್ತಿವೆ ಹಾಗೂ ಇಲ್ಲಿನ ದುಶ್ಚಟಗಳ ತುಂಡುಗಳನ್ನು ಕಂಡು ನಗರದ ಜನರು ಆಕ್ರೋಶ ಹೊರಹಾಕುತ್ತಾ ಅಂಧ ಅಧಿಕಾರಿಗಳಿಗೆ ಹಿಡಿಶಾಪ ಹಾಕುತ್ತಿದ್ದಾರೆ.

ಪುಂಡ ಪೋಕರಿಗಳ ಹಾಗೂ ಕುಡುಕರ ಹಾವಳಿಯನ್ನು ಮಟ್ಟ ಹಾಕಲು ಪೊಲೀಸ್ ಇಲಾಖೆ ರಾತ್ರಿ ಹೊತ್ತು ಗಸ್ತು ಹಾಕಬೇಕು ಮತ್ತು ನಗರಸಭೆಯ ಅಧಿಕಾರಿಗಳು ಮಲಿನ ಸೇತುವೆಯನ್ನು ಸ್ವಚ್ಛಗೊಳಿಸಿದರೆ ಕಂಗೊಳಿಸುತ್ತಾ. ಹಿರಿಯ ವಾಯು ವಿಹಾರಿಗಳಿಗೆ ಅನುಕೂಲವಾಗುತ್ತದೆ.

**- ಸುನೀಲ್ ಹರಿಹರ,** ಪತ್ರಿಕೋದ್ಯಮ ವಿದ್ಯಾರ್ಥಿ



## ಖುಷಿ-ರಿಷಾಗೆ ಬಹುಮಾನ

ದಾವಣಗೆರೆ, ಏ.2- ಭಾರತ ಸರ್ಕಾರದ ಸ್ವಚ್ಛ ಟಾಯ್ ಕ್ಯಾಥೋನ್ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ಭಾರತೀಯ ಆಟಿಕೆ ಉದ್ಯಮವನ್ನು ಮರು ಚಿಂತನೆ ಮಾಡುವ ಉದ್ದೇಶದಿಂದ ಹಮ್ಮಿಕೊಳ್ಳಲಾಗಿದ್ದ ಸ್ಪರ್ಧೆಯಲ್ಲಿ ಜಿಲ್ಲೆಯಿಂದ ಕು.ಖುಷಿ ಎಸ್. ಹಾಗೂ ಕು. ರಿಷಾ ಎಸ್. ಇಬ್ಬರೂ ಭಾಗವಹಿಸಿ, ಹಳೆಯ ದಿನಪತ್ರಿಕೆಗಳನ್ನು ಬಳಸಿ ಆಟಿಕೆ ಮಾಡಿ ಬಹುಮಾನ ಪಡೆದ್ದಾರೆ. ಮಹಾನಗರ ಪಾಲಿಕೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಜಗದೀಶ್ ಪ್ರಶಸ್ತಿ ಪತ್ರ ಹಾಗೂ ಬಹುಮಾನ ವಿತರಿಸಿದರು. ಈ ಸಂದರ್ಭದಲ್ಲಿ ಹೆಲ್ಪ್‌ಲೈನ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಸುಭಾನ್ ಉಪಸ್ಥಿತರಿದ್ದರು.

## ಬಡ ಮಕ್ಕಳ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಶಬೀನಾಬಾನು

ಹರಪನಹಳ್ಳಿ, ಏ. 2- ಬಡ ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ತಮ್ಮ ಕೈಲಾದಷ್ಟು ಆರ್ಥಿಕ ಸಹಾಯವನ್ನೂ ನೀಡುತ್ತಾ ಪರಿಸರ ಜಾಗೃತಿ, ಭಾವೈಕ್ಯತೆ ಮೂಡಿಸುವ ಜಾನಪದ ನೃತ್ಯ, ಸುಗ್ಗಿ ನೃತ್ಯ, ಭಾವಗೀತೆ ಕಲಿಸಿಕೊಡುತ್ತಿರುವ ದಿಟ್ಟ ಮಹಿಳೆ ಹೊಸದುರ್ಗದ ಶಿಕ್ಷಕಿ ಶಬೀನಾಬಾನು ಎಂದು ಹಿರಿಯ ರಂಗ ನಿರ್ದೇಶಕ ಪರಶುರಾಮ ಹೇಳಿದರು.

ಪಟ್ಟಣದ ಆದರ್ಶ ಮಹಿಳಾ ಮಂಡಳಿಯ ಕಲಾ ತಂಡದಲ್ಲಿ ಸಂಗೀತ ಸಂಯೋಜನೆಯ ಕಾರ್ಯಕ್ರಮದಲ್ಲಿ ಮಾತನಾಡಿ, ಪ್ರೈಮರಿ ಶಾಲೆಯಲ್ಲಿ ಓದುತ್ತಿರುವಾಗಲೇ ಹೊಸದುರ್ಗದ ಗಂಗಮ್ಮ ಮತ್ತು ಈಶ್ವರಪ್ಪ ಇವರಲ್ಲಿ ಕರ್ನಾಟಕ ಸಂಗೀತ ಕಲಿತಿರುವ ಶಬೀನಾಬಾನು ತನ್ನ ತಂದೆಯ ಹೆಸರಿನಲ್ಲಿ ರೆಹಮಾನಿಯಾ ಸಾಂಸ್ಕೃತಿಕ ಕಲಾ ಸಂಘ ಕಟ್ಟಿಕೊಂಡು ಎರಡು ದಶಕಗಳಿಂದ ಕರುನಾಡಿನ ಮುಕ್ಕಾಲು ಜಿಲ್ಲೆಗಳಲ್ಲಿ ಉತ್ತಮ ಪ್ರದರ್ಶನ ಕೊಟ್ಟು ಹೆಸರು ಪಡೆದಿದ್ದಾರೆ.



ಇವರ ಪರಿಶ್ರಮಕ್ಕೆ 'ಬಸವಶಾಂತಿ' ಪ್ರಶಸ್ತಿ ಬಿಜಾಪುರ, ಸದ್ಭಾವನಾ ಪ್ರಶಸ್ತಿ, ಜವಾಹರಲಾಲ್ ನೆಹರು ಪ್ರಶಸ್ತಿ ಬೆಂಗಳೂರು, ರಾಜ್ಯ ಮಹಿಳಾ ಪ್ರಶಸ್ತಿ ಚಿತ್ರದುರ್ಗ, ಕನ್ನಡತಿ ಗಾರುಡಿ ಪ್ರಶಸ್ತಿ ಶಿವಮೊಗ್ಗ, ಸಾಲು ಮರದ ತಿಮ್ಮಕ್ಕ ಪ್ರಶಸ್ತಿ ಚಳ್ಳಕೆರೆ, ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ದುರ್ಗದ ಸಿರಿ ಪ್ರಶಸ್ತಿ ಹೀಗೆ ಹಲವಾರು ಪ್ರಶಸ್ತಿಗಳನ್ನು ಬಾಚಿಕೊಂಡಿರುವರು. ಈಗ ಗವಿರಂಗನಾಥ ಸ್ವಾಮಿ ಶಾಲೆಯಲ್ಲಿ ಶಿಕ್ಷಕಿಯಾಗಿ ಕರ್ತವ್ಯ ನಿರ್ವಹಿಸುತ್ತಾ ಕಲೆ, ಸಾಹಿತ್ಯ, ಸಂಗೀತ ಕ್ಷೇತ್ರದಲ್ಲಿ ಬಡಮಕ್ಕಳಿಗೆ ಉಚಿತ ತರಬೇತಿ ಕೊಡುತ್ತಿದ್ದಾರೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಘಟಕದ ಅಧ್ಯಕ್ಷ ಕೆ. ಉಚ್ಚಂಗೆಪ್ಪ ಮಾತನಾಡಿ, ಶಬಿನಾರವರ ಕಂಠಸಿರಿ ಕೇಳುಗರಿಗೆ ಇಂಪು ಕೊಡುವುದು, ಸ್ಪಷ್ಟ ನಿಷ್ಕಲ್ಮಶದ ನುಡಿಗಳಿಂದ ರಾಗಕ್ಕೆ ಸಂಯೋಜನೆ ಮಾಡಿದ್ದನ್ನು ಸ್ಮರಿಸಿದರು. ಈ ವೇಳೆ ಆನಂದ, ಗಗನ, ಶಿಲ್ಪಾ, ಗುಡ್ಡಪ್ಪ, ಕುಮಾರ, ಧರ್ಮರಾಯ, ಚೌಡಮ್ಮ, ತೆಲಗಿ ಗಾಯತ್ರಿ, ಸವಿತಾ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ನಗರದಲ್ಲಿ ಬೇಸಿಗೆ ಕಲಾ ಶಿಬಿರ

ವಿನೋಬನಗರದ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆಯಲ್ಲಿ ಮಕ್ಕಳಿಗೆ ಚಿತ್ರಕಲಾ ಶಿಬಿರವನ್ನು ಇಂದು ಆಯೋಜಿಸಲಾಗಿದೆ. ಶಿಬಿರದಲ್ಲಿ ರೇಖಾಚಿತ್ರ, ಪೆನ್ಸಿಲ್ ಶೇಡಿಂಗ್, ಕಲರಿಂಗ್, ಗ್ರೀಟಿಂಗ್, ಪೇಪರ್ ಕ್ರಾಫ್ಟ್, ತ್ರೇಡ್ ಆರ್ಟ್, ಗ್ಲಾಸ್ ಪೇಂಟಿಂಗ್ ಹೀಗೆ ವಿವಿಧ ಪ್ರಕಾರದ ಕಲೆಗಳನ್ನು ತಿಳಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಶಿಬಿರದ ಸಂಚಾಲಕ ಶಾಂತಯ್ಯ ಪರಡಿಮಠ ಚಿತ್ರಕಲಾ ಶಿಕ್ಷಕರು 9916469579 ಸಂಪರ್ಕಿಸಲು ಮುಖ್ಯೋಪಾಧ್ಯಾಯ ನಾಗರಾಜ ಎಸ್. ತಿಳಿಸಿದ್ದಾರೆ.

## ಇಂದಿನಿಂದ ಬೇಸಿಗೆ ಕ್ರಿಕೆಟ್ ತರಬೇತಿ ಶಿಬಿರ

ಕ್ರಿಕೆಟ್ ಅಕಾಡೆಮಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಸತತ 22ನೇ ವರ್ಷದ ಬೇಸಿಗೆ ಕ್ರಿಕೆಟ್ ತರಬೇತಿ ಶಿಬಿರ ಜಿಲ್ಲಾ ಕ್ರೀಡಾಂಗಣದಲ್ಲಿ ಹಾಗೂ ಹೈಸ್ಕೂಲ್ ಮೈದಾನದಲ್ಲಿ ಇಂದಿನಿಂದ ಪ್ರಾರಂಭವಾಗಲಿದೆ. ಶಿಬಿರದಲ್ಲಿ ಫಿಟ್ನೆಸ್ ಬಗ್ಗೆಯೂ ಹೇಳಿಕೊಡಲಾಗುವುದು. ವಿವರಗಳಿಗೆ ತರಬೇತಿ ಶಿಬಿರದ ಆಯೋಜಕರಾದ ಗುರುದೇವ್ ಅಂಬರ್ಕರ್ (9964599160), ಗೋಪಾಲಕೃಷ್ಣ (7899610318), ತಿಮ್ಮೇಶ್ (9880440602) ಅವರನ್ನು ಸಂಪರ್ಕಿಸಬಹುದು.

## ರಾಜನಹಳ್ಳಿ ಮಠದಲ್ಲಿ ಇಂದು ಪುಣ್ಯಾರಾಧನೆ



ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಇಂದು ಬೆಳಿಗ್ಗೆ 10.30ಕ್ಕೆ ಲಿಂಗೈಕ್ಯ ಶ್ರೀ ಪುಣ್ಯಾನಂದ ಪುರಿ ಶ್ರೀಗಳವರ 16ನೇ ವರ್ಷದ ಪುಣ್ಯಾರಾಧನೆ ಅಂಗವಾಗಿ ಗದ್ದುಗೆಗೆ ವಿಶೇಷ ಪೂಜಾ ಕಾರ್ಯಕ್ರಮವನ್ನು ಶ್ರೀ ವಾಲ್ಮೀಕಿ ಪ್ರಸನ್ನಾ ನಂದ ಶ್ರೀಗಳವರ ದಿವ್ಯ ಸಾನ್ನಿಧ್ಯದಲ್ಲಿ ಹಮ್ಮಿಕೊಳ್ಳ ಲಾಗಿದೆ ಎಂದು ಮಠದ ಆಡಳಿತಾಧಿಕಾರಿ ಟಿ.ಓಬಳಪ್ಪ ತಿಳಿಸಿದ್ದಾರೆ.


**ಮಾನ್ಯ ಹಿರಿಯ ಸಿವಿಲ್ ಜಡ್ಜ್‌ರವರ ನ್ಯಾಯಾಲಯ, ಹರಿಹರ**

**ಓ.ಎಸ್. ನಂ. 121/2019**

ವಾದಿಯರು : ಶ್ರೀಮತಿ ಕೃಷ್ಣವೇಣಿ - ವಿರುದ್ಧ -

ಪ್ರತಿವಾದಿಯರು : ಜೆ. ಸೀತಾರಾಮಯ್ಯ ಮತ್ತು ಇತರರು

ಪ್ರತಿವಾದಿ ನಂ.1 (ಎ) : ಶ್ರೀಮತಿ ಜೆ. ವೆಂಕಟರಮಣಮ್ಮ ಕೋಂ. ಲೇಟ್ ಜೆ. ಸೀತಾರಾಮಯ್ಯ, ವಯಸ್ಸು ಸುಮಾರು 90 ವರ್ಷ, ವಾಸ : ಜೆ. ಸಾಯಿ ಪ್ರಸಾದ್, ನಂದಿತಾವರೆ ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ

**ಸಿವಿಲ್ ಪ್ರಕ್ರಿಯಾ ಸಂಹಿತೆಯ ಆದೇಶ 5 ನಿಯಮ 20(1-3) ರ ಪ್ರಕಾರ ನೋಟಿಸ್**

ಈ ಮೇಲ್ಕಂಡ ದಾವೆಯಲ್ಲಿ ವಾದಿಯು ಪ್ರತಿವಾದಿಯರ ವಿರುದ್ಧ ಪಾಲು ವಿಭಾಗಕ್ಕಾಗಿ ದಾವೆಯನ್ನು ಸಲ್ಲಿಸಿದ್ದು ಇರುತ್ತದೆ. ಈ ಮೇಲ್ಕಂಡ ದಾವೆಯಲ್ಲಿ ಹೇಳಿರುವ ಪ್ರತಿವಾದಿ ನಂ.1(ಎ) ರವರಿಗೆ ದಾವಾ ಸಮನ್ಸನ್ನು ಗೌರವಾನ್ವಿತ ನ್ಯಾಯಾಲಯದಿಂದ ಹಾಗೂ ನೋಂದಾಯಿತ ಅಂಚೆ ಮೂಲಕ ಕಳುಹಿಸಿದರೂ ತಾವು ಪಡೆದುಕೊಂಡಿರುವುದಿಲ್ಲ.

ಆದ್ದರಿಂದ ಮಾನ್ಯ ನ್ಯಾಯಾಲಯವು ನಿಮಗೆ ಈ ಮೂಲಕ ತಿಳಿಸುವುದೇನೆಂದರೆ, ನೀವಾಗಲೀ, ನಿಮ್ಮ ಪರ ವಕೀಲರಾಗಲೀ ದಿನಾಂಕ :03.06.2023 ರಂದು ಬೆಳಿಗ್ಗೆ 11-00 ಗಂಟೆಗೆ ನ್ಯಾಯಾಲಯದಲ್ಲಿ ಹಾಜರಾಗಲು ಈ ಮೂಲಕ ತಿಳಿಸಲಾಗಿದೆ. ತಪ್ಪಿದ್ದಲ್ಲಿ ದಾವೆಯನ್ನು ಏಕಪಕ್ಷೀಯವಾಗಿ ಇತ್ಯರ್ಥ ಪಡಿಸಲಾಗುವುದು ತಿಳಿಯಿರಿ. ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ 09.03.2023 ರಂದು ನೀಡಲಾಗಿದೆ.

ವಾದಿಯರ ಪರ ವಕೀಲರು
ಎನ್.ಪಿ. ತಿಮ್ಮನಗೌಡ

**ನ್ಯಾಯಾಲಯದ ಆದೇಶದ ಮೇರೆಗೆ**
**ಶಿರಸ್ತೇದಾರರು**
**ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಹರಿಹರ**

## ವಿವಿಧ ಕ್ಷೇತ್ರಗಳ ಮಹಿಳಾ ಸಾಧಕರಿಗೆ ಸನ್ಮಾನ



ದಾವಣಗೆರೆ, ಏ. 2-ನಗರದ ರೋಟರಿ ಬಾಲಭವನದಲ್ಲಿ ಕಲಾಕುಂಚ ಮಹಿಳಾ ವಿಭಾಗ ದಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಹಮ್ಮಿಕೊಳ್ಳಲಾಗಿದ್ದ ಸಮಾರಂಭದಲ್ಲಿ ಅಂತರರಾಷ್ಟ್ರೀಯ ಕ್ರೀಡಾಪಟು 'ಏಕಲವ್ಯ' ರಾಜ್ಯ ಪ್ರಶಸ್ತಿ ಪುರಸ್ಕೃತರೂ, ಶಿವಮೊಗ್ಗ ಪೊಲೀಸ್ ಇಲಾಖೆಯ ಪಿ.ಎಸ್.ಐ. ಕೆ.ಎಸ್.ಶೈಲಜಾ, ಶೈಕ್ಷಣಿಕ ಕ್ಷೇತ್ರದ ಹಿರಿಯ ಶಿಕ್ಷಕಿ ನೀಲಮ್ಮ ಸಂಗನ ಬಸಪ್ಪ ಮಾಗಾನಹಳ್ಳಿ, ನಗರದ ಸ್ತ್ರೀರೋಗ ತಜ್ಞರೂ, ಹಿರಿಯ ಪರಿಸರ ವಾದಿಗಳೂ ಆದ ಡಾ. ಶಾಂತಾ ಭಟ್, ಮಾಧ್ಯಮ ಕ್ಷೇತ್ರದ ತೇಜಸ್ವಿನಿ ಪ್ರಕಾಶ್, ಮಹಾನಗರ ಪಾಲಿಕೆಯ ಸ್ವಚ್ಛ ಕರ್ಮಚಾರಿ ರೇಣುಕಮ್ಮ ದುಗ್ಗಪ್ಪ ಅವರುಗಳನ್ನು ಗೌರವಿಸಲಾಯಿತು.

ಕಲಾಕುಂಚ ಮಹಿಳಾ ವಿಭಾಗದ ಸಂಸ್ಥಾಪಕರಾದ ಜ್ಯೋತಿ ಗಣೇಶ್ ಶೆಣೈ, ವಸಂತಿ ಮಂಜುನಾಥ್, ಪರ್ವಿನ್ ಅಮೀರ್‌ಜಾನ್, ಹೇಮಾ ಶಾಂತಪ್ಪ ಪೂಜಾರಿ, ಲಲಿತಾ ಕಲ್ಲೇಶ್ ಉಪಸ್ಥಿತರಿದ್ದರು.

## ನಾಗರಸನಹಳ್ಳಿಯಲ್ಲಿ ವೀರಭದ್ರೇಶ್ವರ ಮಹಾರಥೋತ್ಸವ

ದಾವಣಗೆರೆ, ಏ.2- ತಾಲ್ಲೂಕಿನ ನಾಗರಸನಹಳ್ಳಿ ಗ್ರಾಮದಲ್ಲಿ ಶ್ರೀ ವೀರಭದ್ರೇಶ್ವರ ಸ್ವಾಮಿಯ ಗುಗ್ಗಳ, ಕೆಂಡದಾರ್ಚನೆ ಮತ್ತು ಮಹಾರಥೋತ್ಸವವು ನಾಡಿದ್ದು ದಿನಾಂಕ 4ರಿಂದ ಮೂರು ದಿನ ನಡೆಯಲಿದೆ. ನಾಡಿದ್ದು ದಿನಾಂಕ 4 ರ ಮಂಗಳವಾರ ಸಾಯಂಕಾಲ 'ಮುತ್ತೇನಹಳ್ಳಿ ಶ್ರೀ ದುರ್ಗಾಂಬಿಕಾ ದೇವಿ ಮತ್ತು ಶ್ರೀ ವೀರಭದ್ರೇಶ್ವರ ಸ್ವಾಮಿಯನ್ನು ಕರೆತರುವುದು, ಗ್ರಾಮದ ರಾಜಬೀದಿಗಳಲ್ಲಿ ಮೆರವಣಿಗೆ ನಡೆಸಲಾಗುವುದು. ದಿನಾಂಕ 5ರ ಬುಧವಾರ ನಾಗರಸನಹಳ್ಳಿಯಲ್ಲಿ ಶ್ರೀ ವೀರಭದ್ರೇಶ್ವರ ಸ್ವಾಮಿಯ ಗುಗ್ಗಳ ಮತ್ತು ಉಚ್ಚಾಯ, ಕೆಂಡದಾರ್ಚನೆ ನಡೆಯುತ್ತದೆ. ದಿನಾಂಕ 6 ರ ಗುರುವಾರ ಸಾಯಂಕಾಲ 4 ಗಂಟೆಯಿಂದ ಮಹಾರಥೋತ್ಸವ ನಡೆಯುತ್ತದೆ.

# ರಂಗಶಾಲೆಯಲ್ಲಿ ಸಿಗುತ್ತೆ ಯಶಸ್ಸಿಗೆ ಬೇಕಾದ ತರಬೇತಿ

## 'ದಿವ್ಯಜ್ಯೋತಿ' ನಾಟಕ ಕೃತಿ ಲೋಕಾರ್ಪಣೆಗೊಳಿಸಿದ ಕಲಾವಿದ ಆರ್.ಟಿ. ಅರುಣ್ ಕುಮಾರ್


ದಾವಣಗೆರೆ, ಏ.2- ಜೀವನದ ಯಶಸ್ಸಿಗೆ ಬೇಕಾಗುವ ಎಲ್ಲಾ ತರಬೇತಿ ರಂಗಶಾಲೆಯಲ್ಲಿ ಸಿಗುತ್ತದೆ ಎಂದು ಹಿರಿಯ ಕಲಾವಿದ ಆರ್.ಟಿ. ಅರುಣ್ ಕುಮಾರ್ ಹೇಳಿದರು.

ಅಭಿಯಂತರರಂಗ ದಾವಣಗೆರೆ ವತಿಯಿಂದ ನಗರದ ಧ.ರಾ.ಮ. ವಿಜ್ಞಾನ ಕಾಲೇಜು ಸಭಾಂಗಣದಲ್ಲಿ ಭಾನುವಾರ ಹಮ್ಮಿಕೊಳ್ಳಲಾಗಿದ್ದ ಸಮಾರಂಭದಲ್ಲಿ 'ದಿವ್ಯಜ್ಯೋತಿ' ನಾಟಕ ಕೃತಿ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಸಂಘಟನೆ, ಮಾನವ ಸಂಪನ್ಮೂಲಗಳ ಬಳಕೆ, ಆರ್ಥಿಕ ವ್ಯವಹಾರ, ಶಿಸ್ತು, ಧೈರ್ಯ ಇವೆಲ್ಲವನ್ನೂ ರಂಗ ಸಜ್ಜಿಕೆ ಕಲಿಸಿಕೊಡುತ್ತದೆ ಎಂದು ಹೇಳಿದರು.

ಸಿನಿಮಾ ರಂಗದಲ್ಲಿ ಉತ್ತಮ ಅವಕಾಶಗಳಿದ್ದರೂ ಹೆಚ್ಚಿನ ಆಸಕ್ತಿ ನಾಟಕಗಳತ್ತ ಇತ್ತು. ಇದಕ್ಕೆ 'ಅಭಿಯಂತರರಂಗ', 'ಪ್ರತಿಮಾ ಸಭಾ' ಕಾರಣ ಇರಬಹುದು. ಆದರೆ ಪ್ರತಿಭೆಯಲ್ಲಿ ಪ್ರಬುದ್ಧತೆ ಹೇಗಿರಬೇಕೆಂದು ಕಲಿಸಿಕೊಟ್ಟಿದ್ದು ಹಿರಿಯ ರಂಗಕರ್ಮಿ, ನಿರ್ದೇಶಕ ಎಸ್. ಚಿದಾನಂದ್ ಅವರು. ಅವರೆಂದೂ ಪ್ರಚಾರ ಬಯಸದ ಸ್ನೇಹ ಜೀವಿ ಎಂದರು.

'ದಿವ್ಯಜ್ಯೋತಿ' ಅತ್ಯುತ್ತಮ ನಾಟಕವಾಗಿದ್ದು, ಶೀಘ್ರವೇ ಪ್ರದರ್ಶನಕ್ಕೆ ಸಜ್ಜಾಗುವುದಾಗಿಯೂ ಅರುಣ್ ಕುಮಾರ್ ಹೇಳಿದರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಾನಪದ ತಜ್ಞ ಡಾ.ಎಂ.ಜಿ.ಈಶ್ವರಪ್ಪ, ಕನ್ನಡ ಸಾಹಿತ್ಯದಲ್ಲಿ ನಾಟಕ ಕ್ಷೇತ್ರ ಬಹುಮುಖ್ಯವಾದುದು. ನಾಟಕಗಳು ಸಾಮಾಜಿಕ ಎಚ್ಚರವನ್ನು ನೀಡುವ ಅಗತ್ಯವಿದೆ ಎಂದು ಹೇಳಿದರು.

ರಂಗಕರ್ಮಿ ಎಸ್.ಚಿದಾನಂದ್ ಮಾತನಾಡುತ್ತಾ, ಅಮೂರ್ತ ರೂಪದ ವಸ್ತುಗಳನ್ನು ಸಾಕ್ಷಾತ್ಕಾರಗೊಳಿಸುವ ಬೆಳಕೇ 'ದಿವ್ಯಜ್ಯೋತಿ' ಎಂದು ಹೇಳಿದರು.

ಬಾಹ್ಯದಲ್ಲಿ ಕಾಣುವ ವಸ್ತುಗಳನ್ನು ನೋಡಲು ತೆರೆದ ಕಣ್ಣುಗಳು ಹಾಗೂ ಬೆಳಕು ಇರಬೇಕು. ಕಣ್ಣುಗಳಿದ್ದರೂ ಕತ್ತಲಿದ್ದರೆ, ಬೆಳಕಿದ್ದೂ ಕಣ್ಣು ಮುಚ್ಚಿದ್ದರೆ ವಸ್ತುಗಳನ್ನು ಕಾಣಲು ಸಾಧ್ಯವಿಲ್ಲ. ಹಾಗೆಯೇ ಭಾವನೆಗಳು, ಸಂಬಂಧಗಳನ್ನು ನೋಡಲು ಒಳಗಣ್ಣುಗಳನ್ನು ತೆರೆದಿರಬೇಕು ಎಂದರು.

ಕೃತಿಯ ಕುರಿತು ಮಾತನಾಡಿದ ಎಂ.ಎಸ್. ವೆಂಕಟೇಶ್, ದಿವ್ಯಜ್ಯೋತಿ ನಾಟಕದಲ್ಲಿ ಚಿದಾನಂದ್ ಅವರು ಬೆಳಕಿಗೆ ಹೆಚ್ಚು ಪ್ರಾಮುಖ್ಯತೆ ನೀಡಿದ್ದಾರೆ. ಸ್ತ್ರೀ ಶೋಷಣೆಯ ಬಗ್ಗೆ ಧ್ವನಿ ಎತ್ತಿದ್ದಾರೆ ಎಂದರು.

ಅತಿಥಿಯಾಗಿ ಆಗಮಿಸಿದ್ದ ಪ್ರಕಾಶಕ ಸಿ.ಜಿ. ದಿನೇಶ್ ಮಾತನಾಡಿ, ವ್ಯಕ್ತಿಯನ್ನು ಉತ್ತಮ ಮಾರ್ಗದತ್ತ ಬದಲಿಸುವ ಶಕ್ತಿ ನಾಟಕಗಳಿಗಿದೆ. ಶಾಲಾ ಕೊಠಡಿಯಲ್ಲಿ ಪ್ರಶ್ನೆ ಕೇಳಲು ಹಿಂಜರಿಯುತ್ತಿದ್ದ ಮಕ್ಕಳು ರಂಗಶಾಲೆಯಲ್ಲಿ ತರಬೇತಿ ಪಡೆದ ನಂತರ ಭಯಪಡದೆ ಮಾತನಾಡಿರುವ ಉದಾಹರಣೆಗಳಿವೆ. ನಾಟಕ ಮಕ್ಕಳಲ್ಲಿ ಧೈರ್ಯ ತುಂಬುತ್ತದೆ ಎಂದರು.

ಮನೆ ಕಟ್ಟಿ ನೋಡು, ಮದುವೆ ಮಾಡಿ ನೋಡು ಎಂಬ ಗಾದೆಗಳಂತೆ ನಾಟಕ ಮಾಡಿಸಿ ನೋಡು ಎಂದು ಹೇಳಿದರೆ ತಪ್ಪಿಲ್ಲ. ಏಕೆಂದರೆ ಎಲ್ಲರನ್ನೂ ಸೇರಿಸಿಕೊಂಡು ನಾಟಕ ಮಾಡುವುದು ಸುಲಭದ ಮಾತಲ್ಲ. ಇಂತಹ ಸಂದರ್ಭದಲ್ಲೂ ಸಿಗುವ ಸಾಮಗ್ರಿಗಳನ್ನೇ ಬಳಸಿಕೊಂಡು ನಾಟಕ ನಿರ್ದೇಶನ ಮಾಡುವ ಜಾಣ್ಮೆ ಚಿದಾನಂದ ಅವರಲ್ಲಿದೆ ಎಂದರು.

ಜಾನಪದ ತಜ್ಞ ಡಾ.ಎಂ.ಜಿ. ಈಶ್ವರಪ್ಪ ಅಧ್ಯಕ್ಷತೆ ವಹಿಸಿದ್ದರು. ಧ.ರಾ.ಮ. ಕಾಲೇಜು ಪ್ರಾಂಶುಪಾಲರಾದ ಡಾ.ಆರ್. ವನಜಾ, ಎಂ.ಎಸ್. ವೆಂಕಟೇಶ್ ಉಪಸ್ಥಿತರಿದ್ದರು. ಉಪನ್ಯಾಸಕ ಡಾ.ವಿ. ಜಿ. ರುದ್ರೇಶ್ ಸ್ವಾಗತಿಸಿದರು. ಡಾ.ಬಿ.ಟಿ. ಅಚ್ಯುತ್ ಪ್ರಾರ್ಥಿಸಿದರು. ಶರಣಬಸಪ್ಪ ಪಾಟೀಲ್ ನಿರೂಪಿಸಿದರು. ಪ್ರತಿಭಾ ವಂದಿಸಿದರು.

ಅತಿಥಿಗಳ ಮಾತಿನ ನಡುವೆ ಕಲಾವಿದರು ಹಾಡಿದ ರಂಗಗೀತೆಗಳು ಮುದ ನೀಡಿದವು.

# ಶ್ರೀ ಶಾರದಾ ಸಂಗೀತ - ನೃತ್ಯ ಕಲಾ ಶಾಲೆಯಿಂದ ನೃತ್ಯ ಸಮರ್ಪಣೆ



ಪ್ರೇಕ್ಷಕರನ್ನು ಹಿಡಿದಿಟ್ಟುಕೊಂಡ ಶ್ರೀ ಶಾರದಾ ಸಂಗೀತ ಮತ್ತು ನೃತ್ಯ ಕಲಾ ಶಾಲಾ ವಿದ್ಯಾರ್ಥಿಗಳು ನಡೆಸಿಕೊಟ್ಟ ನೃತ್ಯದ ಒಂದು ದೃಶ್ಯ.

ದಾವಣಗೆರೆ,ಏ.2- ಸ್ಥಳೀಯ ಶ್ರೀ ಶಾರದಾ ಸಂಗೀತ ಮತ್ತು ನೃತ್ಯ ಕಲಾ ಶಾಲೆ ವತಿಯಿಂದ ನೃತ್ಯ ಕ್ಷೇತ್ರದ ಧ್ರುವತಾರೆ ದಿ. ರುಕ್ಮಿಣಿದೇವಿ ಅರುಂಡೇಲ್ ಅವರ ಸಂಸ್ಮರಣೆ ಅಂಗವಾಗಿ ನಗರದ ಈಶ್ವರಮ್ಮ ಶಾಲಾ ಆವರಣದಲ್ಲಿ ನೃತ್ಯ ಸಮರ್ಪಣಾ ಕಾರ್ಯಕ್ರಮವು ಕಳೆದ ವಾರ ನಡೆಯಿತು.

ಈಶ್ವರಮ್ಮ ಟ್ರಸ್ಟ್ ಅಧ್ಯಕ್ಷರಾದ ಶ್ರೀಮತಿ ಉಷಾ ರಂಗನಾಥ್ ಅವರ ಅಧ್ಯಕ್ಷತೆಯಲ್ಲಿ ಏರ್ಪಾಡಾಗಿದ್ದ ಈ ಕಾರ್ಯಕ್ರಮದಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಇ.ಎಂ. ಮಂಜುನಾಥ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು.

ಇದೇ ಸಂದರ್ಭದಲ್ಲಿ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ನಿವೃತ್ತ ಪ್ರಾಂಶುಪಾಲ ಡಾ. ಬಿ.ಟಿ. ಅಚ್ಯುತ್ ಮತ್ತು ಶ್ರೀಮತಿ ನಳಿನಿ ಅಚ್ಯುತ್ ದಂಪತಿಯನ್ನು ಗೌರವಪೂರ್ವಕವಾಗಿ ಅಭಿನಂದಿಸಲಾಯಿತು.

ಭರತ ನಾಟ್ಯ ವಿದ್ವತ್ ಅಂತಿಮ ವಿಭಾಗದಲ್ಲಿ ಅತೀ ಹೆಚ್ಚು ಅಂಕ ಪಡೆದ ಶ್ರೀ ಶಾರದಾ ಸಂಗೀತ ಮತ್ತು ನೃತ್ಯ ಕಲಾ ಶಾಲೆಯ ವಿದ್ಯಾರ್ಥಿ - ಶ್ರೀಮತಿ ಪೂರ್ಣಿಮಾ ಮತ್ತು ರಾಜಗೋಪಾಲ ಭಾಗವತ ದಂಪತಿ ಪುತ್ರ ಚಿ. ವಿಶ್ವಂಬರ ಆರ್. ಭಾಗವತ, ಭರತ ನಾಟ್ಯ ವಿದ್ವತ್ ಪೂರ್ವ ವಿಭಾಗದಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿನಿ - ಶ್ರೀಮತಿ ರೇಣುಕಾ ಮತ್ತು ಬಸವರಾಜ್ ದಂಪತಿ ಪುತ್ರಿ ಕು. ಜ್ಯೋತಿ, ಭರತ ನಾಟ್ಯ ಸೀನಿಯರ್ ವಿಭಾಗದಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿ - ಶ್ರೀಮತಿ ಭುವನೇಶ್ವರಿ ಮತ್ತು ಭೋಜರಾಜ ದಂಪತಿ ಪುತ್ರಿ ಕು. ಬಿ.ಆರ್. ಅಂಜಲಿ ಅವರುಗಳನ್ನು ಸಮಾರಂಭದಲ್ಲಿ ಸನ್ಮಾನಿಸಿ, ಗೌರವಿಸಲಾಯಿತು.

ಶ್ರೀ ಶಾರದಾ ಸಂಗೀತ ಮತ್ತು ನೃತ್ಯ ಕಲಾ ಶಾಲೆ ವಿದುಷಿ ಶ್ರೀಮತಿ ಪೂರ್ಣಿಮಾ ಭಾಗವತ್ ಸ್ವಾಗತಿಸಿದರು. ಶ್ರೀ ಶಾರದಾ ಸಂಗೀತ ಮತ್ತು ನೃತ್ಯ ಕಲಾ ಶಾಲೆ ವಿದ್ವಾನ್ ರಾಜಗೋಪಾಲ ಭಾಗವತ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಎಲ್‌ಐಸಿ ಅಭಿವೃದ್ಧಿ ಅಧಿಕಾರಿ ಶ್ರೀಕಾಂತ್ ಭಟ್ ಕಾರ್ಯಕ್ರಮ ನಿರೂಪಿಸಿದರು.



## ಶಿರಮಗೊಂಡನಹಳ್ಳಿಯಲ್ಲಿ ಇಂದು ರಥೋತ್ಸವ

ದಾವಣಗೆರೆ - ಶಿರಮಗೊಂಡನಹಳ್ಳಿ ಗ್ರಾಮದ ಶ್ರೀ ಚನ್ನಬಸವೇಶ್ವರ ಸ್ವಾಮಿ ರಥೋತ್ಸವ ಇಂದು ರಾತ್ರಿ 8ಕ್ಕೆ ನಡೆಯಲಿದೆ. ಭಕ್ತಾದಿಗಳಿಗೆ ಶ್ರೀ ಚನ್ನಬಸವೇಶ್ವರ ದಾಸೋಹ ಸಮಿತಿಯಿಂದ ಬೆಳಿಗ್ಗೆ 8.30ರಿಂದ ಮಧ್ಯಾಹ್ನ 2 ರವರೆಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

## ಬಸವಣ್ಣ ಕಾಯ ಕೈಲಾಸವೆಂದು ಹೇಳಿದರು

### ಕಾಯಕವೇ ಕೈಲಾಸವೆಂದು ಹೇಳಿದವರು ಆಯ್ದಕ್ಕಿ ಲಕ್ಕಮ್ಮ



ರಾಣೇಬೆನ್ನೂರು, ಏ. 2 - ಬಸವಣ್ಣ ಕಾಯ ಕೈಲಾಸವೆಂದು ಹೇಳಿದರು. ಕಾಯಕವೇ ಕೈಲಾಸ ವೆಂದು ಹೇಳಿದವರು ಆಯ್ದಕ್ಕಿ ಲಕ್ಕಮ್ಮ, ಬಸವಣ್ಣ ಅಲ್ಲ ಎಂದು ಇಲ್ಲಿನ ನಗರಸಭೆ ಕ್ರೀಡಾಂಗಣ ದಲ್ಲಿ ನಡೆದಿರುವ ಪ್ರವಚನದಲ್ಲಿ ತೋಂಟದಾರ್ಯ ಮಠದ ಶ್ರೀ ನಿಜಗುಣಾನಂದ ಪ್ರಭು ಸ್ವಾಮೀಜಿ ಹೇಳಿದರು.

ದ್ವೇಷ,ಅಸೂಯೆ, ಮೋಸ, ವಂಚನೆ ಯಂತ ವಿಕಾರಗಳಿಂದ ದೂರವಿದ್ದು ಕಾಯ ವನ್ನ ಕಾಯಕದತ್ತ ಕೊಂಡೊಯ್ದರೆ ಕೈಲಾಸ ಕಾಣಬಹುದು ಎನ್ನುವ ಅರಿವು ಕಂಡು ಕೊಂಡ ಶರಣೆ ಆಯ್ದಕ್ಕಿ ಲಕ್ಕಮ್ಮ ಕಾಯಕವೇ ಕೈಲಾಸ ವೆಂದರು ಎಂದು ಸ್ವಾಮೀಜಿ ವಿವರಿಸಿದರು.

ಜಾತಿ ವ್ಯವಸ್ಥೆಯ ವಿರುದ್ಧವೇ ಕ್ರಾಂತಿ ಸಾರಿ, ಅನುಭವ ಮಂಟಪ ದಲ್ಲಿ ಎಲ್ಲರನ್ನೂ ಸೇರಿಸಿ ನಾವೆಲ್ಲ ಒಂದು ಎನ್ನುವ ತತ್ವಾದರ್ಶಗಳನ್ನು ಜಗತ್ತಿಗೆ ನೀಡಿದ ಶರಣರನ್ನ, ದಾಸರನ್ನ, ಮಹಾತ್ಮರನ್ನ ಜಾತಿಗೆ ಮೀಸಲಾಗಿಸಿ, ಅವರ ತತ್ವ, ಸಿದ್ಧಾಂತ ಗಳನ್ನ ಹಾಳುಮಾಡಲಾಗುತ್ತಿದೆ. ಕುಹಕತನ ದಿಂದ ಹಾಳಾಗುತ್ತಿರುವ ಭಾರತ ಉಳಿಸಲು ಶರಣರ ತತ್ವಾದರ್ಶಗಳಿಂದ ಮಾತ್ರ ಸಾಧ್ಯ ಎಂದು ಸ್ವಾಮೀಜಿ ಖಡಕ್ಕಾಗಿ ನುಡಿದರು.

## ಮಹಾವೀರ ಜಯಂತಿ : ನಾಳೆ ಮಾಂಸ ಮಾರಾಟ ನಿಷೇಧ

ದಾವಣಗೆರೆ, ಏ. 2- ನಾಡಿದ್ದು ದಿನಾಂಕ 4ರ ಮಂಗಳವಾರ ಆಚರಿಸುವ ಮಹಾವೀರ ಜಯಂತಿ ಪ್ರಯುಕ್ತ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರಾಣಿ ವಧೆ, ಪ್ರಾಣಿ ಮಾಂಸ ಹಾಗೂ ಮೀನಿನ ಮಾಂಸ ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ. ಮಾಂಸ ಉದ್ದಿಮೆದಾರರು ಅಂದು ಮಾಂಸ ಮಾರಾಟ ಮಾಡಬಾರದು. ಉಲ್ಲಂಘಿಸಿದಲ್ಲಿ ಮಹಾನಗರ ಪಾಲಿಕೆ ಕಾಯ್ದೆ ಪ್ರಕಾರ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಆರೋಗ್ಯಾಧಿಕಾರಿಗಳು ಎಚ್ಚರಿಸಿದ್ದಾರೆ.



## ನೂತನ ಕೆಳ ಸೇತುವೆ ಸಂಚಾರ ಮುಕ್ತ

ದಾವಣಗೆರೆ ಅಶೋಕ ಚಿತ್ರಮಂದಿರದ ಬಳಿಯ ರೈಲ್ವೇ ಕೆಳ ಸೇತುವೆ ಸಂಚಾರಕ್ಕೆ ಮುಕ್ತವಾಗಿದ್ದು, ವಾಹನಗಳ ಓಡಾಟ ಆರಂಭವಾಗಿದೆ.

## 24 ಕ್ಕೆ ವಕೀಲರ ಸಂಘದ ಚುನಾವಣೆ

ದಾವಣಗೆರೆ, ಏ.2- ಸ್ಥಳೀಯ ವಕೀಲರ ಸಂಘದ 2023-24 ಮತ್ತು 2024-25 ನೇ ಸಾಲಿನ ದ್ವೈವಾರ್ಷಿಕ ಸಾಲಿಗೆ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿ, ಸಹ ಕಾರ್ಯದರ್ಶಿ ಮತ್ತು ಒಬ್ಬ ಮಹಿಳಾ ಸದಸ್ಯೆ ಸೇರಿ, ಒಟ್ಟು 9 ಜನ ಕಾರ್ಯಕಾರಿ ಸಮಿತಿಯ ಸದಸ್ಯರ ಸ್ಥಾನಗಳಿಗಾಗಿ ಇದೇ ದಿನಾಂಕ 24 ರಂದು ಚುನಾವಣೆ ನಿಗದಿಯಾಗಿದೆ.

ಚುನಾವಣೆಯಲ್ಲಿ ಸ್ಪರ್ಧಿಸುವ ದಾವಣಗೆರೆ ವಕೀಲರ ಸಂಘದ ಆಜೀವ ಸದಸ್ಯರು ಇಂದಿನಿಂದ ಇದೇ ದಿನಾಂಕ 11 ರೊಳಗೆ ಅರ್ಜಿಯನ್ನು ಪಡೆದು ನಾಮಪತ್ರ ಸಲ್ಲಿಸಬಹುದಾಗಿದೆ ಎಂದು ಮುಖ್ಯ ಚುನಾವಣಾಧಿಕಾರಿ ಎಲ್. ದಯಾನಂದ ತಿಳಿಸಿದ್ದಾರೆ.


Vishnu Educational Trust (R)

Mayur Global School

#186/6, off, NH-4, Banashankari Layout,
Davangere-577004

Affiliation No. KA 431 | ICSE Curriculum




Olympiad exams from 1st to 10th

An Ethical, Cultural and Value Based Education



ADMISSION OPEN 2023-24

Nursery to Grade X

"The best ICSE affiliated school in Davangere"

Contact : 8050553355 /6366638587


## ಪಾರ್ಶ್ವನಾಥ ಜಿನ ಮಂದಿರದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ



ದಾವಣಗೆರೆ, ಏ. 2 - ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಪದ್ಮಾಂಬ ಮಹಿಳಾ ಸಮಾಜದ ವತಿಯಿಂದ ಪಾರ್ಶ್ವನಾಥ ಜಿನ ಮಂದಿರದಲ್ಲಿ ಧಾರ್ಮಿಕ ಹಾಗೂ ಸಮಾಜಿಕ ಕ್ಷೇತ್ರದಲ್ಲಿ ಸಾಧನೆ ಮಾಡುತ್ತಿರುವ ರತ್ನ ವಸಂತ್ ಕುಮಾರ್ ಹಾಗೂ ಪದ್ಮಾ ಸುರೇಶ್ ಅವರಿಗೆ ಸಾಧನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಪದಾಧಿಕಾರಿಗಳಾದ ಉಷಾ ಜಯಪ್ರಕಾಶ್, ಕವಿತಾ ಧರಣೇಂದ್ರ ಪ್ರಸಾದ್, ವರ್ಧಾಹುಲಿ, ಕುಸುಮಾ ಸುನೀಲ್, ಸುಷ್ಮಾ ಮೋಹನ್, ಚೇತನಾ ಪದ್ಮರಾಜ್ ಇವರ ಉಪಸ್ಥಿತಿಯಲ್ಲಿ ಕಾರ್ಯಕ್ರಮ ನೆರವೇರಿತು.

## ಶಾಸಕ ಶಿವಲಿಂಗೇಗೌಡ ರಾಜೀನಾಮೆ

**ಜೆಡಿಎಸ್ ಬಿಟ್ಟು ಕಾಂಗ್ರೆಸ್‌ಗೆ ಸೇರ್ಪಡೆ**

ಬೆಂಗಳೂರು, ಏ. 2 - ಅರಸಿಕೆರೆ ಜೆಡಿಎಸ್ ಶಾಸಕ ಶಿವಲಿಂಗೇಗೌಡ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಶಿರಸಿಯಲ್ಲಿರುವ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ನಿವಾಸಕ್ಕೆ ಭೇಟಿ ನೀಡಿ ರಾಜೀನಾಮೆ ಪತ್ರ ಸಲ್ಲಿಸಿದರು.

ರಾಜೀನಾಮೆ ಬಳಿಕ ಮಾತನಾಡಿದ ಶಿವಲಿಂಗೇಗೌಡ, ಪಕ್ಷದಲ್ಲಿನ ಭಿನ್ನಾಭಿಪ್ರಾಯದಿಂದ ರಾಜೀನಾಮೆ ನೀಡಿದ್ದೇನೆ. ಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಕಣಕ್ಕಿಳಿಯುತ್ತೇನೆ ಎಂದು ಹೇಳಿದರು. ಒಂದೆರಡು ದಿನಗಳಲ್ಲೇ ಅವರು ಅಧಿಕೃತವಾಗಿ ಕಾಂಗ್ರೆಸ್ ಸೇರುವ ಸಾಧ್ಯತೆ ಇದೆ.


॥ ಶ್ರೀ ಗುರು ಕೊಟ್ಟೂರೇಶ್ವರ ಪ್ರಸನ್ನ ॥

ನಾಲ್ಕನೇ ವರ್ಷದ ಪುಣ್ಯಸ್ಮರಣೆ



ಜನನ : 1939 | ಲಿಂಗೈಕ್ಯ : 3-4-2019

ದಿ|| ಶ್ರೀಮತಿ ಬಿ.ಆರ್. ಶಾಂತಮ್ಮನವರು

ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷಗಳಾದವು.
ನಿಮ್ಮ ನನಪು ನಮ್ಮೆಲ್ಲರ ಹೃದಯಗಳಲ್ಲಿ ಹಚ್ಚ ಹಸಿರಾಗಿದೆ.
ಹುಟ್ಟು ಸಾವುಗಳ ನಡುವೆ ನೀವು ಬಿಟ್ಟು
ಹೋದ ಆದರ್ಶಗಳೇ ನಮಗೆ ದಾರಿ ದೀಪ.

ಸದಾ ನಿಮ್ಮನ್ನು ಸ್ಮರಿಸುತ್ತಿರುವ

ಪತಿ : ಶ್ರೀ ಬಿ.ಎಂ. ರುದ್ರಮುನಿ, ನಿವೃತ್ತ ಕೆ.ಇ.ಬಿ. ಚೀಫ್ ಇಂಜಿನಿಯರ್

ಪುತ್ರ : ಶ್ರೀ ಬಿ.ಆರ್. ಪ್ರಭುದೇವ, ಶ್ರೀಮತಿ ಮಧು

ಪುತ್ರಿ : ಶ್ರೀಮತಿ ಕಲ್ಪನಾ, ಶ್ರೀ ಬಸವರಾಜ್ ಹಿರೇಮಠ

ಮೊಮ್ಮಕ್ಕಳು : ನವ್ಯ, ಕಾರ್ತಿಕ್, ವರುಣ್, ವಿಕಾಸ್

ಬನ್ನಿಕಲ್‌ಮಠದ ವಂಶಸ್ಥರು ಹಾಗೂ ಬಂಧು-ಮಿತ್ರರು.


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte